ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 29 ಶುಕ್ರವಾರ 2025

₹4

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 132 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಗೌರಿ ಹಬ್ಬದಂದು ಮಹಿಳೆಯರಿಗೆ ಬಾಗಿನ



ಗೌರಿ ಹಬ್ಬದ ಪ್ರಯುಕ್ತ ಮೈಸೂರಿನ ಪಡುವಾರಹಳ್ಳಿ ಬಡವರ ಬಂಧು ಅಭಿಮಾನಿಗಳ ಸಂಘದ ವತಿಯಿಂದ ಬಸವನಪುರ ಗ್ರಾಮದ ಮಹಿಳೆಯರಿಗೆ ಟೈಲರಿಂಗ್ ತರಬೇತಿ ಪ್ರಮಾಣ ಪತ್ರದೊಂದಿಗೆ ಬಾಗಿನ ನೀಡಲಾಯಿತು.

ಮೈಸೂರು,ಆ.28–ಗೌರಿ ಹಬ್ಬದ ಪ್ರಯುಕ್ತ ಮೈಸೂರಿನ ಪಡುವಾರಹಳ್ಳಿ ಬಡವರ ಬಂಧು ಅಭಿಮಾನಿಗಳ ಸಂಘದಿಂದ ಬಸವನಪುರ ಗ್ರಾಮದ ಮಹಿಳೆಯರಿಗೆ ಟೈಲರಿಂಗ್ ತರಬೇತಿ ಪ್ರಮಾಣ ಪತ್ರ ದೊಂದಿಗೆ ಬಾಗಿನ ನೀಡಲಾಯಿತು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರ ಪತ್ನಿ ಶ್ರೀಮತಿ ಗೌರಿ ಹರೀಶ್ ಹಾಗೂ ನಗರಪಾಲಿಕೆ ಮಾಜಿ ಸದಸ್ಯೆ ಭಾಗ್ಯ ಮಾದೇಶ್, ಪ್ರಭಾ ಟಾಕೀಸ್ ಮಾಲೀಕರಾದ ತೇಜಸ್ವಿನಿ ಹಾಗೂ ಸೌಭಾಗ್ಯ ಗಿರೀಶ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತರಬೇತಿ ಪಡೆದಿರುವ ಮಹಿಳೆಯರಿಗೆ ಶುಭ ಹಾರೈಸಿದರು.

ಈ ವೇಳೆ ಭಾಗ್ಯ ಮಾದೇಶ್ ಮಾತನಾಡಿ, ಪಡುವಾರಹಳ್ಳಿ ಬಡವರ ಬಂಧು ಅಭಿಮಾನಿಗಳ ಸಂಘದ ಅಧ್ಯಕ್ಷ ಪಾಪಣ್ಣ ಮತ್ತು ಸುಣ್ಣದಕೇರಿ ರಮೇಶ್ ಅವರು ಯಾವುದೇ ಕಾರ್ಯಕ್ರಮವಾದರೂ ತುಂಬಾ ಅಚ್ಚುಕಟ್ಟಾಗಿ ಮಾಡುತ್ತಾರೆ. ಅದರಲ್ಲೂ ಬಡವರ್ಗಕ್ಕೆ ನೆರವಾಗುವಂತಹ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ. ಇಂತಹ ಸಂದರ್ಭಗಳಲ್ಲಿ ನಾವೂ ಭಾಗಿಯಾಗಿರುವುದು ಸಂತೋಷ ತಂದಿದೆ ಎಂದರು.

ಗೌರಿ ಹರೀಶ್‌ಗೌಡ ಮಾತನಾಡಿ, ಬಡ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ, ಅವರಿಗೆ ಪ್ರಮಾಣ ಪತ್ರ ಕಲ್ಪಿಸಿಕೊಡುವುದರ ಮೂಲಕ ಸರ್ಕಾರಿ ಸೌಲಭ್ಯ ಪಡೆಯಲು ಅನುವು ಮಾಡಿಕೊಡಲಾಗಿದೆ. ಪಾಪಣ್ಣ ಹಾಗೂ ರಮೇಶ್ ಅವರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಇಂತಹ ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ಅನುಕರಣೀಯ ಎಂದು ಬಣ್ಣಿಸಿದರು.

ಈ ವೇಳೆ ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಹಿರಿಯರಾದ ಗುರುಸ್ವಾಮಿ, ಮಾದೇಶ್, ಶಿವು, ಮುತ್ತಣ್ಣ, ಮಾದೇವ, ರಂಗ, ಪ್ರದೀಪ್‌ಕುಮಾರ್, ಬಾಲು ಮತ್ತಿತರರು ಉಪಸ್ಥಿತರಿದ್ದರು.

ಹಿಂದೂ–ಮುಸ್ಲಿಂ ಒಟ್ಟಾಗಿ ಗಣೇಶ ಹಬ್ಬ ಆಚರಿಸಿ ಸೌಹಾರ್ದತೆ ಸಂದೇಶ



ಮೈಸೂರು ಕೆ.ಆರ್.ಮೊಹಲ್ಲಾ ತೊಗರಿಬೀದಿಯಲ್ಲಿ ಪಂಚಮುಖಿ ವಿನಾಯಕ ಯುವಕರ ಬಳಗದಿಂದ ಗಣೇಶ ಹಬ್ಬ ಆಚರಿಸಿದರು.

ಮೈಸೂರು,ಆ.28–ಮೈಸೂರಿನ ಕೆ.ಆರ್. ಮೊಹಲ್ಲಾ ತೊಗರಿ ಬೀದಿಯಲ್ಲಿ ಪಂಚಮುಖಿ ವಿನಾಯಕ ಯುವಕರ ಬಳಗದ ಯುವಕರು ತಮ್ಮ ಮುಸಲ್ಮಾನ್ ಸ್ನೇಹಿತರ ಜೊತೆ ಸೇರಿ ವಿಘ್ನ ವಿನಾಶಕನಿಗೆ ಪೂಜೆ ಸಲ್ಲಿಸುವ ಮೂಲಕ ಮಾದರಿಯಾದರು. ಪೂಜೆಯ ಬಳಿಕ ಪ್ರಸಾದ ಹಾಗೂ ನೈವೇದ್ಯವನ್ನು ಪರಸ್ಪರ ತಿನ್ನಿಸಿ ಖುಷಿಪಟ್ಟರು.

ಪರಸ್ಪರ ಗಣೇಶ ಹಾಗೂ ಮೊಹರಂ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಹಿಂದೂ ಮುಸ್ಲಿಂ ಭಾಯಿ ...ಭಾಯಿ.. ಸಂದೇಶ ರವಾನಿಸಿದರು.

ಈ ವೇಳೆ ಪಂಚಮುಖಿ ವಿನಾಯಕ ಯುವಕರ ಬಳಗದ ಅಧ್ಯಕ್ಷ ರವಿನಂದನ್ ಮಾತನಾಡಿ, ಇತಿಹಾಸದಲ್ಲಿ ಎರಡು ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ದವಾಗಿ ಆಚರಣೆ ಮಾಡುವ ಪದ್ಧತಿ ನಮ್ಮ ನಾಡಿನಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದ ಎರಡು ಸಮಾಜದಲ್ಲಿ ಶಾಂತಿಯನ್ನು ಕದಡುವ ಯತ್ನಗಳು ನಡೆಯುತ್ತಿದ್ದು, ಆದ್ದರಿಂದ ಎರಡು ಸಮುದಾಯದ ಮುಖಂಡರು ಈ ಬಗ್ಗೆ ಲಕ್ಷ್ಯ ವಹಿಸಿ ಹಬ್ಬಗಳನ್ನು ಆಚರಣೆ ಮಾಡಲು ಮುಂದಾಗಬೇಕು. ಈ ಯುವಕರು ಒಟ್ಟಾಗಿ ಸೌಹಾರ್ದತೆಯಿಂದ ಹಬ್ಬವನ್ನು ಆಚರಿಸುತ್ತಾ ಬಂದಿರುವುದು ಬಹಳ ಸಂತಸದ ವಿಚಾರ. ಇದೇ ರೀತಿ ಸೌಹಾರ್ದತೆ ಆಚರಣೆ ಪ್ರತಿ ಜಿಲ್ಲೆಯಲ್ಲಿ ಆಗಬೇಕು ಎಂದರು.

ಮುಸಲ್ಮಾನ್ ಬಾಂಧವರಾದ ಗುಲ್ಸಿಯನ್ ಪಾಷಾ, ಅಮೀನ್, ಕೊಹಿಲ್, ಅಹಮದ್ ಜೂನಿಯರ್, ಮುಶೀರ್, ಸಲ್ಮಾನ್ ಪಾಷಾ, ಸಮೀರ್, ಕೆಪಿಸಿಸಿ ಸದಸ್ಯರಾದ ನಜರ್ಬಾದ್ ನಟರಾಜ್, ಜಿ.ರಾಘವೇಂದ್ರ, ಶ್ರೀ ಪಂಚಮುಖಿ ವಿನಾಯಕ ಯುವಕರ ಬಳಗದ ಅಧ್ಯಕ್ಷ ರವಿನಂದನ್, ರವಿತೇಜ, ಗಿರೀಶ್, ಹರ್ಷ, ಸುಭಾಷ್, ಉಮೇಶ್ ಮತ್ತು ಇನ್ನಿತರ ಯುವಕ ಮಿತ್ರರು ಹಾಜರಿದ್ದರು.

ಗೆಜ್ಜಗಳ್ಳಿಯ ಶ್ರೀ ವಿನಾಯಕ ಗೆಳೆಯರ ಬಳಗದಿಂದ ಗೌರಿ–ಗಣೇಶ ಪ್ರತಿಷ್ಠಾಪನೆ



ಗೆಜ್ಜಗಳ್ಳಿಯ ಶ್ರೀ ವಿನಾಯಕ ಗೆಳೆಯರ ಬಳಗದಿಂದ 7ನೇ ವರ್ಷದ ಗೌರಿ ಗಣೇಶ ಪ್ರತಿಷ್ಠಾಪನೆ ಮಾಡಲಾಯಿತು.

ಛತ್ರಪತಿ ಶಿವಾಜಿ ಮಹಾರಾಜ್‌ರಂತೆ ಕಂಗೊಳಿಸಿದ ಗಣೇಶ ಮೂರ್ತಿ



ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾ ದೇವಿ ದೇವಸ್ಥಾನ ಹಿಂಭಾಗದ ನಿವಾಸಿ, ಕಲಾವಿದ ವರುಣ್ ಮತ್ತು ತಂಡದವರು ಛತ್ರಪತಿ ಶಿವಾಜಿ ಮಹಾರಾಜರ ಮಾದರಿಯ ಗಣೇಶನನ್ನು ನಿರ್ಮಿಸಿ ಪ್ರತಿಷ್ಠಾಪನೆ ಮಾಡಿದ್ದಾರೆ.



ಗಣೇಶೋತ್ಸವ....

ಸುಭಾಷ್‌ನಗರದ ಮಾತೃಭೂಮಿ ಯುವಸೇವೆಯಿಂದ ಆಯೋಜಿಸಿದ್ದ 33ನೇ ವರ್ಷದ ಗಣೇಶೋತ್ಸವದಲ್ಲಿ ಪಾಲ್ಗೊಂಡಿದ್ದ ಸಂಸದ ಯದುವೀರ್ ಒಡೆಯರ್ ಅವರನ್ನು ಅಭಿನಂದಿಸಲಾಯಿತು. ಮುಖಂಡರಾದ ಜೋಗಿ ಸತೀಶ್, ಮಂಜು, ರಾಕೇಶ್, ಶ್ಯಾಮ್, ಸಂಜು, ನಾಗರಾಜು, ಕಿರಣ್, ವಿನೋದ್, ಪುನೀತ್, ಸೂರಜ್, ಅಪ್ಪು, ಇಂದು, ಮೊಹಲ್ಲಾ ನಿವಾಸಿಗಳು ಉಪಸ್ಥಿತರಿದ್ದರು.

ಸಿಗ್ಮಾ ಆಸ್ಪತ್ರೆಯಲ್ಲಿ ಗಣೇಶ ಪೂಜೆ...



ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಬುಧವಾರ ಭಕ್ತಿ ಭಾವದಿಂದ ಗಣೇಶ ಪೂಜೆ ನೆರವೇರಿಸಲಾಯಿತು. ಈ ವೇಳೆ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ಹಿರಿಯ ಕಿಡ್ನಿ ಕಸಿ ತಜ್ಞ, ಆಸ್ಪತ್ರೆ ನಿರ್ದೇಶಕ ಡಾ.ಕೆ.ಎಂ.ಮಾದಪ್ಪ, ಹಿರಿಯ ಹೃದಯ ಲ್ಯಾಪ್ರಾಸ್ಕೋಪಿಕ್ ಶಸ್ತ್ರಜ್ಞ ಡಾ.ಬಿ.ಜೆ.ಶರತ್‌ಚಂದ್ರ, ಮೂಳೆ ಶಸ್ತ್ರ ತಜ್ಞ ಡಾ.ದೇವಾಂಶು ಗುಪ್ತ, 'ಮೈಸೂರು ಮಿತ್ರ' ದಿನಪತ್ರಿಕೆಯ ವಾರ ಭವಿಷ್ಯ ಅಂಕಣಕಾರ ಕೇಶವಮೂರ್ತಿ ದಂಪತಿ ಹಾಗೂ ಆಸ್ಪತ್ರೆಯ ವೈದ್ಯರು, ಶುಶ್ರೂಷಕರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ರಿಷಬ್ ಸಿದ್ಧಿ ಲೇಔಟ್‌ನಲ್ಲಿ ಗಣಪತಿ ಪೂಜೆ



ಮೈಸೂರಿನ ಕೇರ್ಗಳ್ಳಿಯಲ್ಲಿರುವ ರಿಷಬ್ ಸಿದ್ಧಿ ಲೇಔಟ್‌ನಲ್ಲಿ ಬುಧವಾರ ಗೌರಿ–ಗಣೇಶ ಹಬ್ಬದ ಪ್ರಯುಕ್ತ ಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜಿಸಿ, ಪ್ರಸಾದ ವಿನಿಯೋಗ ಮಾಡಲಾಯಿತು. ಅಂದೇ ಸಂಜೆ ಬಡಾವಣೆಯಲ್ಲಿ ಮೆರವಣಿಗೆ ಮೂಲಕ ತೆರಳಿ ವಿಸರ್ಜನೆ ಮಾಡಲಾಯಿತು.

ಗಣೇಶ ಮೂರ್ತಿ ಪೂಜಾ ಮಹೋತ್ಸವ...



ಮೈಸೂರಿನ ಕುವೆಂಪುನಗರ ಕುವೆಂಪು ಶಾಲೆ ಹಿಂಭಾಗದಲ್ಲಿ ಶ್ರೀ ವಿನಾಯಕ ಭಕ್ತ ಮಂಡಳಿ ವತಿಯಿಂದ ಏರ್ಪಡಿಸಿದ್ದ ಗಣೇಶ ಮೂರ್ತಿ ಪೂಜಾ ಮಹೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ವೇಳೆ ಮುಖಂಡರಾದ ಸುಮುಖ್, ಜೈಂಕಾರ್, ಪವನ್, ಹರ್ಷಿತ್, ಕಾರ್ತಿಕ್ ಮತ್ತಿತರರು ಉಪಸ್ಥಿತರಿದ್ದರು.



ವಿನಾಯಕ ಚತುರ್ಥಿ

ವಿಶ್ವಪ್ರಜ್ಞ ಶಾಲೆಯಲ್ಲಿ ವಿನಾಯಕ ಚತುರ್ಥಿಯ ಪೂಜಾ ಕಾರ್ಯಕ್ರಮ ನೆರವೇರಿತು. ಶಾಲಾ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಕೃಷ್ಣಸ್ವಾಮಿ, ಕಾರ್ಯದರ್ಶಿ ಮಹೇಂದ್ರ, ಮುಖ್ಯೋಪಾಧ್ಯಾಯಿನಿ ಜಿ.ಎನ್.ಸುಧಾ, ಶಿಕ್ಷಕರು, ವಿದ್ಯಾರ್ಥಿಗಳು ಈ ವೇಳೆ ಉಪಸ್ಥಿತರಿದ್ದರು.

ಕೇರ್ಗಳ್ಳಿಯಲ್ಲಿ ಗಣಪತಿ ಪ್ರತಿಷ್ಠಾಪನೆ



ಮೈಸೂರು ತಾಲೂಕಿನ ಕೇರ್ಗಳ್ಳಿಯ ಮಾರಿಗುಡಿ ಬಳಿ ಶ್ರೀ ವಿದ್ಯಾ ಗಣಪತಿ ಅಭಿಮನ್ಯು ಯುವಕ ಸಂಘದ ಸದಸ್ಯರು ಗಣಪತಿ ಪ್ರತಿಷ್ಠಾಪಿಸಿ ಪೂಜಿಸಿದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮುಖಂಡರಾದ ನಾಗಣ್ಣ, ಶಿವಪ್ಪ, ಬಸವರಾಜು, ಕೃಷ್ಣ, ಶಿವಣ್ಣ, ಗ್ರಾಮಸ್ಥರು ಹಾಜರಿದ್ದರು.

ಗೌರಿ–ಗಣೇಶ ಮೂರ್ತಿ ಪ್ರತಿಷ್ಠಾಪನೆ



ಮೈಸೂರಿನ ಕೆಬಿಎಲ್ ಸಿಲಿಕಾನ್ ಸಿಟಿ ಬಡಾವಣೆಯಲ್ಲಿರುವ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಗೌರಿ–ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಮಾಡಲಾಯಿತು. ಈ ವೇಳೆ ಸಂಸ್ಥೆಯ ಕಾರ್ಯದರ್ಶಿ, ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಖಜಾಂಚಿ ಮೋಹನ್, ಅಧ್ಯಕ್ಷ ಕೆ.ಎನ್.ಸಂತೋಷ್, ಕಿರಣ್, ವಿವೇಕ್‌ಗೌಡ, ಪುಣ್ಯಶ್ರೀ, ನಿವಾಸಿಗಳಾದ ವೆಂಕಟೇಶ್, ಸಿದ್ದಮಲ್ಲಪ್ಪ, ಸುರೇಶ್, ಚೇತನ್, ನಿತೀನ್ ಕುಮಾರ್, ರಾಜು, ರತ್ನಾಕರ್ ಭಾರದ್ವಜ್, ಡಾ.ಸ್ವಾಮಿ ಇದ್ದರು.

ಆ.31ರಂದು ವಾರ್ಷಿಕ ಮಹಾಸಭೆ

ಮೈಸೂರು: ಮೈಸೂರು–ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಶ್ರೀ ಗುರುಮಲ್ಲೇಶ್ವರ ಪದವೀಧರರ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಅಶ್ವಿನ್ ಆರ್.ಪಾಳೇಗಾರ್ ಅಧ್ಯಕ್ಷತೆಯಲ್ಲಿ ಆ.31ರಂದು ಬೆಳಗ್ಗೆ 11 ಗಂಟೆಗೆ ಶ್ರೀ ನಟರಾಜ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಮೆಂಕಾ ಪ್ರತಾಪ್ ಗುರು



ಮೈಸೂರು, ಆ. 28– ಮೈಸೂರಿನ ಯಾದವಗಿರಿ ನಿವಾಸಿ, ಪ್ರೌಢಶಾಲಾ ಶಿಕ್ಷಕಿ ಮತ್ತು ಸಾಮಾಜಿಕ ಕಾರ್ಯಕರ್ತೆ ಮೆಂಕಾ ಪ್ರತಾಪ್ ಗುರು (77) ಬುಧವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತಿ ಲೆಫ್ಟಿನೆಂಟ್ ಕರ್ನಲ್ (ನಿವೃತ್ತ) ಪ್ರತಾಪ್ ಚಂದ್ರ ಗುರು, ಇಬ್ಬರು ಪುತ್ರರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಲ್‌ಹಾಜ್ ಇಕ್ಬಾಲ್ ಅಹಮದ್



ಮೈಸೂರಿನ ಯಾದವಗಿರಿಯ ತಮ್ಮಯ್ಯ ಪಾರ್ಕ್ ಎದುರು, 2ನೇ ಕ್ರಾಸ್, ಮನೆ ನಂ.516ರ ನಿವಾಸಿ ಹಾಗೂ ಮೈಸೂರು ಸೌತ್‌ನಲ್ಲಿರುವ ನ್ಯೂ ಮಾಡ್ರನ್ ಸಾ ಮಿಲ್ ಮಾಲೀಕ ದಿವಂಗತ ಅಬ್ದುಲ್ ಖುದ್ದೂಸ್ ಅವರ ಪುತ್ರ ಅಲ್‌ಹಾಜ್ ಇಕ್ಬಾಲ್ ಅಹಮದ್ (75) ಬುಧವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಶವ ಸಂಸ್ಕಾರ ನಂಜನಗೂಡು ರಸ್ತೆಯಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.08.2025 ಶುಕ್ರವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಮಧು ಮೇಹದ ಗಾಯಗಳಿಗೆ ಚಿಕಿತ್ಸೆ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃದ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಸಂತ ಫಿಲೋಮಿನಾ ಪದವಿ ಕಾಲೇಜು:** ಎರಡು ದಿನಗಳ ಟೆಕ್ನೋ ಎಕ್ಸ್ಪೋ ತಂತ್ರಜ್ಞಾನಗಳ ಪ್ರದರ್ಶನ, ಮುಖ್ಯ ಅತಿಥಿಗಳು: ಎಲ್ ಅಂಡ್ ಟಿ ಕಂಪನಿಯ ವಿತರಣಾ ಮುಖ್ಯಸ್ಥ ಪ್ರಭು ವಿಜಯಕುಮಾರ್, ಅಧ್ಯಕ್ಷತೆ : ಡಾ. ಲೂರ್ದು ಪ್ರಸಾದ್, ಉಪಸ್ಥಿತರು : ಆಡಳಿತಾಧಿಕಾರಿ ಫಾ. ಜ್ಞಾನ ಪ್ರಾಸಂ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಸದ್ವಿದ್ಯಾ ಪ್ರೌಢಶಾಲೆ:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮುದುವಟ್ಟು ಬಹುಮಾನಗಳ ವಿತರಣಾ ಸಮಾರಂಭ, ಅಧ್ಯಕ್ಷತೆ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಅಧ್ಯಕ್ಷ ಪ್ರೊ.ಎಂ.ಎಸ್.ಕೆ. ನರಹರಿ ಬಾಬು, ಮುಖ್ಯ ಅತಿಥಿಗಳು: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಸ್ಥಳ: ಟಿ.ಪಿ.ಕೈಲಾಸಂ ರಂಗ ಮಂಟಪ, ಬೆಳಗ್ಗೆ 10.15ಕ್ಕೆ.

■ **ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗ:** ಉದ್ಘಾಟನಾ ಸಮಾರಂಭ, ಉಪಸ್ಥಿತರು: ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಶಾಸಕ ಜಿ.ಡಿ.ಹರೀಶ್‌ಗೌಡ, ಬಿಜೆಪಿ ಮುಖಂಡ ಕವೀಶ್‌ಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಸ್ಥಳ: ರೋಟರಿ ಜಾವಾ ಸಭಾಂಗಣ, ಮುಡಾ ಕಚೇರಿ ಎದುರು, ಬೆಳಗ್ಗೆ 10.30ಕ್ಕೆ.

■ **ಅನ್ವೇಷಣಾ ಸೇವಾ ಟ್ರಸ್ಟ್:** ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 110ನೇ ಹುಟ್ಟುಹಬ್ಬದ ಪ್ರಯುಕ್ತ ಸಾಧಕರಿಗೆ ಧ್ವನಿ ಕೊಟ್ಟ ಧಣಿ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ : ತುಮಕೂರು ವಿವಿ ವಿಶ್ರಾಂತ ಕುಲಪತಿ ಡಾ.ವೈ.ಎಸ್.ಸಿದ್ದೇಗೌಡ, ಮುಖ್ಯ ಅತಿಥಿಗಳು: ಅನ್ವೇಷಣಾ ಸೇವಾ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಜಿ.ಆರ್.ಅರಸ್, ಅಧ್ಯಕ್ಷತೆ: ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷ ವಿಜಯಲಕ್ಷ್ಮಿ ಅರಸ್, ಅರಸು ಜಾಗೃತಿ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಎಚ್.ಎ.ವೆಂಕಟೇಶ್, ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥರಾಜೇ ಅರಸ್, ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಅವರಿಂದ ಡಿ.ದೇವರಾಜ ಅರಸು ಅವರ ಸಿದ್ಧಿ ಸಾಧನೆ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 64ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮ, ಸಂಜೆ 5.30 ರಿಂದ ಶ್ರೀ ಚಂದ್ರಶೇಖರ ಆಚಾರ್ ಅವರಿಂದ ರಂಗಗೀತೆಗಳು, ಸಂಜೆ 6.45 ರಿಂದ ವಿದ್ವಾನ್ ನೆಮ್ಮಾರ ಕಣ್ಣನ್ ಮತ್ತು ಆನಂದ ಬ್ರಹ್ಮ ಅವರಿಂದ ನಾದಸ್ವ–ಪಿಟೀಲು ಜುಗಲ್‌ಬಂದಿ, ವಿದುಷಿ ಅಕ್ಕರೈ ಶುಭಲಕ್ಷ್ಮಿ–ಪಿಟೀಲು, ವಿದ್ವಾನ್ ಜಯಚಂದ್ರರಾವ್–ಮೃದಂಗ, ವಿದ್ವಾನ್ ಚಂದ್ರಶೇಖರ ಶರ್ಮಾ–ಘಟಂ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ, ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ : ಡಾ.ಎಂ.ಎನ್. ಚಿಕ್ಕಮಾದು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ. ಪುಷ್ಪಲತಾ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನಮ್ಮ ಆರೋಗ್ಯ ರಾಷ್ಟ್ರೀಯ ನೇತ್ರದಾನ ಪಾಕ್ಷಿಕದ ಸಂದರ್ಭದಲ್ಲಿ ನೇತ್ರದಾನದ ಮಹತ್ವ ಮತ್ತು ಕಣ್ಣುಗಳ ಆರೋಗ್ಯ ರಕ್ಷಣೆ ಕುರಿತು ಡಾ. ಪಲ್ಲವಿ ಪ್ರಭು ಅವರೊಂದಿಗೆ ಮಾತುಕತೆ ನಂತರ ಜೀರ್ಣಾಂಗದ ಆರೋಗ್ಯಕ್ಕೆ ಆಯುರ್ವೇದ ಪರಿಹಾರ ಕುರಿತು ಆಯುರ್ವೇದ ತಜ್ಞರಾದ ಡಾ. ಶ್ರೀಶ ಕೃಷ್ಣ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 9.35 ಇಂದು ಸೇವಾ ನಿವೃತ್ತಿ ಹೊಂದುತ್ತಿರುವ ಮೈಸೂರು ಆಕಾಶವಾಣಿಯ ಕಾರ್ಯಕ್ರಮ ಮುಖ್ಯಸ್ಥರು ಹಾಗೂ ಉಪ ನಿರ್ದೇಶಕರಾದ ಉಮೇಶ್ ಎಸ್. ಎಸ್. ಅವರೊಂದಿಗೆ ಆತ್ಮೀಯ ಸಂವಾದ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ – ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ.ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಕದ್ರಿ ಗೋಪಾಲನಾಥ್– ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ–ಮಹಿಳಾ ಸಾಹಿತ್ಯರಂಗ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ .ಬಿ, ಕೀರ್ತನಾ ವಿ, ಸಹನ, 4.30 ವೃತ್ತಿ ಮಾರ್ಗದರ್ಶನ–ರಾಷ್ಟ್ರೀಯ ಕ್ರೀಡಾದಿನಾಚರಣೆಯ ಸಂದರ್ಭದಲ್ಲಿ ಅಥ್ಲೆಟಿಕ್ಸ್ ಕ್ರೀಡೆಗಳಲ್ಲಿರುವ ಅವಕಾಶಗಳು ಕುರಿತು ರಾಷ್ಟ್ರಮಟ್ಟದ ಅಥ್ಲೆಟಿಕ್ಸ್ ಕೂಟಗಳಲ್ಲಿ ಭಾಗವಹಿಸಿದ್ದ ಮೈಸೂರಿನ ಅಥ್ಲೆಟಿಕ್ ಕೋಚ್ ಸುಮಂತ್ ಕೆ.ಪಿ.ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಕೆ.ಆರ್.ಪೇಟೆ ತಾಲೂಕು ಅಕ್ಕಿ ಹೆಬಾಳು ಹೋಬಳಿ ಅಂಬಿಗರ ಹಳ್ಳಿಯ ದೇವರಾಜೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಚರ್ಚೆ, 8.30 ಹಿಂದಿ ಚಿತ್ರಗೀತೆಗಳು, 9.30 ನಕ್ಷತ್ರ ಲೋಕ–ರಂಗಭೂಮಿ ಕಲಾವಿದೆ ಹಾಗೂ ಚಿತ್ರನಟಿ ಅಕ್ಷತಾ ಪಾಂಡವಪುರ ಅವರೊಂದಿಗೆ ಸಂದರ್ಶನ, ಇವರೊಂದಿಗೆ ಭಾಗವಹಿಸುತ್ತಾರೆ –ಪ್ರಭುಸ್ವಾಮಿ ಮಳೀಮಠ್ ಹಾಗೂ ಶ್ರೀಮಾನ್ ಎಸ್., 10.30 ಸವಿನೆನಪು

■ **ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್:** ವೇಲುಕ್ಕುಡಿ ಶ್ರೀ ರಂಗನಾಥನ್ ಸ್ವಾಮಿಯವರಿಂದ ವೆಂಕಟೇಶ ಸ್ತೋತ್ರ ಕುರಿತು ಉಪನ್ಯಾಸ, ಸ್ಥಳ: ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್, ವಾಣಿವಿಲಾಸಪುರಂ, ಸಂಜೆ 6ರಿಂದ.

■ **ಮಾಧವ ಕೃಪ :** 38ನೇ ವರ್ಷದ ಮಾಧವಕೃಪ ಗಣೇಶ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮ, ಕು. ಶ್ರೀ ಲಲಿತಾ ಉಳಿಯಾರು ಅವರಿಂದ ವಿಶ್ವಂಬರ ಮಹಾಗಣಪತಿ ಮತ್ತು ಶ್ಯಮಂತಕೋಪಖ್ಯಾನ ಕುರಿತು ಹರಿಕಥೆ, ಸ್ಥಳ: ಮಾಧವಕೃಪ, ಲಕ್ಷ್ಮೀಪುರಂ, ಸಂಜೆ 6.30ಕ್ಕೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಶ್ರೀಮತಿ ವಿದ್ವಾನ್ ರೇಣುಕಾ ಶ್ರೀನಿವಾಸನ್ ಮತ್ತು ವೃಂದದವರಿಂದ ಭಕ್ತಿಗೀತೆ, ಭಾವಗೀತೆ, ಜನಪದ ಗೀತೆ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ, ಸಂಜೆ 7 ರಿಂದ.

■ **ಸುತ್ತೂರು ಮಠ:** ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 110ನೇ ಜಯಂತಿ ಆಚರಣೆ, ಬೆಳಗ್ಗೆ 9.30ಕ್ಕೆ ಜೆಎಸ್‌ಎಸ್ ಲಲಿತಕಲೆಗಳ ತಂಡದಿಂದ ನಾದನಮನ, ಬೆಳಗ್ಗೆ 10ಕ್ಕೆ ಶ್ರೀಗಳ ಪುತ್ಥಳಿಗೆ ಆರತಿ ಮತ್ತು ಪುಷ್ಪಾಂಜಲಿ, ಬೆಳಗ್ಗೆ 10.30ಕ್ಕೆ ಸಭಾ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಕೇಂದ್ರ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾನ್, ಅಧ್ಯಕ್ಷತೆ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಂದ 'ಸರ್ವದರ್ಶನ ಸಂಗ್ರಹ' (4ನೇ ಆವೃತ್ತಿ) ಕೃತಿ ಬಿಡುಗಡೆ, ಸಚಿವ ಕೆ.ವೆಂಕಟೇಶ್ ಅವರಿಂದ 'ಕಾಯಕ ತಪಸ್ವಿ' (4ನೇ ಆವೃತ್ತಿ) ಕೃತಿ ಬಿಡುಗಡೆ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಂದ 'ಪ್ರಸಾದ' ವಿಶೇಷ ಸಂಚಿಕೆ ಮತ್ತು ಸಂಸದ ಸುನೀಲ್ ಬೋಸ್ ಅವರಿಂದ ಜೆಎಸ್‌ಎಸ್ ನ್ಯೂಸ್‌ಲೆಟರ್, ವಿಶೇಷ ಸಂಚಿಕೆ ಬಿಡುಗಡೆ, ಮಧ್ಯಾಹ್ನ 3ಕ್ಕೆ ಪ್ರತಿಭಾ ಪುರಸ್ಕಾರ ಮತ್ತು ಸನ್ಮಾನ; ರಾತ್ರಿ 9ಕ್ಕೆ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಕಲಾಬಳಗದವರಿಂದ 'ಪ್ರಭುಲಿಂಗಲೀಲೆ' ನಾಟಕ ಪ್ರದರ್ಶನ, ಸ್ಥಳ: ಸುತ್ತೂರು ಮಠ, ಚಾಮುಂಡಿ ಬೆಟ್ಟದ ತಪ್ಪಲು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 29 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 132 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ನಕ್ಕರೆ ಅದೇ ಸ್ವರ್ಗ

ತಂದೆ ಮಗನಿಗೆ ಫೋನ್ ಮಾಡಿ...
ಎಣ್ಣೆ ಕುಡಿದು ಕಾರು ಓಡಿಸಬೇಡ ಮಗನೆ
ಮಗ : ನೀನು ಎಣ್ಣೆ ಹಾಕಿದಾಗ ನನಗೆ ಫೋನ್ ಮಾಡಬೇಡ ಅಪ್ಪ
ತಂದೆ : ನಾನು ಎಣ್ಣೆ ಹಾಕಿದ್ದೀನಿ ಅಂತ ನಿನಗೆ ಹೇಗೆ ಗೊತ್ತು?
ಮಗ : ನೀನು ನನಗೆ ಕಾರು ಯಾವಾಗ ಕೊಡಿಸಿದ್ದೀಯಾ ಮತ್ತೆ...?

ಮೈಸೂರು ಮಿತ್ರ

ಶುಕ್ರವಾರ, 29 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ದುಡಿಯುವ ವಯಸ್ಸಿನಲ್ಲಿ ದುಡಿಯದ ಮಗ ಹೆತ್ತವರಿಗಷ್ಟೇ
ಅಲ್ಲ ಸತ್ತರೆ ಹೊರುವ ನಾಲ್ಕು ಜನಕ್ಕೂ ಭಾರ...!!
–ಶ್ರೀ ಸಿದ್ದೇಶ್ವರ ಸ್ವಾಮೀಜಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹೊಟ್ಟೆಗೆ ಹಿಟ್ಟು ಇಲ್ಲದಿದ್ರೂ ಜುಟ್ಟಿಗೆ ಮಲ್ಲಿಗೆ ಹೂವು

ನಿಮ್ಮ ಪತ್ರಗಳು

■ ನಾಡಹಬ್ಬ ಮೈಸೂರು ದಸರಾಗೆ ಧರ್ಮ, ಜಾತಿಗಳ ಲೇಪನ ಬೇಡ

ಮಾನ್ಯರೆ,

ರಾಜ್ಯ ಸರ್ಕಾರವು ಈ ವರ್ಷದ ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವವನ್ನು ಉದ್ಘಾಟನೆ ಮಾಡಲು ಹಿರಿಯ ಲೇಖಕಿ ಹಾಗೂ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದು ನಾಗರಿಕರ ಸಮಾಜವು ಅಭಿನಂದಿಸುವಂತಿದೆ. ಜಾತಿ, ಧರ್ಮದ ಸಂಕೋಲೆಯನ್ನು ಮೀರಿ ವಿಶ್ವಕ್ಕೆ ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಈ ನಾಡಹಬ್ಬಕ್ಕೆ ಕನ್ನಡ ಸಾಹಿತ್ಯದ ಮಹತ್ವವನ್ನು ಜಾಗತಿಕ ಮಟ್ಟದಲ್ಲಿ ಮುಟ್ಟಿಸಿದ ಕನ್ನಡದ ಹೆಣ್ಣು ಮಗಳೊಬ್ಬಳನ್ನು ಜಾತಿ ಧರ್ಮದ ಲೇಪನಗೊಳಿಸಿ ವಿರೋಧಿಸುತ್ತಿರುವುದು ನಾಗರಿಕ ಸಮಾಜವು ನಾಚುವಂತಿದೆ. ಹೀಗಾದರೆ ಕೋಮು ಸೌಹಾರ್ದತೆಯ ಸಾಮರಸ್ಯದ ಜೀವನ ನಡೆಸುವುದಾದರೂ ಹೇಗೆ? ಇನ್ನಾದರೂ ನಿಲ್ಲಲಿ, ಧರ್ಮ ಧರ್ಮಗಳ ನಡುವೆ ವಿಷ ಬೀಜ ಬಿತ್ತುವ ವ್ಯವಸ್ಥೆಯ ನಿಮ್ಮ ಪಿತೂರಿಗಳು. ಜಾತ್ಯತೀತ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅಶಾಂತಿಯನ್ನು ಉಂಟು ಮಾಡುವ ನಿಮ್ಮ ಮನಸ್ಸುಗಳು ಮೊದಲು ಸ್ವಚ್ಛಗೊಂಡು ಜಾತಿ ಮುಕ್ತ ಮನಸ್ಸುಗಳನ್ನು ಕಟ್ಟುವ ಕಾರ್ಯಕ್ಕೆ ಕೈಜೋಡಿಸಿ ಹಾಗೆ ವಿಶ್ವ ಪ್ರಸಿದ್ಧ ನಮ್ಮ ನಾಡಹಬ್ಬದ ಉದ್ಘಾಟನೆಗೆ ಆಹ್ವಾನಿಸಿರುವ ಬಾನು ಮುಷ್ತಾಕ್ ಅವರನ್ನು ಜಾತಿ ಧರ್ಮದ ಕಣ್ಣಿನಿಂದ ನೋಡದೆ ದಸರಾ ಉದ್ಘಾಟನೆಗೆ ಮುಕ್ತ ಮನಸ್ಸಿನಿಂದ ಸ್ವಾಗತಿಸೋಣ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾಮರಾಜನಗರ

■ ಚೆಕ್ ಮಾಡಲು ನಾನೇನು ಗುಮಾಸ್ತನಲ್ಲ

ಮಾನ್ಯರೆ,

ತಹಶೀಲ್ದಾರ್‌ಗಳ ಜೊತೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ತಹಸೀಲ್ದಾರ್‌ಗಳ ನ್ಯಾಯಾಲಯಗಳಲ್ಲಿ ಯಾವ ಪ್ರಕರಣಗಳನ್ನೂ 90 ದಿನಗಳಿಗಿಂತ ಹೆಚ್ಚು ಉಳಿಸಿಕೊಳ್ಳುವಂತಿಲ್ಲ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಅವರು ಆದೇಶಿಸಿರುವುದು ತುಂಬಾ ಶ್ಲಾಘನೀಯ. ಕೆಲವು ಜಿಲ್ಲೆಗಳಲ್ಲಿ ಉತ್ತಮ ಕೆಲಸ ಆಗಿದೆ. ಕೆಲವು ಜಿಲ್ಲೆಗಳಲ್ಲಿ ಆಗಿಲ್ಲ. ನಾವು ಹೇಳುವುದನ್ನು ಮಾಡುತ್ತಿಲ್ಲ. ಪ್ರತಿ ಬಾರಿ ಎಷ್ಟು ಪ್ರಕರಣಗಳು ಬಾಕಿ ಇವೆ ಎಂದು ಚೆಕ್ ಮಾಡಲು ನಾನೇನು ಗುಮಾಸ್ತನೇ ಎಂದು ಖಾರವಾಗಿ ನುಡಿದಿರುವುದು ಸ್ವಾಗತಾರ್ಹ ಬೆಳವಣಿಗೆ. ನಿರ್ದಿಷ್ಟ ಸಮಯದೊಳಗೆ ಪೌತಿ ಖಾತೆಯನ್ನು ಮನೆ ಮನೆಗೆ ತೆರಳಿ ಮಾಡಿಕೊಡಿ. ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕು ಪತ್ರದ ಜೊತೆಗೆ ಇ– ಖಾತಾ ಜನರೇಟ್ ಮಾಡಿ, ಇ– ಆಸ್ತಿ ಮಾಡಿಕೊಡುವವರೆಗೆ ವಿರಮಿಸಬೇಡಿ ಎಂದು ಹೇಳಿರುವುದು ಗಮನಾರ್ಹ. ಪೋಡಿ ದುರಸ್ತಿ ಕೆಲಸಕ್ಕೆ ವೇಗ ನೀಡಬೇಕು ಮತ್ತು ಭೂ ದಾಖಲೆಗಳ ಕಳವು ಹಾಗೂ ತಿದ್ದುವಂತಹ ಕೃತ್ಯಗಳಿಂದ, ಬಡ ರೈತರು ಶೋಷಣೆಗೆ ಒಳಗಾಗುತ್ತಿದ್ದು, ಇಂತಹ ಪ್ರಸಂಗಗಳಿಗೆ ಶಾಶ್ವತ ಪರಿಹಾರ ನೀಡುವಲ್ಲಿ ಭೂ ದಾಖಲೆಗಳ ಡಿಜಿಟಲೀಕರಣದ ಜೊತೆಗೆ ಸ್ಕ್ಯಾನರ್‌ಗಳು, ಆರು ಕಾಪ್ಯೂಟರ್, ಆರು ಜನ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ನೀಡಿ ಸರಕಾರವೇ ವೇತನ ನೀಡುತ್ತಿದ್ದು, ಇಷ್ಟೆಲ್ಲಾ ಸೌಲಭ್ಯ ಒದಗಿಸಿದ್ದರೂ ಕೆಲವು ತಹಸೀಲ್ದಾರರು ಗುರಿ ಮುಟ್ಟುವಲ್ಲಿ ವಿಫಲವಾಗಿರುವುದು ತುಂಬಾ ಬೇಸರದ ಸಂಗತಿ. ವರ್ಷಾಂತ್ಯದೊಳಗೆ ಅಭಿಯಾನ ಮಾದರಿ ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿರುವುದು ಪ್ರತಿಯೊಬ್ಬರೂ ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಉರಿಯುವ ಕರ್ಪೂರದಂತೆ ಪರಿಮಳವನ್ನು ಸಮಾಜಕ್ಕೆ ನೀಡಿದವರು ರಾಜೇಂದ್ರ ಶ್ರೀಗಳು

ಮಾನ್ಯರೆ,



ಸುತ್ತೂರು ಮಠದ ಪರಮಪೂಜ್ಯ ರಾಜೇಂದ್ರ ಶ್ರೀಗಳವರು ಈ ನಾಡಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವರು. ಮಠ ಮತ್ತು ಸಂಸ್ಥೆಗಳನ್ನು ಕಟ್ಟುವುದರ ಜೊತೆಗೆ ಸಾಮಾಜಿಕ ಕಳಕಳಿಯುಳ್ಳವರಾಗಿದ್ದು ಅನನ್ಯ ಕೊಡುಗೆಯನ್ನು ಸಮಾಜಕ್ಕೆ ನೀಡಿದ್ದಾರೆ. ಸುತ್ತೂರಿನ ಸುರಧೇನು, ಕಾಮಧೇನು, ಕಲ್ಪವೃಕ್ಷ, ಕಾಯಕಯೋಗಿ ಮಾತೃ ಹೃದಯಿಗಳಾದ ಶ್ರೀಗಳು ವಿರೋಧಿಗಳ ಮನಸ್ಸನ್ನೂ ನೋಯಿಸಲಾರದ ಲೋಕ ಕಾರುಣ್ಯ ಅವರದು. ಅವರ ಎಲ್ಲಾ ಕಾರ್ಯ ಸಾಧನೆಯ ಪ್ರೇರಕಶಕ್ತಿ, ಈ ಲೋಕ ಕಾರುಣ್ಯವೇ. ವಿದ್ಯಾರ್ಥಿಗಳು ಅವರ ಮುಂದೆ ನಿಂತು ಕಷ್ಟವನ್ನು ಹೇಳಿಕೊಂಡರೆ ಮುಗಿಯಿತು, ತಮ್ಮ ಎಲ್ಲ ಸಮಸ್ಯೆಗಳನ್ನು ಮರೆತು ಸಹಾಯಹಸ್ತವನ್ನು ಚಾಚುತ್ತಿದ್ದರು. ಹಾಗಾಗಿಯೇ ಉಚಿತ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸಾವಿರ ಸಾವಿರವಾಗಿ ಬೆಳೆಯುತ್ತ ಹೋಯಿತು. ಉಚಿತ ಪ್ರಸಾದವಷ್ಟೇ ಅಲ್ಲ, ಇತರ ಅಗತ್ಯಗಳನ್ನು ಪೂರೈಸಲಾರದ ಸ್ಥಿತಿ ಇದ್ದವರಿಗೆ ಹಣವನ್ನೂ ಕೊಡುತ್ತಿದ್ದರು. ಅನಾರೋಗ್ಯವಾದವರಿಗೆ ವೈದ್ಯಕೀಯ ನೆರವು, ಪಥ್ಯದ ಗಂಜಿಯಿಂದ ಹಿಡಿದು ಅವರ ಆರೈಕೆಗೆ ಏರ್ಪಾಡು ಮಾಡುತ್ತಿದ್ದರು. ತಂದೆಯಾಗಿ ಎಲ್ಲರನ್ನೂ ರಕ್ಷಿಸುತ್ತಿದ್ದರು; ತಾಯಿಯಾಗಿ ಎಲ್ಲರನ್ನು ಉಪಚರಿಸುತ್ತಿದ್ದರು. ಜನರನ್ನೆಲ್ಲ ತಮ್ಮೊಡನೆ ಕೊಂಡೊಯ್ಯುವ ಶಕ್ತಿ ಅದ್ಭುತವಾಗಿತ್ತು. ಒಮ್ಮೆ ಅವರನ್ನು ಕಂಡು ಅವರೊಡನೆ ಮಾತನಾಡಿದರೆ ಅವರ ಆಕರ್ಷಕ ವ್ಯಕ್ತಿತ್ವಕ್ಕೆ ಮಾರುಹೋಗುತ್ತಿದ್ದರು. ಹಳ್ಳಿಗಳಿಗೆ ಹೋದಾಗ ಅಲ್ಲಿನ ಜನರ ದುಃಖ ದುಮ್ಮಾನ ಸಮಸ್ಯೆಗಳನ್ನು ಕಂಡು ಮಿಡಿಯುತ್ತಿದ್ದರು. ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರವನ್ನು ಸೂಚಿಸುತ್ತಿದ್ದರು. ಜನರ ನಡುವೆ ಇದ್ದ ದ್ವೇಷವನ್ನು ಮಂಜಿನಂತೆ ಕರಗಿಸಿ ಸುಖ ಶಾಂತಿ ನೆಮ್ಮದಿಯಿಂದ ಎಲ್ಲರೂ ಬದುಕುವಂತೆ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಯಾವ ಆಡಂಬರ ಇಲ್ಲದ ವಿನಯಮೂರ್ತಿ ಅವರು. ಸೇವೆಯೇ ಪವಾಡವೆಂದು ನಂಬಿ ತಮ್ಮನ್ನು ತಾವೇ ಶ್ರೀಗಂಧದ ಕೊರಡಿನಂತೆ ಪರಿಮಳವನ್ನು ಪಸರಿಸಿ ಸಮರ್ಪಿಸಿಕೊಂಡಿದ್ದರು. ಕಾಯಕದಲ್ಲಿಯೇ ಸರ್ವ ಶಕ್ತಿಯನ್ನು ಕಂಡವರು. ಇಂತಹ ಮಹಾತ್ಮರ ಶತೋತ್ತರ ದಶಮಾನೋತ್ಸವದ ಜಯಂತಿಯು ಆಗಸ್ಟ್ 29 ರಂದು ಮೈಸೂರಿನಲ್ಲಿರುವ ಸುತ್ತೂರು ಮಠದಲ್ಲಿ ನಡೆಯಲಿದ್ದು ಸರ್ವರು ಭಾಗವಹಿಸಿ ಶ್ರೀಗಳ ಕೃಪೆಗೆ ಪಾತ್ರರಾಗೋಣ ಬನ್ನಿ.

–ಪರಶಿವಮೂರ್ತಿ ಎನ್ ಪಿ, ನಂಜೀಪುರ, ಸರಗೂರು ತಾ.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ



ಕಾತರಾಃ ಪರದುಃಖೇಷು ನಿಜದುಃಖೇಷ್ವಕಾತರಾಃ
ಅರ್ಥೇಷ್ವಲೋಭಾ ಯಶಸಿ ಸಲೋಭಾಃಸಂತಿ ಸಾಧವಃ॥

> “ ಲೋಕಸೇವೆ ಮಾಡಲೆಂದೇ ಉದಯಿಸಿದ ಸೇವಾ ಸೂರ್ಯನಂತೆ ಜಗದ ಬೆಳಕಾಗಿ ಸೇವೆ ಮಾಡಿದ ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾಲಮಾನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆ (ಜೆಎಸ್‌ಎಸ್)ಯ ಪಾಲಿಗೆ ಸುವರ್ಣ ಕಾಲವೇ ಆಗಿತ್ತು. ಅಷ್ಟೇ ಅಲ್ಲ ಕನ್ನಡ ನಾಡಿಗೆ ಅದರಲ್ಲೂ ವಿಶೇಷವಾಗಿ ನಮ್ಮ ಮೈಸೂರು ಭಾಗದ ಜನತೆಗೆ ಬಂಗಾರದ ಯುಗವಾಗಿತ್ತು. ಅಂಥಾ ಬಂಗಾರದ ಮನುಷ್ಯ ಈ ಸಂತ ಸಾಮ್ರಾಟ.

ಪ್ರತಿಯೊಬ್ಬ ಮಾನವನೂ ಅರಿಯಲೇಬೇಕಾದ ಈ ಶ್ಲೋಕದ ಅರ್ಥವಿಷ್ಟೆ. ಬೇರೆಯವರಿಗೆ ದುಃಖ ಬಂದಾಗ ಸಜ್ಜನರು ಚಿಂತೆ ಹೊಂದುವರು. ತಮಗೇ ದುಃಖ ಬಂದಾಗ ಚಿಂತೆ ಹೊಂದುವುದಿಲ್ಲ. ಅವರಿಗೆ ಹಣದಲ್ಲಿ ಆಸೆಯಿಲ್ಲ ಕೀರ್ತಿಯಲ್ಲೂ ಆಸೆಯಿಲ್ಲ.

ಜಗತ್ತಿನ ಎರಡನೇ ಮಹಾಯುದ್ಧದ ಕಾಲವದು. ಪ್ರಪಂಚದ ಅನೇಕ ದೇಶಗಳ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಎಲ್ಲೆಡೆ ಆಹಾರ ಅಭಾವ ಆವರಿಸಿತ್ತು. ಆಗ ಭಾರತದ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಆಹಾರಕ್ಕಾಗಿ ಅಂಗಲಾಚುವಂತಾಗಿತ್ತು. ಮೊದಲೇ ಬ್ರಿಟಿಷರ ಕಪಿಮುಷ್ಟಿಯಲ್ಲಿ ನಲುಗಿದ್ದ ಭಾರತ ಆಹಾರದ ಕೊರತೆಯಿಂದ ಮತ್ತಷ್ಟು ನಲುಗಿ ನರಳುವ ದುಃಸ್ಥಿತಿಯಲ್ಲಿತ್ತು. ಸರ್ಕಾರ ಆಹಾರ ವಿತರಣೆಗೆ ಪಡಿತರ ವ್ಯವಸ್ಥೆಯನ್ನು ಬಹಳ ಕಟ್ಟುನಿಟ್ಟಾಗಿ ಜಾರಿಗೊಳಿಸಿತ್ತು. ಆ ಸ್ಥಿತಿಯಲ್ಲಿ ಹಣ ಕೊಟ್ಟರೂ ತೆರೆದ ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳು ಸಿಗುತ್ತಿರಲಿಲ್ಲ. ಇಂಥ ಭೀಕರ ಕ್ಷಾಮ ಕಾಲದಲ್ಲಿ ಒಂದು ದಿನ ಚಾಮರಾಜನಗರದ ಜ್ಞಾನಾನ್ನ ದಾಸೋಹದ ಉಚಿತ ವಿದ್ಯಾರ್ಥಿ ನಿಲಯವೊಂದರಲ್ಲಿ ಊಟವಿಲ್ಲದೆ ನೂರಾರು ವಿದ್ಯಾರ್ಥಿಗಳು ಹಸಿವಿನಿಂದ ವಿಲಗುಟ್ಟುವ ಸ್ಥಿತಿ ನಿರ್ಮಾಣವಾಗಿತ್ತು. ಆಹಾರ ಪದಾರ್ಥಗಳು ಮುಗಿದು ಎರಡು ಮೂರು ದಿನಗಳೇ ಆಗಿದ್ದರಿಂದ ವಿದ್ಯಾರ್ಥಿನಿಲಯದ ಮ್ಯಾನೇಜರ್ ಅಕ್ಕಪಕ್ಕದ ಮನೆಗಳಲ್ಲಿ ಬೇಡಿ ಒಂದಿಷ್ಟು ಅಕ್ಕಿ–ರಾಗಿ ತಂದು ವಿದ್ಯಾರ್ಥಿಗಳಿಗೆ ಅರೆಹೊಟ್ಟೆಯ ಊಟ ನೀಡಿದ್ದರು. ಕೆಲವು ವಿದ್ಯಾರ್ಥಿಗಳಿಗೆ ಅದೂ ಸಿಗದೆ ಇದ್ದುದೂ ಉಂಟು. ಹೀಗಾಗಿ ಎಲ್ಲಾ ವಿದ್ಯಾರ್ಥಿಗಳೂ ಆಹಾರದ ನಿರೀಕ್ಷೆಯಲ್ಲೇ ಹಸಿವು ತಾಳಲಾರದೆ ನೀರು ಕುಡಿದು ಬಳಲಿ ಬಹುಬೇಗನೆ ಮಲಗಿಬಿಟ್ಟಿದ್ದರು.

ತುಸು ಹೊತ್ತಿನ ನಂತರ ಇದ್ದಕ್ಕಿದ್ದಂತೆ ಆ ವಿದ್ಯಾರ್ಥಿಗಳಿಗೆ ಯಾರೋ ತಲೆ ನೇವರಿಸಿದಂತಾಯಿತು. ಕಣ್ಬಿಟ್ಟು ನೋಡಿದರೆ ಸ್ವಾಮೀಜಿ! ನಿದ್ರೆಗಣ್ಣಿನಲ್ಲೇ ವಿದ್ಯಾರ್ಥಿಗಳ ಕಣ್ಣುಗಳು ಸಂತಸದಿಂದ ಅರಳಿದ್ದವು. ಬುದ್ದೀ... ಎಂದು ಬಾಯಿ ತೆರೆದಿದ್ದವು. ಹೇಗೋ ಎಲ್ಲೆಲ್ಲೋ ಆಹಾರ ಪದಾರ್ಥಗಳನ್ನು ಹೊಂದಿಸಿಕೊಂಡು ಸರಿರಾತ್ರಿಯಲ್ಲೇ ಬಂದಿದ್ದ ಸ್ವಾಮೀಜಿ ತಕ್ಷಣವೆ ಅಡುಗೆ ಮಾಡಿಸಿ ವಿದ್ಯಾರ್ಥಿಗಳಿಗೆ ಊಟಕ್ಕೆ ಅಣಿಗೊಳಿಸಿದ್ದರು. ಅಷ್ಟೇ ಅಲ್ಲ ಮಕ್ಕಳು ಹಸಿವಿನಿಂದ ಎಷ್ಟು ಸಂಕಟಪಟ್ಟಿದ್ದಾವೋ ಎಂದು ನೊಂದುಕೊಂಡು ಕಂಬನಿ ಮಿಡಿಯುತ್ತಲೇ ಏಳಿ ಮಕ್ಳೆ ಬೇಗ ಎದ್ದೇಳಿ ಊಟ ಮಾಡುವಿರಂತೆ ಎಂದು ಸ್ವತಃ ತಾವೇ ಎಲ್ಲಾ ವಿದ್ಯಾರ್ಥಿಗಳ ತಲೆ ನೇವರಿಸಿ ಎಬ್ಬಿಸಿ ಊಟ ಬಡಿಸಿದ್ದರು. ಇಂಥಾ ಕರುಣಾಳು ಸ್ವಾಮೀಜಿಯ ಹೃದಯವಂತಿಕೆಗೆ ಯಾವ ತಾಯಿ ಹೃದಯ ತಾನೇ ಸಮನಾದೀತು. ಆ ಕ್ಷಣ ಹಸಿದ ಆ ವಿದ್ಯಾರ್ಥಿ ಮಕ್ಕಳಿಗೆ ಆ ಸ್ವಾಮೀಜಿಯೇ ಮಹಾತಾಯಿ ಆಗಿದ್ದರು.

ಅಚ್ಚರಿಯೆಂದರೆ ಅವತ್ತು ಇಡೀ ದಿನ ಸ್ವಾಮೀಜಿ ಅವರು ಪೂಜೆಯನ್ನೇ ಮಾಡಿರಲಿಲ್ಲ. ವಿದ್ಯಾರ್ಥಿನಿಲಯಗಳಿಗೆ ಅನ್ನ ದಾಸೋಹಕ್ಕಾಗಿ ದವಸ–ಧಾನ್ಯ ಸಂಗ್ರಹಿಸಲು ಊರೂರು ಅಲೆದು ಸುಸ್ತಾಗಿದ್ದರು. ಪೂಜೆಯೇ ಇಲ್ಲವೆಂದ ಮೇಲೆ ಪ್ರಸಾದವೆಲ್ಲಿ ತಿಂದಾರು. ಹಾಗಾಗಿ ಅವರದು ಒಂದು ರೀತಿ ಉಪವಾಸ ವ್ರತವಾಗಿತ್ತು. ಇತರರ ಕಷ್ಟ ಕಳೆವುದೇ ಪೂಜೆಯೆಂದು, ನೊಂದವರ ಮುಖದಲ್ಲಿ ಸಂತಸ ಮೂಡಿಸುವುದೇ ಪ್ರಸಾದವೆಂದು ನಂಬಿದ್ದರವರು. ತಮ್ಮ ಮಕ್ಕಳಲ್ಲ, ಆದರೂ ಅವರೆಲ್ಲಾ ತಮ್ಮ ಮಕ್ಕಳೇ ಎಂದು ಭಾವಿಸಿದ್ದ ದಿವ್ಯ ಚೇತನವದು. ಯಾರೋ ಮಕ್ಕಳು ಹಸಿದಿದ್ದಾರೆಂದು ಮರುಗಿ ನಡು ರಾತ್ರಿಯಲ್ಲಿ ಬಂದು ನಿದ್ರೆಯಲ್ಲಿದ್ದ ಮಕ್ಕಳ ಮುಖಗಳಿಗೆ ನೀರು ಚಿಮುಕಿಸಿ ಎಬ್ಬಿಸಿ, ಊಟ ತಿನ್ನಿಸಿ ಸಂತೈಸಿದ ಆ ಮಹಾಮಹಿಮ ಸಾವಿರ ತಾಯಂದಿರಿಗೆ ಸಮ! ತಾಯ್ತನದ ಮೇರು ಪರ್ವವೇ ಆಗಿದ್ದ ಅವರು ಅಕ್ಷರಶಃ ತಾಯಿಯೇ ಆಗಿದ್ದರು.

ಹೀಗೆ ಮಹಾತಾಯಿಯಾಗಿ, ಮಹಾತಂದೆಯಾಗಿ, ಮಹಾಗುರುವಾಗಿ ನೂರಾರು, ಸಾವಿರಾರು ಬಡ ಮಕ್ಕಳಿಗೆ ಅನ್ನವಿಟ್ಟು ಅಕ್ಷರ ಕಲಿಸಿ ಎಲ್ಲರ ಬಾಳು ಬೆಳಗಿ ಬದುಕಿದ್ದಾಗಲೇ ದಂತಕಥೆಯಾಗಿದ್ದ ಆ ಸ್ವಾಮೀಜಿ ಬೇರಾರೂ ಅಲ್ಲ. ಅವರೇ ತ್ರಿವಿಧ ದಾಸೋಹಿ ಸಂತ ರಾಜಗುರು ತಿಲಕ, ಸುತ್ತೂರು ಶ್ರೀ ಮಠದ 23ನೆಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು. ಅಕ್ಷರಶಃ ಜಗದ್ಗುರುಗಳೇ ಆಗಿದ್ದವರು. ಇವರಿಂದಾಗಿ ಕಲಿತವರು, ಕಲಿತು ಬದುಕು ಕಟ್ಟಿಕೊಂಡವರು, ಬದುಕಿನಾಚೆಗೂ ಹೋಗಿ ನಾಡು ಕಟ್ಟಿದವರು, ನಾಡಿನಾಚೆಗೂ ಜಿಗಿದು ದೇಶಕಟ್ಟಿದವರು, ದೇಶದಿಂದಾಚೆಗೂ ಹಾರಿ ಜಗತ್ತು ಕಟ್ಟಿದವರು ಬಹಳಷ್ಟಿದ್ದಾರೆ. ಅವರೆಲ್ಲರಿಗೂ ಜೀವದಾತು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು. ಇವತ್ತು ಜಗದಗಲ, ಮುಗಿಲಗಲ, ಭುವಿಯಗಲ, ಬಾನಗಲ ಬೆಳೆದು ಹರಡಿ ನಿಂತಿರುವ ಜಗದ್ವಿಖ್ಯಾತ ಸುತ್ತೂರು ಶ್ರೀ ಮಠದ ಸರ್ವಾಂಗೀಣ ಅಭ್ಯುದಯದ ತಾಯಿ ಬೇರು ಸಹ ಇವರೇ ಎಂಬುದು ಸತ್ಯಸ್ಯ ಸತ್ಯ. ಇದೆಲ್ಲಕ್ಕೂ ಮೂಲಧಾತು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಲ್ಲಿದ್ದ ದೂರದೃಷ್ಟಿ ಹಾಗೂ ಕ್ರಿಯಾಶೀಲತೆ ಮತ್ತು ಧೀಶಕ್ತಿ. ಎಲ್ಲಕ್ಕಿಂತ ಮಿಗಿಲಾಗಿ ಎಲ್ಲರಲ್ಲೂ ತನ್ನವರನ್ನು ಕಾಣುವ ಅವರೊಳಗಿದ್ದ ಮಹಾಮಾನವೀಯತೆ. ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಅವರು ಸ್ಥಾಪಿಸಿದ ಉಚಿತ ವಿದ್ಯಾರ್ಥಿನಿಲಯಗಳು. ಎಂಥಾ ಸಂಕಷ್ಟ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಗುರು ದೇವರಾಗಿ ಕಾಪಾಡುತ್ತಿದ್ದರು. ಅದಕ್ಕೇ ಅವರನ್ನು ನಂಬಿ ಬಂದವರಿಗೆ ಕಲಿಯುಗದ ಕಾಮಧೇನು ಎಂತಲೂ, ಬೇಡಿ ಬಂದವರನ್ನು ಕೈಬಿಡದ ಕಲ್ಪವೃಕ್ಷ ಎಂತಲೂ ಜನ ಭಕ್ತಿಯಿಂದ ಕರೆಯುತ್ತಿದ್ದರು. ಅಪರಿಮಿತ ಅಭಿಮಾನದಿಂದ ಪೂಜಿಸುತ್ತಿದ್ದರು.

ಇಂದು ಸುತ್ತೂರು ಶ್ರೀ ಕ್ಷೇತ್ರದ 23ನೇ ಪೀಠಾಧೀಶರಾಗಿದ್ದ ಜಗದ್ಗುರು, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಲೋಕಸೇವೆ ಮಾಡಲೆಂದೇ ಉದಯಿಸಿದ ಸೇವಾ ಸೂರ್ಯನಂತೆ ಜಗದ ಬೆಳಕಾಗಿ ಸೇವೆ ಮಾಡಿದ ಕಾಯಕಯೋಗಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಕಾಲಮಾನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸಂಸ್ಥೆ (ಜೆಎಸ್‌ಎಸ್)ಯ ಪಾಲಿಗೆ ಸುವರ್ಣ ಕಾಲವೇ ಆಗಿತ್ತು. ಅಷ್ಟೇ ಅಲ್ಲ ಕನ್ನಡ ನಾಡಿಗೆ ಅದರಲ್ಲೂ ವಿಶೇಷವಾಗಿ ನಮ್ಮ ಮೈಸೂರು ಭಾಗದ ಜನತೆಗೆ ಬಂಗಾರದ ಯುಗವಾಗಿತ್ತು. ಅಂಥಾ ಬಂಗಾರದ ಮನುಷ್ಯ ಈ ಸಂತ ಸಾಮ್ರಾಟ. ಸಾವಿರಾರು ಬಡ ಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿ ಅನಕ್ಷರಸ್ಥರೋ, ಅಲ್ಪ ವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣ ವಿದ್ಯಾವಂತರನ್ನಾಗಿ ಮಾಡಿದ ಅವರು ಮಠಾಧೀಶರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿದ್ದು, ಮಾತೃ ಹೃದಯಿ ಆಗಿದ್ದರು. ತಮ್ಮ ಚಿಕಿತ್ಸಕ ಗುಣ, ಸೌಜನ್ಯ, ಸರಳತೆ ಮತ್ತು ಸಮಾಜಮುಖಿ ಚಿಂತನೆಗಳಿಂದಲೇ ಇಡೀ ನಾಡಿನ ಹೃನ್ಮನವನ್ನು ಗೆದ್ದಿದ್ದರು. ಹಾಗೆಯೇ ಇಡೀ ಜಗದ ದೃಷ್ಟಿ ತಮ್ಮತ್ತ ಬೀಳುವಂತೆ ಸಾರ್ಥಕತೆ ಮೆರೆದಿದ್ದರು.

ಶ್ರೀಮತ್ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠಕ್ಕೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವುಂಟು. ಯುದ್ಧಾಸಕ್ತನಾಗಿ ಯುದ್ಧೋನ್ಮಾದದಿಂದ ಬಂದಿದ್ದ ತಮಿಳುನಾಡಿನ ಚಕ್ರಾಧಿಪತಿ ರಾಜೇಂದ್ರ ಚೋಳ ಮತ್ತು ತಲಕಾಡಿನ ಗಂಗರ ದೊರೆ ರಾಚಮಲ್ಲರ ನಡುವೆ ಯುದ್ಧ ನಿಲ್ಲಿಸಿ, ಶಾಂತಿ–ಸಾಮರಸ್ಯಗಳನ್ನು ಮೂಡಿಸಿ ಅವರಿಂದ ಪೂಜನೀಯ ಗೌರವಕ್ಕೆ ಭಾಜನರಾದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಸಾವಿರ ವರ್ಷಗಳ ಹಿಂದೆಯೇ ಸಮಾಜಮುಖಿ ಚಿಂತನೆಗಳ ಆಶಯದಿಂದ ಶಾಂತಿಯ ಸಂಕೇತವಾಗಿ ಸಂಸ್ಥಾಪಿಸಿದ ಧರ್ಮ ಪೀಠವಿದು. ಇವತ್ತಿಗೂ ಈ ಪೀಠಕ್ಕೆ ಜಗದ್ಗೌರವವಿದೆ. ಇದನ್ನು ಅಲಂಕರಿಸಿದ ಜಗದ್ಗುರುಗಳಿಗೂ ಅಷ್ಟೇ ಮಹತ್ವದ ಸ್ಥಾನವಿದೆ. ಈ ಪೀಠದ ಜಗದ್ಗುರುಗಳ ದಿವ್ಯ ಪರಂಪರೆಯ ಪಥದಲ್ಲಿ ಮಹಾನ್ ಸಂತ ಶ್ರೇಷ್ಠರು, ಆಧ್ಯಾತ್ಮಿಕ ಸಾಧಕರು, ಸಮಾಜಮುಖಿ ಚಿಂತಕರು, ಅನುಭಾವಿಗಳು, ವಚನಕಾರರು, ದಾರ್ಶನಿಕರು, ದ್ರಷ್ಟಾರರು, ಗ್ರಂಥಕರ್ತರು, ಪರಿವ್ರಾಜಕರು ಆಗಿ ಹೋಗಿದ್ದು ಅವರವರ ಕಾಲಘಟ್ಟಗಳಲ್ಲಿ ಆರೋಗ್ಯಕರ ಸಮಾಜ ಕಟ್ಟುವಲ್ಲಿ ತೋರು ಮಾರ್ಗವಾಗಿದ್ದಾರೆ. ಅವರೆಲ್ಲರ ತತ್ವ ಸಿದ್ಧಾಂತ ಹಾಗೂ ಆಶೋತ್ತರಗಳ ಒಟ್ಟು ಮೊತ್ತದಂತಿದ್ದವರು ಶ್ರೀಮಠದ ಇಪ್ಪತ್ಮೂರನೇ ಪೀಠಾಧಿಪತಿಗಳಾಗಿದ್ದ ಶ್ರೀಮನ್ಮಹಾರಾಜ ರಾಜಗುರು ತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು.

ಸುತ್ತೂರು ಶ್ರೀ ಮಠಕ್ಕೆ ಒಂದು ಬಹುಮುಖಿ ಆಯಾಮವನ್ನು ನೀಡಿ ಅದು ಜಗದ್ವಿಖ್ಯಾತಿಯಾಗಲು ಬಹುಮುಖ್ಯ ಕಾರಣಿಕ ಶಕ್ತಿಯಾದ ಇಂಥಾ ಸಂತಲೋಕದ ಮಹಾಬೆಳಕು ಈ ಭುವಿಯಲ್ಲಿ ಅವತರಿಸಿದ್ದೇ ಒಂದು ಪವಾಡಸದೃಶ. "ಸ್ವಾಮಿಗಳನ್ನು ಮಾಡಬಾರದು, ಸ್ವಾಮಿಗಳು ಆಗಬೇಕು ಎಂಬ ಅರ್ಥಪೂರ್ಣ ನುಡಿಮುತ್ತಿಗೆ ಅನ್ವರ್ಥವಾಗಿ ಒಂದು ರೀತಿ ಹುಟ್ಟಿನಿಂದಲೇ ಸ್ವಾಮಿತ್ವ ಪಡೆದುಕೊಂಡು ಲೋಕಕ್ಕೆ ಬಂದವರಿವರು. ಪೂರ್ವಾಶ್ರಮ ಎಂಬ ಮಾತೇ ಇಲ್ಲದೆ ಹುಟ್ಟುತ್ತಲೇ 'ಶಿವರಾತ್ರಿ ರಾಜೇಂದ್ರ' ಎಂಬ ನಾಮಾಂಕಿತವನ್ನು ಪಡೆದ ಬಹು ಅಪರೂಪದ ಸ್ವಾಮಿಗಳಿವರು. ಇವರು ಜನಿಸಿದ್ದು 1916 ಆಗಸ್ಟ್ 29. ಪ್ರಕೃತಿ ಪ್ರಸನ್ನವಾಗಿ ತನ್ನ ತೇಜೋ ಕಾಂತಿಯನ್ನು ಚೆಲ್ಲುತ್ತಿದ್ದ ಶಾಲಿವಾಹನಶಕ 1838ನೇ ನಳನಾಮ ಸಂವತ್ಸರದ ಭಾದ್ರಪದ ಮಾಸ ಶುದ್ಧ ಪಾಡ್ಯದ ಸುಮುಹೂರ್ತ ಕಾಲವದು.


ಜನ್ಮಸ್ಥಳ ಶ್ರೀಮಠದ ನೆಲೆ ಬೀಡಾದ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮ. ಜನ್ಮವಿತ್ತ ಪುಣ್ಯಾತ್ಮರು ತಾಯಿ ಶರಣೆ ಶಂಕರಮ್ಮ. ಇವರಿಗೆ ಮರಮ್ಮಣ್ಣಿ ಎಂಬ ಮತ್ತೊಂದು ಹೆಸರೂ ಉಂಟು. ತಂದೆ ಶರಣ ಮಲ್ಲಿಕಾರ್ಜುನ ದೇವರು. ಸುತ್ತೂರು ಶ್ರೀ ಮಠಕ್ಕೆ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡಿದ್ದ ಶ್ರೀ ಶಿವರಾತ್ರೀಶ್ವರರ ಪರಮ ಭಕ್ತರಿವರು. ಇಂಥಾ ಶರಣ ದಂಪತಿಯ ಶಿಶು ಎಂದರೆ ಕೇಳಬೇಕೇ ಸುಸಂಸ್ಕಾರ ವೆಂಬುದು ಜನ್ಮತಃ ಮೈಗೂಡಿಕೊಂಡಿತ್ತು. ಬಾಲಕ ಶಿವರಾತ್ರಿ ರಾಜೇಂದ್ರರ ಬೆಳೆಯುವಿಕೆಯಲ್ಲಿ ಇಬ್ಬರು ಅಜ್ಜಿಯರ ಪಾತ್ರ ಬಹಳ ಮುಖ್ಯವಾಗಿತ್ತು. ಒಬ್ಬ ಅಜ್ಜಿ ಇವರ ತಾಯಿಯ ತಾಯಿ ಮಲ್ಲಮ್ಮಯ್ಯ. ಇವರು ಜ್ಯೋತಿಷ್ಯದಲ್ಲಿ ಬಹಳ ಪರಿಣತಿ ಹೊಂದಿದ್ದರು. ಮತ್ತೊಬ್ಬ ಅಜ್ಜಿ ತಂದೆಯ ತಾಯಿ ಚಿಕ್ಕ ಬಸಮಂಯ್ಯ. ಇವರೂ ಹಸ್ತ ಸಾಮುದ್ರಿಕೆಯಲ್ಲಿ ಪ್ರಸಿದ್ಧರಾಗಿದ್ದರು.

ತಂದೆ–ತಾಯಿಯ ಮಮತೆ, ಇಬ್ಬರು ಅಜ್ಜಿಯರ ಅಗಾಧ ಪ್ರೀತಿಯಿಂದ ಐದು ವರ್ಷಗಳವರೆಗೆ ತನ್ನ ಕುಟುಂಬದ ವಾತ್ಸಲ್ಯದ ಹಾರೈಕೆಯಲ್ಲಿ ಬೆಳೆದ ಶಿಶು ಶಿವರಾತ್ರಿರಾಜೇಂದ್ರರನ್ನು ಆನಂತರ ಜಗದ್ಗುರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳಿಗೆ ಕೊಟ್ಟ ಮಾತಿನಂತೆ ಶ್ರೀ ಮಠಕ್ಕೆ ಒಪ್ಪಿಸಲಾಯಿತು. ಅಂದಿನಿಂದ ಬಾಲಕ ಶಿವರಾತ್ರಿ ರಾಜೇಂದ್ರರ ಸಂಪೂರ್ಣ ಹೊಣೆ ನೇರವಾಗಿ ಶ್ರೀ ಶಿವರಾತ್ರೀಶ್ವರ ಸ್ವಾಮಿಗಳದಾಯಿತು. ದಿನದಿಂದ ದಿನಕ್ಕೆ ಬಾಲಕ ಶಿವರಾತ್ರಿ ರಾಜೇಂದ್ರ ಭವ್ಯವಾಗಿ ಬೆಳೆದು ದಿವ್ಯವಾಗಿ ಎಲ್ಲರನ್ನೂ, ಎಲ್ಲವನ್ನೂ ತನ್ನತ್ತ ಸೆಳೆದುಕೊಂಡರು. ಶ್ರೀ ಮಠದ ಉತ್ತರಾಧಿಕಾರಿಯಾದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬಾಲಕ ಶಿವರಾತ್ರಿ ರಾಜೇಂದ್ರರು ಸುತ್ತೂರಿನಿಂದ ಮೈಸೂರು ನಗರದತ್ತ ಪಯಣಿಸಿದರು. ಅಲ್ಲಿ ಸಕಲ ವಿದ್ಯಾಪಾರಂಗತರಾಗಿ ರೂಪುಗೊಳ್ಳತೊಡಗಿದ ಅವರು ಶ್ರೀ ಮಠದಲ್ಲಿ ಹೊಸ ಇತಿಹಾಸವೊಂದನ್ನು ಬರೆಯುವತ್ತ ಚಿಕ್ಕ ವಯಸ್ಸಿನಲ್ಲೇ ಮುಂದಾಗಿ ಬೆಳೆದು ನಿಂತರು. ಇನ್ನೂ ವಿದ್ಯಾರ್ಥಿಯಾಗಿದ್ದಾಗಲೇ 1928 ಫೆಬ್ರವರಿ 24ರಂದು ಕೇವಲ 12ನೇ ವಯಸ್ಸಿಗೇ ಬಾಲಕ ಶಿವರಾತ್ರಿ ರಾಜೇಂದ್ರರು ಐತಿಹಾಸಿಕ ಸುತ್ತೂರು ವೀರ ಸಿಂಹಾಸನ ಮಹಾಸಂಸ್ಥಾನ ಮಠದ ಪೀಠಾರೋಹಣ ಮಾಡಿ ಜಗದ್ಗುರು ಸ್ಥಾನದಲ್ಲಿ ಕುಳಿತರು. ಅಂದಿನಿಂದ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಚಾರಿತ್ರಿಕ ಹೊಸ ಯುಗವೊಂದು ಪ್ರಗತಿಯ ಮಹಾಚಕ್ರದೊಡನೆ ಸೇವಾ ಪಥದಲ್ಲಿ ಆರಂಭಗೊಂಡಿದ್ದು ಈಗ ಇತಿಹಾಸ!.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಎಣೆಯಿಲ್ಲದ ತ್ರಿವಿಧ ದಾಸೋಹವನ್ನು ಕಣ್ಣಾರೆ ಕಂಡು ವಿಸ್ಮಯಗೊಂಡಿದ್ದ ಮಹಾಕವಿ ರಸಋಷಿ ಕುವೆಂಪು ಅವರು ಸಾಮಾನ್ಯರ ಮನೆ ಬಾಗಿಲಿಗೆ ಅಪೂರ್ವವೂ ಅವ್ಯಕ್ತವೂ ಆದ ಜ್ಞಾನವನ್ನು ಪ್ರವಹಿಸಿ, ಅವರ ಹೃದಯವನ್ನು ತಿದ್ದಿ ಉದ್ಧರಿಸುವ ಕಾಯಕ ಮಾಡಿದ ಅಪೂರ್ವ ತೇಜೋಮಯ ದಾರ್ಶನಿಕ ವ್ಯಕ್ತಿ ಎಂದು ಶ್ರೀಗಳನ್ನು ಶ್ಲಾಘಿಸಿ ಅವರ ನಿಸ್ವಾರ್ಥ ಸೇವಾ ಕೈಂಕರ್ಯಕ್ಕೆ ಚಿನ್ನದ ಪ್ರಭಾವಳಿ ತೊಡಿಸಿದ್ದರು. ಅನ್ನ, ಅಕ್ಷರ, ಆರೋಗ್ಯವೆಂಬ ತ್ರಿವಿಧ ದಾಸೋಹದ ಸಾರ್ಥಕ ಸೇವೆಯಲ್ಲಿ ಇಂದು ಜಗದಗಲಕೂ, ಮುಗಿಲೆತ್ತರಕೂ ಬೆಳೆದು ನಿಂತಿರುವ ಶ್ರೀಮತ್ಸುತ್ತೂರು ವೀರ ಸಿಂಹಾಸನ ಮಹಾ ಸಂಸ್ಥಾನ ಮಠದ ಸೇವಾ ಕೈಂಕರ್ಯಗಳ ಹಿಮಾಲಯವನ್ನು ಯಾವ ದಿಕ್ಕಿನಿಂದ ಇಣುಕಿ ನೋಡಿದರೂ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳೇ ಕಾಣುತ್ತಾರೆ. 1986 ಡಿಸೆಂಬರ್ 6ರಂದು ಶ್ರೀಗಳು ಲಿಂಗೈಕ್ಯರಾಗಿ ಭೌತಿಕವಾಗಿ ನಮ್ಮಿಂದ ಕಣ್ಮರೆಯಾಗಿದ್ದರೂ ಅವರೆಂದೆಂದಿಗೂ ಮರೆಯಲಾಗದ ಮಹಾಚೇತನವಾಗಿದ್ದಾರೆ. ಅಂತೆಯೇ ಇವರು ತಮ್ಮ ಉತ್ತರಾಧಿಕಾರಿಯಾಗಿ ಸೇವಾ ಕೈಂಕರ್ಯದಲ್ಲಿ ತಮ್ಮಷ್ಟೇ ಪ್ರಭಾವಶಾಲಿಯಾದ ಸಂತ ಪ್ರಭೆಯಾದ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿಯಂತಹ ಅಪೂರ್ವ ಸಂತರತ್ನವನ್ನು ತಮ್ಮ ಅಮೋಘ ಕೊಡುಗೆಯಾಗಿ ನಾಡಿಗೆ ನೀಡಿ ಹೋಗಿದ್ದಾರೆ.

ಸಹಕಾರ ಇಲಾಖೆಯ 126 ಹಿರಿಯ ನಿರೀಕ್ಷಕರು, ವಿವಿಧ ಸಹಕಾರ ಸಂಘದ 403 ನಿರೀಕ್ಷಕರ ಹುದ್ದೆ ಭರ್ತಿ

● ಸಿಎಂ ಸಿದ್ದರಾಮಯ್ಯ ಸೂಚನೆ ● ಈ ಹುದ್ದೆಗಳ ಭರ್ತಿಗೆ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಸಲಹೆ ● ಸಹಕಾರ ಇಲಾಖೆ ಪ್ರಗತಿ ಪರಿಶೀಲನೆ



ಬೆಂಗಳೂರು,ಆ.28–ಸಹಕಾರ ಇಲಾಖೆಯಲ್ಲಿ ಹಿರಿಯ ನಿರೀಕ್ಷಕರ 126 ಹುದ್ದೆಗಳು ಹಾಗೂ ಸಹಕಾರ ಸಂಘಗಳ ನಿರೀಕ್ಷಕರ 403 ಹುದ್ದೆಗಳು ಖಾಲಿ ಇದ್ದು, ಇವುಗಳ ಭರ್ತಿಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಸಹಕಾರ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು ಈ ಹುದ್ದೆಗಳ ಭರ್ತಿಗೆ ಅಗತ್ಯವಿರುವ ಅನುಮೋದನೆ ಪಡೆದುಕೊಳ್ಳಲು ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದರು. ಸಹಕಾರ ಸಂಘಗಳ ಮೂಲಕ ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 37ಲಕ್ಷ ರೈತರಿಗೆ ರೂ.28 ಸಾವಿರ ಕೋಟಿ ಸಾಲ ವಿತರಣೆ ಗುರಿ ಹೊಂದಲಾಗಿದೆ. ಇದರಲ್ಲಿ ಜುಲೈ ಅಂತ್ಯದವರೆಗೆ 8,69,284 ರೈತರಿಗೆ ರೂ.8362.68 ಕೋಟಿ ಸಾಲ ವಿತರಣೆ ಮಾಡಲಾಗಿದೆ. ರೈತರಿಗೆ ಸಕಾಲದಲ್ಲಿ ಕೃಷಿ ಸಾಲ ಸಿಗುವುದನ್ನು ಖಾತ್ರಿಪಡಿಸಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು.

ನಬಾರ್ಡ್ ರಿಯಾಯಿತಿ ಬಡ್ಡಿ ದರದ ಸಾಲದ ಮಿತಿಯನ್ನು ಹಿಂದಿನ ಸಾಲಿನಲ್ಲಿದ್ದ ರೂ.5,600 ಕೋಟಿಗಳಿಂದ ರೂ.3,236.11 ಕೋಟಿಗೆ ಅಂದರೆ ಶೇ.42.21ರಷ್ಟು ಕಡಿಮೆ ಮಾಡಿದೆ. ಆದರೂ ಸಾಲ ವಿತರಣೆಯಲ್ಲಿ ಶೇ.96.07ರಷ್ಟು ಪ್ರಗತಿ ಸಾಧಿಸಲಾಗಿದೆ. 2024–25ನೇ ಸಾಲಿನಲ್ಲಿ 29,75,598 ರೈತರಿಗೆ 25,939.09 ಕೋಟಿ ಕೃಷಿ ಸಾಲ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ 28516 ಸಹಕಾರ ಸಂಘಗಳು ಲಾಭದಲ್ಲಿದ್ದು, 14,670 ನಷ್ಟದಲ್ಲಿವೆ. ಸಾಲ ವಸೂಲಾತಿ ಸರಿಯಾಗಿ ಆಗದ ಕಾರಣ ಬಹುತೇಕ ಸಂಘಗಳು ನಷ್ಟದಲ್ಲಿದ್ದು, ಅಂತಹ ಸಾಲ ವಸೂಲಾತಿಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು ಎಂದರು.

ಇದರಲ್ಲಿ 2200 ಹಾಲು ಉತ್ಪಾದಕ ಸಂಘಗಳು ನಷ್ಟದಲ್ಲಿವೆ. ಹಾಲು ಉತ್ಪಾದಕ ಸಹಕಾರ ಸಂಘಗಳ ವೆಚ್ಚದ ಮೇಲೆ ನಿಗಾ ಇರಿಸಬೇಕು. ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು ಸಂಘಗಳ ಕಾರ್ಯದರ್ಶಿಗಳ ಜವಾಬ್ದಾರಿ. ಹಾಲು ಉತ್ಪಾದಕ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.


ಕನ್ನಡ ಸಾಹಿತ್ಯ ಪರಿಷತ್ತಿನ ಅವ್ಯವಹಾರಗಳ ಕುರಿತು ಡಿಆರ್‌ಎಸ್ ತನಿಖೆ ನಡೆಸುತ್ತಿದೆ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲೇ ಕೆಲವು ಸದಸ್ಯರ ಸದಸ್ಯತ್ವವನ್ನು ಪರಿಷತ್ ರದ್ದುಪಡಿಸುತ್ತಿರುವ ಕುರಿತು ದೂರುಗಳು ಬಂದಿದ್ದು, ಈ ಕುರಿತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಸೂಚನೆ ನೀಡಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯ ವ್ಯಾಪ್ತಿಯ ಸೇವೆಗಳನ್ನು ಗಣಕೀಕರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ 7074 ಗಿರವಿದಾರ ಸಂಸ್ಥೆಗಳು ಹಾಗೂ 1468 ಚೀಟಿ ಸಂಸ್ಥೆಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 1961, ಕರ್ನಾಟಕ ಗಿರವಿದಾರರ ಅಧಿನಿಯಮ 1961 ಮತ್ತು ಚೀಟಿನಿಧಿಗಳ ಅಧಿನಿಯಮ 1982ರಡಿ ನೋಂದಣಿಯಾಗಿವೆ. ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ ಇರಿಸಬೇಕು. ರಾಜ್ಯದಲ್ಲಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಹಕಾರ ಇಲಾಖೆ ಅಧಿಕಾರಿಗಳು ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಆ.31, ಇಸ್ಕಾನ್‌ನಲ್ಲಿ ಶ್ರೀ ರಾಧಾಷ್ಟಮಿ

ಮೈಸೂರು ಆ.28– ಮೈಸೂರಿನ ಜಯನಗರದಲ್ಲಿರುವ ಅಂತರ ರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ (ಇಸ್ಕಾನ್) ದೇವಾಲಯದಲ್ಲಿ ಆ. 31 ರಂದು ಶ್ರೀಮತಿ



ರಾಧಾರಾಣಿಯ ಅವತರಣೆಯ ದಿನವಾದ ಶ್ರೀ ರಾಧಾಷ್ಟಮಿಯಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸಂಜೆ 6 ಗಂಟೆಯಿಂದ ರಾಧಾ ಅಷ್ಟೋತ್ತರ ಶತನಾಮ ಹೋಮ, ಸುಶ್ರಾವ್ಯ ಸಂಕೀರ್ತನೆ ಹಾಗೂ ವಿಶೇಷ ವೀಡಿಯೋ ಪ್ರಸ್ತುತಿಗಳ ಜೊತೆಗೆ, ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1ರ ತನಕ ಹಾಗೂ ಸಂಜೆ 4 ಗಂಟೆಯಿಂದ 9ರ ತನಕ ಹರಿನಾಮ ಸಂಕೀರ್ತನೆಯನ್ನು ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 29 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 132 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನವೆಂಬರ್‌ನಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ಕ್ರಾಂತಿಯೂ ಆಗುತ್ತೆ... ವಾಂತಿಯೂ ಆಗುತ್ತೆ...!

ಕೊನೆಗೆ ಪಕ್ಷವೇ ಸರ್ವನಾಶವಾಗುತ್ತೆ...!!

- ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ವ್ಯಂಗ್ಯೋಕ್ತಿ
- ಕಾಂಗ್ರೆಸ್‌ನ ಬೆಳವಣಿಗೆ ಗಮನಿಸಿದರೆ ದೊಡ್ಡ ಕ್ರಾಂತಿಯೇ ಆಗುತ್ತೆ


ಸುದ್ದಿಗೋಷ್ಠಿಯಲ್ಲಿ ವಿ. ಸೋಮಣ್ಣ ಮಾತನಾಡಿದರು. ಆರ್.ಅಶೋಕ್ ಉಪಸ್ಥಿತರಿದ್ದರು.

ಬೆಂಗಳೂರು, ಆ.28(ಕೆಎಂಶಿ)– ನವೆಂಬರ್‌ನಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ಕ್ರಾಂತಿಯೂ ಆಗುತ್ತೆ, ವಾಂತಿಯೂ ಆಗುತ್ತೆ, ಪಕ್ಷ ಸರ್ವನಾಶ ಆಗುತ್ತೆ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಇಂದಿಲ್ಲಿ ತಿಳಿಸಿದ್ದಾರೆ.

ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ್ ಜೊತೆಗೂಡಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಪುಟ ಮತ್ತು ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಗಮನಿಸಿದರೆ ದೊಡ್ಡ ಕ್ರಾಂತಿಯೇ ನಡೆಯಲಿದೆ.

ತುಮಕೂರಲ್ಲಿ ಸ್ಪರ್ಧಿಸಲ್ಲ; ರಾಜಕೀಯದಲ್ಲಿರ್ತೀನಿ: ಮುಂಬರುವ ಚುನಾವಣೆಯಲ್ಲಿ ತುಮಕೂರು ಲೋಕಸಭಾ ಕ್ಷೇತ್ರದಿಂದ ಕಣಕ್ಕಿಳಿಯುವುದಿಲ್ಲ ಎಂದು ಹೇಳಿದ್ದೇನೆಯೇ ಹೊರತು ರಾಜಕೀಯವಾಗಿ ನಿವೃತ್ತಿ ಆಗುತ್ತೇನೆ ಎಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಚುನಾವಣಾ ರಾಜಕೀಯದಿಂದ ದೂರ ಸರಿಯುವ ಪ್ರಶ್ನೆಯೇ ಇಲ್ಲ ನನ್ನ ಹೇಳಿಕೆಯನ್ನು ನೀವುಗಳು ತಿರುಚುವುದು ಬೇಡ ಎಂದರು.

ಒಳ್ಳೆ ಮನಸ್ಸಿಂದ ಕೆಲಸ ಮಾಡ್ತಿದ್ದರೆ ಒಳ್ಳೆದಾಗುತ್ತೆ: ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಮ್ಮ ಹೆಸರು ಕೇಳಿಬರುತ್ತಿದೆಯಲ್ಲ ಎಂಬ ಪ್ರಶ್ನೆಗೆ, ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡಿದರೆ, ಎಂತಹ ಹುದ್ದೆಗಳಾದರೂ ದೊರೆಯುತ್ತದೆ ಎಂಬುದಕ್ಕೆ ನಾನೇ ಸಾಕ್ಷಿ.

ವಿಧಾನಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿ ಅಶೋಕ್ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನು ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ಖಾಲಿ ಇಲ್ಲ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ನನ್ನನ್ನು ಗುರುತಿಸಿ ಕೇಂದ್ರ ಸಂಪುಟದಲ್ಲಿ ಎರಡು ಇಲಾಖೆಗಳ ಹೊಣೆ ವಹಿಸಿದ್ದಾರೆ.


ನಾನು 36 ರಾಜ್ಯಗಳಲ್ಲೂ ಇಲಾಖೆ ಕೆಲಸ ಮಾಡುತ್ತಿದ್ದೇನೆ. ನನ್ನ ಇಲಾಖೆಯಲ್ಲಿ 49,000 ಕೋಟಿ ರೂ. ಕಾಮಗಾರಿ ಕೈಗೊಂಡಿದ್ದೇವೆ. ತುಮಕೂರಿನಲ್ಲಿ ಕಳೆದ 50 ವರ್ಷಗಳಿಂದ ಆಗದ ಕೆಲಸಗಳನ್ನು ಕೈಗೆತ್ತಿಕೊಂಡಿದ್ದೇನೆ. ಜೊತೆಗೆ ಬೆಂಗಳೂರು ನಗರದಿಂದ 100 ಕಿಲೋ ಮೀಟರ್ ವ್ಯಾಪ್ತಿಯಲ್ಲಿನ ರೈಲ್ವೆ ಕೆಳ ಮತ್ತು ಮೇಲ್ಸೇತುವೆ ಕಾಮಗಾರಿಗಳನ್ನು ಕೈಗೊಂಡಿದ್ದೇನೆ. ನನಗೆ ನೀಡಿರುವ ಹೊಣೆಗಾರಿಕೆಯನ್ನು, ಅದರಲ್ಲೂ ಪ್ರಧಾನಿ ಮೋದಿ ಅವರು ಮುಂಚೂಣಿಯಲ್ಲಿ ನಿಂತು ದೇಶ ಕಟ್ಟುತ್ತಿರುವ ಕೆಲಸದಲ್ಲಿ ನಾನು ಒಂದು ಸಣ್ಣ ಮೆಟ್ಟಿಲಾಗಿ ಕಾರ್ಯನಿರ್ವಹಿಸುತ್ತಿದ್ದು ಇದರಲ್ಲಿ ತೃಪ್ತಿ ಇದೆ. ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡಿದರೆ ಎಂತಹ ಹುದ್ದೆಗಳಾದರೂ ದಕ್ಕಬಹುದು ಎಂದು ಪರೋಕ್ಷವಾಗಿ ರಾಜ್ಯಾಧ್ಯಕ್ಷ ಹೊಣೆ ನೀಡಿದರೂ ನಿರ್ವಹಿಸಬಲ್ಲೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಒಂದು ಸಮುದಾಯದ ಓಲೈಕೆಗಾಗಿ ಹಿಂದೂ ಭಾವನೆಗಳಿಗೆ ಧಕ್ಕೆ ತರುತ್ತಿದೆ ಎಂದು ಕಿಡಿಕಾರಿದರು.

ಅಡ್ಡಕತ್ತರಿಗೆ ಸಿಲುಕಿದ್ದಾರೆ: ಧರ್ಮಸ್ಥಳ ವಿಚಾರವಾಗಿ ಏನೋ ಮಾಡಲು ಹೋಗಿ, ಅಡ್ಡಕತ್ತರಿಯಲ್ಲಿ ಸಿಲುಕಿದ್ದಾರೆ. ಸತ್ಯ ಬಹಿರಂಗವಾಗಿದೆ. ವಿಷಯ ತಿಳಿದ ನಂತರವಾದರೂ ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಕೋರಬೇಕಿತ್ತು. ಈ ಪ್ರಕರಣ ಮುಗಿಯುತ್ತಿದ್ದಂತೆ ಚಾಮುಂಡಿಬೆಟ್ಟವನ್ನು ಕೈಗೆತ್ತಿಕೊಂಡಿದ್ದಾರೆ ಎಂದರು. ಮೈಸೂರು ದಸರಾ ಉದ್ಘಾಟನೆಗೆ ಲೇಖಕಿ ಬಾನು ಮುಷ್ತಾಕ್ ಆಯ್ಕೆ ಮಾಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಸೋಮಣ್ಣ, ರಾಜಮನೆತನ ಪೂಜಿಸಿಕೊಂಡು ಬಂದಂತಹ ದೇವಿಗೆ ಸರ್ಕಾರ ಅಪಚಾರ ಎಸಗುತ್ತಿದೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಮುಂಡಿಬೆಟ್ಟದ ಬಗ್ಗೆ ನೀಡಿರುವ ಹೇಳಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದರು.

75 ವರ್ಷ ಆದವರೆಲ್ಲಾ ನಿವೃತ್ತಿ ಆಗಬೇಕೆಂದೇನಿಲ್ಲ!

ನರೇಂದ್ರ ಮೋದಿ ಪ್ರಧಾನಮಂತ್ರಿಯಾಗಿ ಮುಂದುವರಿಕೆಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪರೋಕ್ಷ ಅನುಮೋದನೆ


ಮೋಹನ್ ಭಾಗವತ್ ಪ್ರಧಾನಿ ಮೋದಿ

ನಾಗ್ಪುರ, ಆ.28– 75 ವರ್ಷ ಆದವರು ನಿವೃತ್ತಿ ಆಗಬೇಕು ಎಂದೇನಿಲ್ಲ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ. ಈ ಮೂಲಕ ನರೇಂದ್ರ ಮೋದಿ ಪ್ರಧಾನಮಂತ್ರಿಯಾಗಿ ಮುಂದುವರೆಯುವುದಕ್ಕೆ ಪರೋಕ್ಷವಾಗಿ ಅನುಮೋದಿಸಿದ್ದಾರೆ. ಬಿಜೆಪಿ ಸಿದ್ಧಾಂತದ ಪ್ರಕಾರ 75 ವರ್ಷವಾದವರು ಅಧಿಕಾರ ಸ್ಥಾನ ತೊರೆಯಬೇಕಿದೆ.

ನಾಗ್ಪುರದಲ್ಲಿ ನಡೆದ ಆರ್‌ಎಸ್‌ಎಸ್ ಸಭೆಯ ನಂತರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ನಾನೂ ನಿವೃತ್ತಿಯಾಗುವುದಿಲ್ಲ, ಬೇರೆಯವರನ್ನೂ ನಿವೃತಿಯಾಗುವಂತೆ ಹೇಳುವುದಿಲ್ಲ. ನಾವು ಇರುವವರೆಗೂ ಕೆಲಸ ಮಾಡುತ್ತೇವೆ ಎಂದರು.

ನಾವು ಬಿಜೆಪಿಗೆ ಕೇವಲ ಸಲಹೆ ನೀಡುತ್ತೇವೆಯೇ ಹೊರತು, ಅದರ ಅಧ್ಯಕ್ಷರ ಆಯ್ಕೆಯಲ್ಲಿ ಯಾವುದೇ ಪಾತ್ರ ವಹಿಸುವುದಿಲ್ಲ. ನಾನು ಶಾಖೆಗಳನ್ನು ನಡೆಸುವುದರಲ್ಲಿ ನಿಪುಣ. ಬಿಜೆಪಿಯು, ಸರ್ಕಾರ ನಡೆಸುವುದರಲ್ಲಿ ನಿಪುಣ. ನಾವು ಪರಸ್ಪರ ಸಲಹೆಗಳನ್ನು ಮಾತ್ರ ನೀಡಲು ಸಾಧ್ಯ. ಪಕ್ಷದ ಅಧ್ಯಕ್ಷರನ್ನು ಆಯ್ಕೆ ಮಾಡಲು ಬಿಜೆಪಿ ತನ್ನದೇ ಆದ ಸಮಯ ತೆಗೆದುಕೊಳ್ಳಲಿದೆ. ನಾವೇನಾದರೂ ಬಿಜೆಪಿಯ ಅಧ್ಯಕ್ಷರನ್ನು ನಿರ್ಧರಿಸುವಂತಿದ್ದರೆ ಇಷ್ಟು ದೀರ್ಘ ಸಮಯ ಹಿಡಿಯುತ್ತಿರಲಿಲ್ಲ ಎಂದು ಬಿಜೆಪಿಯ ಅಧ್ಯಕ್ಷರ ಆಯ್ಕೆಯಲ್ಲಿ ಆರ್‌ಎಸ್‌ಎಸ್ ಪಾತ್ರವೇನಾದರೂ ಇದೆಯೇ ಎಂಬ ಪ್ರಶ್ನೆಗೆ ಅವರು ಉತ್ತರಿಸಿದ್ದಾರೆ.

ಒಳ್ಳೆ ಕೆಲಸ ಮಾಡಲು ಎಲ್ಲರಿಗೂ ಬೆಂಬಲ: ಪಿಎಂ, ಸಿಎಂ ಕ್ರಿಮಿನಲ್ ಆರೋಪ ಮಸೂದೆ ಸೇರಿದಂತೆ ಹೊಸದಾಗಿ ಮಂಡಿಸಲಾಗಿರುವ ಹಲವು ಮಸೂದೆಗಳ ಕುರಿತು ನಿರ್ಧಾರ ಕೈಗೊಳ್ಳಲು ಸಂಸತ್ ಮಾತ್ರ ಸೂಕ್ತ ವೇದಿಕೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಆರ್‌ಎಸ್‌ಎಸ್ ಬಿಜೆಪಿಗೆ ನೆರವು ನೀಡುತ್ತಿದೆಯೆ ಹೊರತು, ಇತರ ಪಕ್ಷಗಳಿಗಲ್ಲ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿದ ಮೋಹನ್ ಭಾಗವತ್, ನಾವು ಒಳ್ಳೆಯ ಕೆಲಸ ಮಾಡಲು ಎಲ್ಲರಿಗೂ ಸಹಾಯ ■ 10ನೇ ಪುಟಕ್ಕೆ

ಸರ್ಕಾರದ ನಡವಳಿಕೆಗೆ ಮಂಜುನಾಥಸ್ವಾಮಿಯೇ ಶಿಕ್ಷೆ ಕೊಡ್ತಾನೆ



ಬೆಂಗಳೂರು, ಆ.28– ಧರ್ಮಸ್ಥಳ ಕೇಸ್‌ನಲ್ಲಿ ಸರ್ಕಾರದ ನಡವಳಿಕೆಗೆ ಮಂಜುನಾಥ ಸ್ವಾಮಿಯೇ ಶಿಕ್ಷೆ ಕೊಡುತ್ತಾನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭವಿಷ್ಯ ನುಡಿದಿದ್ದಾರೆ.

ಬೆಂಗಳೂರಿನ ಜೆಪಿ ನಗರ ನಿವಾಸದಲ್ಲಿ ಧರ್ಮಸ್ಥಳ ಕೇಸ್ ವಿಚಾರವಾಗಿ ಮಾತನಾಡಿದ ಅವರು, ಧರ್ಮಸ್ಥಳ ಕೇಸ್‌ನಲ್ಲಿ ಈ ಸರ್ಕಾರ ನಡೆದುಕೊಂಡ ರೀತಿಗೆ ನಿಜಕ್ಕೂ ಶಿಕ್ಷೆಯಾಗಬೇಕು. ■ 10ನೇ ಪುಟಕ್ಕೆ

ಧರ್ಮಸ್ಥಳ ಪ್ರಕರಣ ಎನ್‌ಐಎ ಇಲ್ಲವೇ ಸಿಬಿಐಗೆ ವಹಿಸಲು ಆಗ್ರಹಿಸಿ

ಆ.31ಕ್ಕೆ ಜೆಡಿಎಸ್, ಸೆ.1ಕ್ಕೆ ಬಿಜೆಪಿ ಸತ್ಯಯಾತ್ರೆ

ಬೆಂಗಳೂರು, ಆ.28(ಕೆಎಂಶಿ)–ಧರ್ಮಸ್ಥಳದ ವಿರುದ್ಧದ ಆರೋಪವನ್ನು ಸಿಬಿಐ ಇಲ್ಲವೇ ಎನ್‌ಐಎ ತನಿಖೆಗೆ ವಹಿಸುವಂತೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಪ್ರತ್ಯೇಕವಾಗಿ ಧರ್ಮಸ್ಥಳ ಸತ್ಯಯಾತ್ರೆ ಕೈಗೊಂಡಿವೆ.

ಜೆಡಿಎಸ್ ಆಗಸ್ಟ್ 31ರಂದು ಯಾತ್ರೆ ನಡೆಸಿದರೆ, ಬಿಜೆಪಿ ಸೆಪ್ಟೆಂಬರ್ 1ರಂದು ಧರ್ಮಯಾತ್ರೆ ಹೊರಟಿದೆ. ಪ್ರತ್ಯೇಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ಸಂಘಟನೆಗಳು ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಮಾಡುತ್ತಿವೆ.

ಹಿಂದೂ ಭಾವನೆಗಳಿಗೆ ಧಕ್ಕೆ ತರುವ ಕಾರ್ಯದಲ್ಲಿ ಕೈಜೋಡಿಸಿರುವ ಸಂಘಟನೆಗಳನ್ನು ಪತ್ತೆ ಹಚ್ಚಲು ಎಸ್‌ಐಟಿಯಿಂದ ಸಾಧ್ಯವಿಲ್ಲ. ಆದ್ದರಿಂದ ಸಿಬಿಐ ಅಥವಾ ಎನ್‌ಐಎಗೆ ನೀಡಿ ಆರೋಪಿಗಳನ್ನು ಬಂಧಿಸಬೇಕು ಎಂದರು. ತನಿಖೆಗೆ ಒತ್ತಾಯ, ಧರ್ಮಸ್ಥಳ ಹಾಗೂ ಧರ್ಮಾಧಿಕಾರಿಗಳ ಜೊತೆ ನಾವಿದ್ದೇವೆ ಎಂಬುದಕ್ಕೆ ಈ ಯಾತ್ರೆಗಳನ್ನು ಕೈಗೊಳ್ಳಲಾಗುತ್ತಿದೆ.

ಪಕ್ಷದ ಶಾಸಕರು, ಮಾಜಿ ಶಾಸಕರು ಹಾಗೂ ಕಾರ್ಯಕರ್ತರು ಪಕ್ಷಾತೀತವಾಗಿ, ಧರ್ಮಸ್ಥಳದ ಬಗ್ಗೆ ಪೂಜ್ಯ ಭಾವನೆ ಹೊಂದಿರುವವರು ಈ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರಿನಿಂದ ಹೊರಡುವ ಯಾತ್ರೆಗೆ ಹಾಸನದಲ್ಲಿ ರಾಜ್ಯದ ಮೂಲೆ ಮೂಲೆಯಿಂದ ಬರುವವರು ಸೇರಿಕೊಳ್ಳಲಿದ್ದು, ನೇತ್ರಾವತಿ ಸ್ನಾನಘಟ್ಟದಿಂದ ಕಾಲ್ನಡಿಗೆಯಲ್ಲಿ ■ 10ನೇ ಪುಟಕ್ಕೆ

ಕೆಎಸ್‌ಸಿಎ ಮಹಾರಾಜ ಟ್ರೋಫಿ–2025

ಮಂಗಳೂರು ಡ್ರ್ಯಾಗನ್ಸ್ ಚಾಂಪಿಯನ್

ಭಗ್ನಗೊಂಡ 2ನೇ ಬಾರಿ ಟ್ರೋಫಿ ಗೆಲ್ಲುವ ಟೈಗರ್ಸ್ ಕನಸು


ಮಹಾರಾಜ ಟ್ರೋಫಿ–2025ರ ಚಾಂಪಿಯನ್ಸ್ ಮಂಗಳೂರು ಡ್ರ್ಯಾಗನ್ಸ್ ತಂಡದ ಸಂಭ್ರಮ.

ಮೈಸೂರು, ಆ.28(ವಿವಿಹೆಚ್)– 4ನೇ ಆವೃತ್ತಿಯ ಕೆಎಸ್‌ಸಿಎ ಮಹಾರಾಜ ಟ್ರೋಫಿ–2025ರ ಫೈನಲ್ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಅನ್ನು ಮಣಿಸುವ ಮೂಲಕ ಮಂಗಳೂರು ಡ್ರ್ಯಾಗನ್ಸ್ ಚೊಚ್ಚಲು ಟ್ರೋಫಿಯನ್ನು ಮುಡಿಗೇರಿಸಿಕೊಂಡಿದೆ.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಗುರುವಾರ ನಡೆದ ಫೈನಲ್ಸ್ ಪಂದ್ಯಕ್ಕೆ ವರುಣ ಅಡ್ಡಿಪಡಿಸಿದ ಹಿನ್ನೆಲೆಯಲ್ಲಿ ವಿಜಡಿ ನಿಯಮದ ಅನ್ವಯ 14 ರನ್ ಗೆಲುವು ದಾಖಲಿಸಿದ ಮಂಗಳೂರು ಚಾಂಪಿಯನ್ ಆಗಿ ಹೊರ ಹೊಮ್ಮಿದರೆ, ಕ್ವಾಲಿಫೈಯರ್–1 ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿ ಫೈನಲ್ ಪ್ರವೇಶಿಸಿ 2ನೇ ಬಾರಿಗೆ ಟ್ರೋಫಿ ಗೆಲ್ಲುವ ಕನಸಿನೊಂದಿಗೆ ಕಣಕ್ಕಿಳಿದಿದ್ದ ಹುಬ್ಬಳ್ಳಿ ಟೈಗರ್ಸ್ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 154 ರನ್‌ಗಳ ಸಾಧಾರಣ ಮೊತ್ತ ದಾಖಲಿಸಿತು. ತಂಡದ ಪರ ನಾಯಕ ದೇವ್‌ದತ್ ಪಡಿಕ್ಕಲ್ ಹಾಗೂ ಮೊಹಮ್ಮದ್ ತಹಾ ಇನ್ನಿಂಗ್ಸ್ ಆರಂಭಿಸಿದರು. ಪಡಿಕ್ಕಲ್ 10(7) ರನ್‌ಗಳಿಸಿ ನಿರ್ಗಮಿಸಿದರೆ, ಮೊಹಮ್ಮದ್ ತಹಾ 27(15) ರನ್ ಗಳಿಸಿ ಪೆವಿಲಿಯನ್ ಸೇರಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ ಬೀಸಿದ ಕೆ.ಪಿ.ಕಾರ್ತಿಕೇಯ 8(9), ರಿತೇಶ್ ಭಟ್ಕಳ್ 13(10), ಅಭಿನವ್ ಮನೋಹರ್ 17(17) ರನ್ ಗಳಿಸಿದರು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಸಮಯೋಚಿತವಾಗಿ ಬ್ಯಾಟ್ ಬೀಸಿದ ಕೆ. ಶ್ರೀಜಿತ್ 45 ಎಸೆತ ಎದುರಿಸಿ 4 ಬೌಂಡರಿ, 1 ಸಿಕ್ಸರ್ ಸಹಿತ 52 ರನ್ ಗಳಿಸಿ, ತಂಡ 150ರ ಗಡಿ ದಾಟಲು ಸಹಕರಿಸಿದರು. ಉಳಿದಂತೆ ಶಿವಕುಮಾರ್ ರಕ್ಷಿತ್ 2(3), ■ 10ನೇ ಪುಟಕ್ಕೆ

ಅನನ್ಯ ಭಟ್ ನಾಪತ್ತೆ ಕಪೋಲಕಲ್ಪಿತ!

ಎಸ್‌ಐಟಿ ಮುಂದೆ ಸುಜಾತಾ ಭಟ್ ಉಲ್ಟಾ

ಬೆಂಗಳೂರು, ಆ.28(ಕೆಎಂಶಿ)– ಧರ್ಮಸ್ಥಳ ಪ್ರದೇಶದಲ್ಲಿ ಅಸಹಜ ಸಾವುಗಳ ಪ್ರಕರಣದ ಹಿನ್ನೆಲೆಯಲ್ಲಿ ತನ್ನ ಪುತ್ರಿ ಅನನ್ಯಾ ಭಟ್ ಕಾಣೆಯಾಗಿದ್ದು, ಬಹುಶಃ ಸಾವಿಗೀಡಾಗಿರಬಹುದು ಎಂಬ ದೂರು ನೀಡಿದ್ದ ಸುಜಾತಾ ಭಟ್ ಉಲ್ಟಾ ಹೊಡೆದಿದ್ದಾರೆ.


ಸುಜಾತಾ ಭಟ್

ಬೆಳ್ತಂಗಡಿಯಲ್ಲಿ ಎಸ್‌ಐಟಿ ಮುಂದೆ ವಿಚಾರಣೆ ಎದುರಿಸಿ, ತಾನು ಹೇಳಿದ್ದೆಲ್ಲಾ ಕಪೋಲಕಲ್ಪಿತ, ದೂರು ಸಂಪೂರ್ಣ ಸುಳ್ಳು, ನನಗೆ ತಪ್ಪಿನ ಅರಿವಾಗಿದೆ. ಕೊಟ್ಟ ದೂರು ವಾಪಸ್ ಪಡೆಯಲು ಸಿದ್ಧ ಎಂಬುದಾಗಿ ಹೇಳಿಕೆ ಕೊಟ್ಟಿದ್ದಾರೆಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ.

ಮಾಧ್ಯಮಗಳ ಮುಂದೆ ಕ್ಷಣಕ್ಕೊಂದು ಹೇಳಿಕೆ ನೀಡುತ್ತಾ, ಅನನ್ಯಾ ಹತ್ಯೆಯಾಗಿದೆ ಎಂಬ ಭ್ರಮೆ ಹುಟ್ಟಿಸಿ, ತನಿಖೆಗೆ ಒತ್ತಾಯಿಸುವ ಮೂಲಕ ಗೊಂದಲ ಸೃಷ್ಟಿಸಿದ್ದ ಸುಜಾತ ಭಟ್ ಎಸ್‌ಐಟಿಯಿಂದ ಸತತ ವಿಚಾರಣೆಯಿಂದ ವಿಚಲಿತರಾದಂತೆ ಕಂಡುಬರುತ್ತಿದೆ. ಈ ಪ್ರಾಯದಲ್ಲಿ ತನಿಖೆ ಎದುರಿಸಲು ಸಾಧ್ಯವಾಗದು. ನ್ಯಾಯಕ್ಕಾಗಿ ಇಷ್ಟು ದಿನ ಹೋರಾಟ ನಡೆಸಿದೆ. ಇನ್ನು ನನ್ನಲ್ಲಿ ಶಕ್ತಿ ಇಲ್ಲ. ದೂರು ಹಿಂಪಡೆಯಲು ಸಿದ್ಧ ಎಂದಿದ್ದಾರೆ ಎನ್ನಲಾಗಿದೆ.

ಧರ್ಮಸ್ಥಳದ ಮಂಜುನಾಥಸ್ವಾಮಿ ದೇವಸ್ಥಾನಕ್ಕೆ 2003ರಲ್ಲಿ ಭೇಟಿ ನೀಡಿದ ವೇಳೆ ಎಂಬಿಬಿಎಸ್ ಪ್ರಥಮ ವರ್ಷದ ವಿದ್ಯಾರ್ಥಿನಿಯಾದ ನನ್ನ ಮಗಳು ಅನನ್ಯಾ ಭಟ್ ಕಾಣೆಯಾದಳು ಎಂಬುದಾಗಿ ಜುಲೈ 15, 2025ರಂದು ದೂರು ನೀಡಿದ್ದರು.

ದೂರಿನ ಆಧಾರದ ಮೇಲೆ ಧರ್ಮಸ್ಥಳ ಪೊಲೀಸರು ಆಗಸ್ಟ್ 19, 2025ರಂದು ಡಿಜಿಪಿ ಎಂ.ಎ.ಸಲೀಂ ಆದೇಶದಂತೆ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ವರ್ಗಾಯಿಸಲಾಯಿತು. ಆಗಸ್ಟ್ 26 ಹಾಗೂ 27ರಂದು ಸುಜಾತ ಭಟ್ ಬೆಳ್ತಂಗಡಿಯ ಎಸ್‌ಐಟಿ ಕಚೇರಿಗೆ ತೆರಳಿ, ತನಿಖಾಧಿಕಾರಿ ಗುಣಪಾಲ ಜೆ. ಮುಂದೆ ಹಾಜರಾಗಿ ಹೇಳಿಕೆ ದಾಖಲಿಸಿದ್ದಾರೆ. ಇದೀಗ ಎಸ್‌ಐಟಿ, ಅನನ್ಯಾ ಭಟ್‌ಗೆ ಸಂಬಂಧಿಸಿದ ದಾಖಲಾತಿಗಳನ್ನು ಸಲ್ಲಿಸುವಂತೆ ಸುಜಾತಾ ಭಟ್‌ಗೆ ಸೂಚಿಸಿದೆ.

ಸರ್ಕಾರಕ್ಕೆ ದಸರಾ ಬರೀ ಸಾಂಸ್ಕೃತಿಕ ಆಚರಣೆ: ನಮಗದು ಧಾರ್ಮಿಕ ಆಚರಣೆ



ಚಾಮುಂಡೇಶ್ವರಿ ದೇವಾಲಯ ಹಿಂದೂ ದೇವಸ್ಥಾನ ಆಗದೆ ಇದ್ದಿದ್ದರೆ ಮುಜರಾಯಿ ಇಲಾಖೆ ವ್ಯಾಪ್ತಿಗೆ ಬರುತ್ತಿರಲಿಲ್ಲ; ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪತ್ರಿಕಾ ಹೇಳಿಕೆ

ಮೈಸೂರು, ಆ.28(ಬಿಎಲ್‌ಯು)– ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಸ್ವಾಮ್ಯತೆ ಹಾಗೂ ಹಿಂದೂ ಧರ್ಮದ ಪ್ರತಿಪಾದನೆ ಬಗ್ಗೆ ಮೈಸೂರು ರಾಜವಂಶಸ್ಥರು ಹಾಗೂ ಸರ್ಕಾರದ ನಡುವಿನ ಟಾಕ್ ಫೈಟ್ ಜೋರಾಗಿದೆ. ಈ ಬಗ್ಗೆ ಮೌನ ಮುರಿದಿರುವ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಮಾತ್ರವೇ ಸೇರಿದೆ ಎಂಬ ಹಕ್ಕನ್ನು ಪ್ರತಿಪಾದಿಸಿದ್ದಾರೆ.

ಚಾಮುಂಡೇಶ್ವರಿ ದೇವಾಲಯ ಹಿಂದೂ ಧರ್ಮದ ಆಸ್ತಿಯಲ್ಲ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರಮೋದಾದೇವಿ ಒಡೆಯರ್ ಅವರು

> ಸರ್ಕಾರ ಆಚರಣೆ ಮಾಡುವ ದಸರಾ ಸಾಂಸ್ಕೃತಿಕ ಆಚರಣೆ ಎಂಬುದು ನಮ್ಮ ಅಭಿಪ್ರಾಯ. ಈ ಮೂಲಕ ದಸರಾ ಹಬ್ಬ ಆಚರಣೆಗೆ ಧಾರ್ಮಿಕ ಪಾವಿತ್ರ್ಯತೆ, ಸಂಪ್ರದಾಯ ಹಾಗೂ ಪರಂಪರೆಯ ಹಿನ್ನೆಲೆ ಇದೆ ಎಂದು ಸರ್ಕಾರ ಹೇಳಿಕೊಳ್ಳಲು ಸಾಧ್ಯವಿಲ್ಲ. ನಾವು ನಡೆಸುವ ದಸರಾಗೆ ಧಾರ್ಮಿಕತೆಯ ಹಿನ್ನೆಲೆ ಇದೆ. ಹಳೆಯ ಧಾರ್ಮಿಕ ಪದ್ಧತಿಗಳು ಹಾಗೂ ಸಂಪ್ರದಾಯಕ್ಕೆ ಅನುಗುಣವಾಗಿ ದಸರಾ ಆಚರಣೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ.

ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿ, ಪವಿತ್ರ ಚಾಮುಂಡೇಶ್ವರಿ ದೇವಾಲಯದ ಸುತ್ತ ರಾಜಕಾರಣ ಗಿರಿಕಿ ಹೊಡೆಯುತ್ತಿರುವ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.





ಪಾರಂಪರಿಕ ದಸರಾ ಉತ್ಸವದ ಧಾರ್ಮಿಕ ಕಾರ್ಯಗಳು ಹಾಗೂ ಸರ್ಕಾರದಿಂದ ಆಚರಿಸುವ ಕಾರ್ಯಕ್ರಮಗಳ ವ್ಯತ್ಯಾಸವನ್ನು ಸೂಕ್ಷ್ಮವಾಗಿ ತಿಳಿಸಿಕೊಡುವುದರ ಜೊತೆಗೆ ಚಾಮುಂಡೇಶ್ವರಿ ದೇವಾಲಯವು ಹಿಂದೂ ಧರ್ಮದ ಧಾರ್ಮಿಕ ಅಸ್ಮಿತೆ ಎಂಬುದನ್ನೂ ಮನದಟ್ಟು ಮಾಡಿಸಿದ್ದಾರೆ.

ಬಹಿರಂಗ ಪತ್ರದ ಸಾರಾಂಶ: ಈ ಬಾರಿಯ ದಸರಾ ಆಚರಣೆಗಳು, ವಿಶೇಷವಾಗಿ ಚಾಮುಂಡಿಬೆಟ್ಟದ ಮೇಲಿರುವ ಪವಿತ್ರ ಚಾಮುಂಡೇಶ್ವರಿ ದೇವಾಲಯದ ಸುತ್ತ ರಾಜಕೀಯ ನಡೆಯುತ್ತಿರುವುದು ತೀವ್ರ ಬೇಸರ ತರಿಸಿದೆ ಎಂದಿದ್ದಾರೆ.

ಡಿಕೆಶಿ ಹೇಳಿಕೆಯಿಂದ ಕಾಂಗ್ರೆಸ್ ಬಿಜೆಪಿ ನಡುವೆ ಕೆಸರೆರಚಾಟ

ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಸೇರಿಲ್ಲ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ಸರ್ಕಾರ ಮತ್ತು ರಾಜವಂಶಸ್ಥರ ನಡುವಿನ ಸಂಘರ್ಷಕ್ಕೆ ಮಾತ್ರ ಸೀಮಿತವಾಗದೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ರಾಜಕೀಯ ಕೆಸರೆರಚಾಟಕ್ಕೂ ಕಾರಣವಾಗಿದೆ.

ಚಾಮುಂಡೇಶ್ವರಿ ದೇವಸ್ಥಾನ ಹಿಂದೂಗಳಿಗೆ ಸೇರಿಲ್ಲ. ಅಲ್ಲಿ ಜಾತ್ಯಾತೀತ ಹಾಗೂ ಧರ್ಮಾತೀತವಾದ ಭಾವಗಳು ಮಿಳಿತವಾಗಿದೆ ಎಂದು ಸರ್ಕಾರ ಹೇಳಿದೆ.

ಆದರೆ ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಬಿಜೆಪಿ ನಾಯಕರು, ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಮಾತ್ರ ಸೇರಿದೆ. ನಾಡದೇವತೆ ತಾಯಿ ಚಾಮುಂಡೇಶ್ವರಿ ಸನ್ನಿಧಾನದ ಬಗ್ಗೆ ಹಿಂದೂಗಳಿಗೆ ಪವಿತ್ರ ಭಾವವಿದೆ ಎಂದು ಹೇಳುತ್ತಿದ್ದಾರೆ. ಒಟ್ಟಾರೆ ಪ್ರತಿ ವರ್ಷದ ದಸರಾ ಸಂದರ್ಭದಲ್ಲಿ ದಸರಾ ಉದ್ಘಾಟಕರ ಹೆಸರನ್ನು ಸರ್ಕಾರದ ಘೋಷಣೆ ಮಾಡಿದ ಸಂದರ್ಭದಲ್ಲಿ ಈ ರೀತಿಯ ವಿವಾದಗಳು ತೇಲಿ ಬರುವುದು ಸರ್ವೆ ಸಾಮಾನ್ಯವಾಗಿದೆ.

ಈ ವರ್ಷದ ನಾಡಹಬ್ಬ(ಜನತಾ ದಸರಾ) ಉದ್ಘಾಟನೆಗೆ ಆಹ್ವಾನಿಸಲಾದ ಗಣ್ಯರ ಆಯ್ಕೆಯು ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿಕೊಟ್ಟಿದೆ. ಇದನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಚಾಮುಂಡೇಶ್ವರಿ ದೇವಸ್ಥಾನ ಹಿಂದೂ ಧರ್ಮಕ್ಕೆ ಸೇರಿಲ್ಲ ಎಂಬಂತಹ ಅಸಂವೇದನಾಶೀಲ ಹೇಳಿಕೆಗಳು ಅನಗತ್ಯ ಹಾಗೂ ತಪ್ಪಿಸಬಹುದಾದವು. ದೇವಸ್ಥಾನದಲ್ಲಿ ಹಿಂದೂ ಧಾರ್ಮಿಕ ಪದ್ಧತಿಗೆ ಅನುಗುಣವಾಗಿ ಪೂಜೆ, ಆಚರಣೆ ನಡೆದರೂ ಹಿಂದಿನಿಂದಲೂ ಅನ್ಯ ಧರ್ಮೀಯರಿಗೆ ದೇವಸ್ಥಾನದಲ್ಲಿ ಪ್ರವೇಶದ ಅವಕಾಶವಿತ್ತು ಮತ್ತು ಈಗಲೂ ಇದೆ. ಅದು ಹಿಂದೂ ದೇವಸ್ಥಾನವಲ್ಲದಿದ್ದರೆ ಅದನ್ನು ಎಂದಿಗೂ ಮುಜರಾಯಿ ಇಲಾಖೆಯ ಅಡಿಯಲ್ಲಿ ■ 10ನೇ ಪುಟಕ್ಕೆ

ಮೈಸೂರಲ್ಲಿ ಭಕ್ತಿ-ಭಾವದ ಗಣೇಶ ಚತುರ್ಥಿ


ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ 25 ಅಡಿ ಎತ್ತರದ ಬೃಹತ್ ಗಣಪತಿ ಮೂರ್ತಿ ಪ್ರತಿಷ್ಠಾಪಿಸಿರುವುದು.


ಮೈಸೂರಿನ ರಾಮಸ್ವಾಮಿ ವೃತ್ತ ಬಳಿಯಿರುವ ಜಯಲಕ್ಷ್ಮೀ ವಿಲಾಸ ರಸ್ತೆಯಲ್ಲಿ ಪೂಜಿಸಿರುವ ಬೃಹತ್ ಗಣಪತಿ.


ಅಗ್ರಹಾರದ ನೂರೊಂದು ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು.

ಮೈಸೂರು, ಆ.28(ಎಂಟಿವೈ)- ಮೈಸೂರಲ್ಲಿ ಬುಧವಾರ ಅತ್ಯಂತ ಭಕ್ತಿ-ಭಾವದಿಂದ ಗಣೇಶ ಹಬ್ಬ ಆಚರಿಸಲಾಯಿತು. ಎಲ್ಲೆಡೆ ವಿವಿಧ ಆಕಾರದ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜಿಸುವ ಮೂಲಕ ವಿಘ್ನ ನಿವಾರಣೆಗಾಗಿ ಜನ ಮೊರೆ ಹೋದರು.

ಹಿಂದೂ ಸಂಪ್ರದಾಯದಲ್ಲಿ ಅಗ್ರ ಪೂಜೆ ಅಧಿಪತಿ ಎಂದು ಕರೆಯಲ್ಪಡುವ ಗಣಪತಿ ಹಬ್ಬಕ್ಕೆ ವಿಶೇಷ ಮಹತ್ವವಿದ್ದು, ಸಂಭ್ರಮ, ಸಡಗರದಿಂದ ಗಣಪತಿ ಹಬ್ಬವನ್ನು ಆಚರಿಸಲಾಗುತ್ತದೆ. ಬುಧವಾರ ಮೈಸೂರಿನ ಎಲ್ಲೆಡೆ ಗಣಪತಿ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಅದರಲ್ಲೂ ಅರಮನೆ ದ್ವಾರ ಗಣಪತಿ ದೇವಾಲಯ, ಅಗ್ರಹಾರದ ನೂರೊಂದು ಗಣಪತಿ ದೇವಾಲಯ, ಅಗ್ರಹಾರ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಗಣಪತಿ ದೇವಾಲಯ ಸೇರಿದಂತೆ ವಿವಿಧ ಬಡಾವಣೆಗಳಲ್ಲಿರುವ ಗಣಪತಿ ದೇವಾಲಯದಲ್ಲಿ ಗಣಪತಿ ಹಬ್ಬದ ವಿಶೇಷ ಪೂಜಾ ಕೈಂಕರ್ಯ ವಿಜೃಂಭಣೆಯಿಂದ ಜರುಗಿದವು.

ಹಬ್ಬದ ಅಂಗವಾಗಿ ದೇವಾಲಯಗಳನ್ನು ನಾನಾ ಬಗೆಯ ಹೂವುಗಳಿಂದ ಅಲಂಕಾರ ಮಾಡಲಾಗಿತ್ತು. ಅಲ್ಲದೆ, ವಿವಿಧ ಹಣ್ಣು-ತರಕಾರಿ ಹಾಗೂ ಗಣಪತಿಗೆ ಇಷ್ಟವಾದ ಕಡಬು, ಮೋದಕ, ಕರ್ಜಿಕಾಯಿ, ಚಕ್ಕುಲಿ, ಕೋಡು ಬಳೆ ಸೇರಿದಂತೆ ವಿವಿಧ ತಿನಿಸುಗಳಿಂದಲೂ ದೇವಾಲಯ ಪ್ರಾಂಗಣವನ್ನು ಅಲಂಕರಿಸಲಾಗಿತ್ತು. ಗಣಪತಿ ವಿಗ್ರಹಕ್ಕೆ ಬೆಣ್ಣೆ ಅಲಂಕಾರ ಮಾಡಲಾಗಿತ್ತು. ಹಬ್ಬದ ಅಂಗವಾಗಿ ಬೆಳಗ್ಗಿನಿಂದಲೇ ಅಪಾರ ಸಂಖ್ಯೆಯ ಭಕ್ತರು ದೇವಾಲಯಕ್ಕೆ ಕುಟುಂಬದವರೊಂದಿಗೆ ಆಗಮಿಸಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.


ಮೈಸೂರಿನ ಬೃಂದಾವನ ಬಡಾವಣೆಯ ಗಣಪತಿ ದೇವಾಲಯದಲ್ಲಿ 1021 ಮಣ್ಣಿನ ಗಣಪತಿ ಮೂರ್ತಿ ಪೂಜಿಸಿರುವುದು.

ಮನೆ ಮನೆಯಲ್ಲೂ ಗಣಪ: ಮೈಸೂರಿನ ಬಹುತೇಕ ಮನೆಗಳಲ್ಲಿ ಗೌರಿ-ಗಣಪನ ಮೂರ್ತಿ ಪೂಜಿಸಿ, ಗಣೇಶ ಹಬ್ಬ ಆಚರಿಸಲಾಯಿತು. ಸಂಪ್ರದಾಯದಂತೆ ಮನೆಯಲ್ಲಿ ಚಿಕ್ಕ ಚಿಕ್ಕ ಮಣ್ಣಿನ ಗಣಪನ ಮೂರ್ತಿ ಕೂರಿಸಿ ಪೂಜಿಸಿದ ಜನ, ನೆರೆ-ಹೊರೆಯವರಿಗೆ ಪ್ರಸಾದ ನೀಡಿ ಹಬ್ಬದ ಶುಭ ಕೋರಿದರು. ಹಬ್ಬ ಆಚರಿಸಿದ ಬಳಿಕ ಸಂಜೆ ವೇಳೆ ಮನೆಯಲ್ಲಿ ಕೂರಿಸಿ ಪೂಜಿಸಿದ್ದ ಗೌರಿ-ಗಣೇಶನ ಮೂರ್ತಿಯನ್ನು ರಾತ್ರಿ ವೇಳೆ ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಿ, ನೀರಿನಲ್ಲಿ ವಿಸರ್ಜಿಸಿದರು.

ಬಡಾವಣೆಯಲ್ಲಿ ಸಂಜೆ ವೇಳೆಗೆ ಗಣಪನ ದರ್ಬಾರ್: ಬೆಳಗ್ಗೆ ಮನೆ ಮನೆಯಲ್ಲೂ ಗಣೇಶ ಹಬ್ಬದ ಸಂಭ್ರಮ ಮನೆ ಮಾಡಿದ್ದರೆ, ಸಂಜೆ ವೇಳೆಗೆ ಬೀದಿ ಬೀದಿ, ಬಡಾವಣೆಗಳಲ್ಲೂ ಗಣೇಶನ ದರ್ಬಾರ್ ಆರಂಭವಾಯಿತು. ವಿವಿಧ ಯುವಕ ಮಂಡಳಿ, ಯುವ ಸಂಘಟನೆಗಳ ವತಿಯಿಂದ ಆಯ್ದ ಸ್ಥಳದಲ್ಲಿ ವಿವಿಧ ಶೈಲಿ, ವಿವಿಧ ಬಗೆಯ ಗಣೇಶನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪೂಜಾ ಕಾರ್ಯ ಆರಂಭಿಸಲಾಯಿತು. ಈ ಬಾರಿ ಪೈಪೋಟಿಗೆ ಬಿದ್ದಂತೆ ವಿವಿಧ ಬಡಾವಣೆಯ ಯುವಕರು ಬೃಹತ್ ಗಣಪನ ಮೂರ್ತಿಯನ್ನು ತಂದು ಪ್ರತಿಷ್ಠಾಪಿಸಿ, ಪೂಜಿಸಿರುವುದು ಎಲ್ಲರ ಗಮನ ಸೆಳೆದಿದೆ.

ಮೈಸೂರಿನ ಕೆ.ಜಿ.ಕೊಪ್ಪಲಿನಲ್ಲಿ ಕನ್ನೇಗೌಡ ಟೈಗರ್ಸ್ ವತಿಯಿಂದ 29ನೇ ಗಣಪತಿ ಪೂಜಾ ಮಹೋತ್ಸವದ ಅಂಗವಾಗಿ ಬೃಹತ್ ಗಣಪತಿ ಮೂರ್ತಿ ಪೂಜಿಸಲಾಗಿದ್ದು, ಮೈಸೂರಿನಲ್ಲೇ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿಗಳಲ್ಲೇ ಎತ್ತರದ ಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕುದುರೆ ಮೇಲೆ ಕುಳಿತಿರುವಂತೆ ವಿನ್ಯಾಸಗೊಳಿಸಿರುವ ಗಣೇಶನ ಮೂರ್ತಿ 25 ಅಡಿ ಎತ್ತರ, 12 ಅಡಿ ಅಗಲವಿದೆ. ಬೆಂಗಳೂರಿನ ದೇವನಹಳ್ಳಿಯಿಂದ 4 ಲಕ್ಷ ರೂ. ನೀಡಿ ಈ ಗಣೇಶನ ಮೂರ್ತಿಯನ್ನು ತರಲಾಗಿದ್ದು, ಪೇಪರ್ ಮೌಲ್ಡ್‌ನಿಂದ ತಯಾರಿಸಿರುವ ಪರಿಸರಸ್ನೇಹಿ ಗಣಪನ ಮೂರ್ತಿ ಇದಾಗಿದೆ. ಹಬ್ಬದ ಅಂಗವಾಗಿ ಪೂಜಿಸಿರುವ ಈ ಮೂರ್ತಿಯನ್ನು ಕಣ್ತುಂಬಿಕೊಳ್ಳಲು ಕೆ.ಜಿ.ಕೊಪ್ಪಲು ಮಾತ್ರವಲ್ಲದೆ, ವಿವಿಧ ಬಡಾವಣೆಗಳಿಂದಲೂ ಭಕ್ತರು ಬಂದು ದರ್ಶನ ಪಡೆದು ಪೂಜೆ ಸಲ್ಲಿಸುತ್ತಿದ್ದಾರೆ.

ಅಲ್ಲದೆ, ಮೈಸೂರಿನ ರಾಮಸ್ವಾಮಿ ವೃತ್ತ ಬಳಿಯಿರುವ ಜಯಲಕ್ಷ್ಮೀ ವಿಲಾಸ ರಸ್ತೆಯಲ್ಲಿ ಅಥರ್ವ ಗೆಳೆಯರ ಬಳಗದ ವತಿಯಿಂದ 20 ಅಡಿ ಎತ್ತರ, 15 ಅಡಿ ಅಗಲವಿರುವ ಜೇಡಿಮಣ್ಣು ಮತ್ತು ತೆಂಗಿನ ನಾರಿನಿಂದ ತಯಾರಿಸಿರುವ 2 ಟನ್ ತೂಕವಿರುವ ಬೃಹತ್ ಗಣೇಶನ ಮೂರ್ತಿಯನ್ನು ಪೂಜಿಸಿದ್ದು, ಈ ಬೃಹತ್ ಮೂರ್ತಿಯೂ ನೋಡುಗರ ಕಣ್ಮನ ಸೆಳೆಯುತ್ತಿದೆ. ಆಂಧ್ರಪ್ರದೇಶದ ಮದನಪಲ್ಲಿಯಿಂದ 2.50 ಲಕ್ಷ ರೂ. ನೀಡಿ ಈ ಗಣೇಶಮೂರ್ತಿಯನ್ನು ಖರೀದಿಸಲಾಗಿದೆ.

ಒಂದೇ ಸ್ಥಳದಲ್ಲಿ 1021 ಗಣೇಶನ ದರ್ಶನ: ಮೈಸೂರಿನ ಬೃಂದಾವನ ಬಡಾವಣೆಯಲ್ಲಿರುವ ಗಣಪತಿ ದೇವಾಲಯದ ಆವರಣದಲ್ಲಿ ವಿವಿಧ ಅಳತೆಯ 1021 ಮಣ್ಣಿನ ಗಣಪತಿ ಮೂರ್ತಿಯನ್ನು ಒಂದೇ ಸ್ಥಳದಲ್ಲಿ ಪ್ರತಿಷ್ಠಾಪಿಸಲಾಗಿದೆ. ಸಂಪ್ರದಾಯದಂತೆ 101 ಗಣಪನ ಮೂರ್ತಿಗೆ ಅಕ್ಷತೆ ಹಾಕಿದರೆ ಇಷ್ಟಾರ್ಥ ಸಿದ್ದಿ ಪ್ರಾಪ್ತಿಯಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಬೃಂದಾವನ ಗಣಪತಿ ದೇವಾಲಯದಲ್ಲಿ ಪೂಜಿಸಿರುವ 1021 ಗಣಪನ ಮೂರ್ತಿಗಳ ದರ್ಶನ ಪಡೆಯಲು ಭಕ್ತರ ದಂಡೇ ಹರಿದು ಬಂದಿತ್ತು. ಎಲ್ಲರೂ ಅಕ್ಷತೆ ಹಾಕಿ ಪ್ರಾರ್ಥಿಸಿದರು.

ವಿವಿಧ ಬಗೆಯ ಗಣಪ: ಸಂತೇ ಪೇಟೆಯಲ್ಲಿ ದಸರಾ ಆನೆ ಅರ್ಜುನನ ಸ್ಮರಣಾರ್ಥ ಆನೆ ಮೇಲೆ ಕುಳಿತಿರುವ ಗಣಪ, ಶಿವರಾಮಪೇಟೆಯಲ್ಲಿ ಆತ್ಮಲಿಂಗ ಗಣಪತಿ ಮೂರ್ತಿಯನ್ನು ಪೂಜಿಸ ಲಾಗಿತ್ತು. ಬೇರೆ ಬೇರೆ ಬಡಾವಣೆಯಲ್ಲಿ ಹುಲಿ ಮೇಲೆ ಕುಳಿತಿರುವ ಗಣಪ, ಸಿಂಹ, ನವಿಲು, ಹಂಸ, ಮೂಶಿಕ, ಬಸವನ ಮೇಲೆ ಕುಳಿತಿರುವ ಗಣಪ, ಶಿವನ ಹೆಗಲ ಮೇಲೆ ಕುಳಿತಿರುವ ಗಣಪ, ನಾಟ್ಯ ಭಂಗಿಯಲ್ಲಿರುವ ಗಣಪ ಸೇರಿದಂತೆ ವಿವಿಧ ವಿನ್ಯಾಸದಲ್ಲಿ ಕುಳಿತಿರುವ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲೂ ಗಣಪತಿ ಹಬ್ಬದ ಸಂಭ್ರಮ ಮನೆ ಮಾಡಿದ್ದು, ಎಲ್ಲಾ ಗ್ರಾಮಗಳ ಜನರು ಒಗ್ಗಟ್ಟಿನಿಂದ ಗಣೇಶ ಹಬ್ಬವನ್ನು ಆಚರಿಸಿ ಸಂಭ್ರಮಿಸಿದರು.

ಪಾಲಿಕೆ ಜಾಗೃತಿ ಲೆಕ್ಕಕ್ಕಿಲ್ಲ: ಹಲವೆಡೆ ಪಿಒಪಿ ಗಣೇಶ ಮೂರ್ತಿ ಪ್ರತಿಷ್ಠಾಪನೆ

ಮೈಸೂರು, ಆ.28 (ಎಂಟಿವೈ)- ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿಒಪಿ) ನಿಂದ ತಯಾರಿಸಿರುವ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸದಂತೆ ಮೈಸೂರು ಮಹಾನಗರಪಾಲಿಕೆ ಜಾಗೃತಿ ಮೂಡಿಸಿದ್ದರೂ, ಮೈಸೂರು ನಗರದ ಹಲವೆಡೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಪಿಒಪಿ ಗಣೇಶನ ಮೂರ್ತಿಗಳನ್ನೇ ಪ್ರತಿಷ್ಠಾಪಿಸಿರುವುದು ಹೆಚ್ಚಾಗಿ ಕಂಡು ಬಂದಿತು.

ಪರಿಸರ ಸಂರಕ್ಷಣೆ ಎಲ್ಲರ ಹೊಣೆಯಾಗಿದ್ದು, ಈ ಸಂಬಂಧ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಕಳೆದ ಒಂದು ತಿಂಗಳಿಂದ ಪಿಒಪಿ ಗಣಪನ ಮೂರ್ತಿಯನ್ನು ಮಾರಾಟ ಮಾಡದಂತೆ, ಪೂಜಿಸದಂತೆ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸಲಾಗಿತ್ತು. ಆದರೆ, ಹೊರ ರಾಜ್ಯಗಳಿಂದ ಕಂಟೇನರ್ ಮೂಲಕ ತಂದು ಹೊರ ವಲಯದ ಗುಪ್ತ ಸ್ಥಳಗಳ ಲ್ಲಿರಿಸಿದ್ದ ಪಿಒಪಿ ಗಣೇಶನ ಮೂರ್ತಿಗಳನ್ನು ಹಬ್ಬದ ದಿನವಾದ ಬುಧವಾರ ಸಂಜೆ ಮಾರಾಟ ಮಾಡಲಾಯಿತು.

ಪಾಲಿಕೆಯ ಪರಿಸರ ಅಧಿಕಾರಿಗಳು ಏನೂ ಮಾಡಲಾಗದೇ ಸುಮ್ಮನಾಗುವಂತಾಯಿತು. ಹಬ್ಬದ ದಿನ ದಾಳಿ ಮಾಡಿ ಪಿಒಪಿ ಗಣಪತಿ ಮೂರ್ತಿಗಳನ್ನು ವಶಕ್ಕೆ ಪಡೆದರೆ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿ, ಶಾಂತಿ ಸುವ್ಯವಸ್ಥೆ ಕದಡಬಹುದೆಂಬ ಮುಂದಾಲೋಚನೆಯಿಂದ ದಾಳಿ ಮಾಡುವ ಪ್ರಯತ್ನ ಮಾಡಲಿಲ್ಲ. ಇದರಿಂದ ನಮ್ಮ ಸುತ್ತಮುತ್ತಲಿನ ಪರಿಸರದ ಮೇಲೆ ಹಾನಿಯುಂಟು ಮಾಡುವ ಹಾಗೂ ಜಲಮೂಲಗಳ ಮೇಲೆ ದುಷ್ಪರಿಣಾಮ ಬೀರುವ ಪಿಒಪಿ ಹಾಗೂ ರಾಸಾಯನಿಕ ಅಂಶವುಳ್ಳ ಬಣ್ಣದ ಲೇಪನದ ಗಣಪನ ಮೂರ್ತಿಗಳನ್ನು ಕೆಲವರು ಮಾರಾಟ ಮಾಡಿದರು.

ಆಕರ್ಷಕವಾಗಿದ್ದರೂ ತೀವ್ರ ಹಾನಿಕಾರಕ

ಪಿಒಪಿ ಗಣಪನ ಮೂರ್ತಿ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಇದರಿಂದ ಜನರು ಮನಸೂರೆಗೊಳ್ಳುತ್ತದೆ. ಆದರೆ, ಪಿಒಪಿ ಗಣಪನ ಮೂರ್ತಿ ನೀರಿನಲ್ಲಿ ವಿಸರ್ಜನೆ ಮಾಡಿದಾಗ ಕರಗುವುದಿಲ್ಲ. ಅದರಿಂದ ವಿಷಯುಕ್ತ ಅಂಶ ನೀರಿನಲ್ಲಿ ಬೆರೆತು ಜಲಚರಗಳ ಮಾರಣ ಹೋಮಕ್ಕೂ ಕಾರಣವಾಗುತ್ತದೆ. ಅಲ್ಲದೆ, ಜಾನುವಾರುಗಳು ಕುಡಿಯುವ ನೀರು ಕಲುಷಿತಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಪಿಒಪಿ ಗಣಪನ ಮೂರ್ತಿ ಬಳಸದಂತೆ ಜಾಗೃತಿ ಮೂಡಿಸ ಲಾಗುತ್ತಿದೆ. ಈ ದುಷ್ಪರಿಣಾಮಗಳ ಬಗ್ಗೆ ವ್ಯಾಪಾರಿಗಳು ಹಾಗೂ ಗಣಪನ ಮೂರ್ತಿ ಖರೀದಿ ಮಾಡುವವರು ಮನವರಿಕೆ ಮಾಡಿಕೊಂಡು ಸ್ವಯಂ ನಿರ್ಧಾರ ತೆಗೆದುಕೊಂಡರೆ, ಮುಂದಿನ ವರ್ಷದಲ್ಲಾದರೂ ಹೊರ ರಾಜ್ಯಗಳಿಂದ ಬರುವ ಪಿಒಪಿ ವಿಗ್ರಹಕ್ಕೆ ಕಡಿವಾಣ ಹಾಕಿದಂತಾಗುತ್ತದೆ.

ಸೆ.6, ಮೈಸೂರು ಉದ್ಯೋಗ ಮೇಳ

ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳ ಸೇರಿಸುವಂತೆ ಎಡಿಸಿ ಡಾ.ಶಿವರಾಜು ಸಲಹೆ

ಮೈಸೂರು, ಆ.28(ಎಂಕೆ)- ಸೆ.6 ರಂದು ನಡೆಯುವ ಮೈಸೂರು ಉದ್ಯೋಗ ಮೇಳಕ್ಕೆ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿನ ಹಿರಿಯ ವಿದ್ಯಾರ್ಥಿಗಳನ್ನು ನೋಂದಾಯಿಸುವಂತೆ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರಿಗೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸೂಚಿಸಿದರು.

ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲೆಯ ಸರ್ಕಾರಿ, ಅನುದಾನಿತ, ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಮಾತನಾಡಿದ ಅವರು, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲಾಭಿವೃದ್ಧಿ ನಿಗಮ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಮೈಸೂರು ಮಹಾನಗರಪಾಲಿಕೆ ವತಿಯಿಂದ ಬೃಹತ್ ಉದ್ಯೋಗ ಮೇಳ ನಡೆಯಲಿದ್ದು, ಹಿರಿಯ ವಿದ್ಯಾರ್ಥಿಗಳು ಹೆಸರು ನೊಂದಾಯಿಸುವ ಮೂಲಕ ಉದ್ಯೋಗ ಲಭಿಸುವಂತಹ ಕಾರ್ಯದಲ್ಲಿ ಭಾಗಿಯಾಗುವಂತೆ ತಿಳಿಸಿದರು.


ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಜಿಲ್ಲೆಯ ಸರ್ಕಾರಿ, ಅನುದಾನಿತ, ಅನುದಾನ ರಹಿತ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಎಡಿಸಿ ಡಾ.ಪಿ.ಶಿವರಾಜು ಮಾತನಾಡಿದರು.

ವಿದ್ಯಾರ್ಥಿ ಸ್ನೇಹಿ ವಾತಾವರಣ ಸೃಷ್ಟಿಸಿ: ಇದೇ ವೇಳೆ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕಿ ಎಂ.ಪಿ.ನಾಗಮ್ಮ ಮಾತನಾಡಿ, ಕಾಲೇಜುಗಳಲ್ಲಿ ಉತ್ತಮ ಶೈಕ್ಷಣಿಕ ವ್ಯವಸ್ಥೆ ಮತ್ತು ವಿದ್ಯಾರ್ಥಿ ಸ್ನೇಹಿ ವಾತಾವರಣವನ್ನು ನಿರ್ಮಿಸಬೇಕು ಎಂದರು. ನಂತರ ಉದ್ಯೋಗ ಮೇಳಕ್ಕೆ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸುವ ಕುರಿತು ತಿಳಿಸಿಕೊಡಲಾಯಿತು. ನೋಡಲ್ ಅಧಿಕಾರಿ ಎನ್.ಎಂ.ವಿಜಯೇಂದ್ರಕುಮಾರ್, ರವಿಶಂಕರ್, ಸಿ.ಆರ್.ದಿನೇಶ್, ಕ್ರೀಡಾ ಸಂಚಾಲಕರಾದ ಮುರಳೀಧರ್, ಪ್ರಾಂಶುಪಾಲ ಸಂಘದ ಅಧ್ಯಕ್ಷರಾದ ಹನುಮಂತ ರಾವ್, ಉಪಾಧ್ಯಕ್ಷರಾದ ಸತ್ಯಪ್ರಸಾದ್ ಚಂದ್ರಶೇಖರ್, ಉದಯಶಂಕರ್, ರಾಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ವೀರಶೈವ ಲಿಂಗಾಯತ ವಧುವರರ ಸಮಾವೇಶ

ಮೈಸೂರು,ಆ.28-ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಆ.31ರಂದು ಮಧ್ಯಾಹ್ನ 3ರಿಂದ 6ರವರೆಗೆ ವೀರಶೈವ ಲಿಂಗಾಯತ ವಧುವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ವೀರಶೈವ ಲಿಂಗಾಯತ ವಧು-ವರರು ಈ ಸಮಾವೇಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ. ಆಸಕ್ತರು ಆ.30ರೊಳಗೆ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ ಮೊ.9686205346 ಸಂಪರ್ಕಿಸಿ.



ಶುಭಾಶಯ...

ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ ಅವರ ಹುಟ್ಟುಹಬ್ಬವನ್ನು ಶಾಸಕ ಜಿ.ಡಿ. ಹರೀಶ್‌ಗೌಡರ ನೇತೃತ್ವದಲ್ಲಿ ಆಚರಿಸಲಾಯಿತು. ಈ ವೇಳೆ ಬಳಗದ ಸದಸ್ಯರಾದ ಶ್ರೀನಿವಾಸ್ ಗೌಡ, ಕುಮಾರ್ ಬೀಡನಹಳ್ಳಿ, ಚಂದ್ರಶೇಖರ್, ನಾಗರಾಜು, ಸುದೀಪ್, ಶ್ರೀನಿವಾಸ್, ಮಹೇಶ್, ಪ್ರಮೋದ್ ಶುಭಾಶಯ ಕೋರಿದರು.

ಕೊಡಗಿನ ಟೆಕ್ಕಿ ರೋಷನ್ ಜೊತೆ ಸಪ್ತಪದಿ ತುಳಿದ ಆ್ಯಂಕರ್ ಅನುಶ್ರೀ

ಬೆಂಗಳೂರು: ಕನ್ನಡದ ಖ್ಯಾತ ನಿರೂಪಕಿ ಅನುಶ್ರೀ ಕೊಡಗು ಮೂಲದ ಟೆಕ್ಕಿ ರೋಷನ್ ಜೊತೆ ಗುರುವಾರ ವಿವಾಹವಾಗಿದ್ದಾರೆ. ಅನುಶ್ರೀ ಮದುವೆ ಬೆಂಗಳೂರಿನ ಹೊರವಲಯದಲ್ಲಿರುವ ಕಗ್ಗಲಿಪುರದಲ್ಲಿ ನಡೆದಿದೆ. ಅನುಶ್ರೀ ಅವರು ತಾವು ಯಾವ ರೀತಿಯಲ್ಲಿ ಮದುವೆ ಆಗಬೇಕು ಎಂದು ಕನಸು ಕಂಡಿದ್ದರೋ ಅದೇ ರೀತಿಯಲ್ಲಿ ಮದುವೆ ಆಗಿದ್ದಾರೆ.



ಇಷ್ಟು ದಿನ ಅನುಶ್ರೀ ಹೋದಲ್ಲಿ ಬಂದಲ್ಲಿ ಅವರ ಅಭಿಮಾನಿಗಳು, ಮಾಧ್ಯಮದವರು ನಿಮ್ಮ ಮದುವೆ ಯಾವಾಗ ಎಂದು ಕೇಳುತ್ತಲೇ ಇದ್ದರು. ಸೂಕ್ತ ಹುಡುಗ ಸಿಕ್ಕಿದಾಗ ಎಂದು ನಗುತ್ತಲೇ ಉತ್ತರಿಸುತ್ತಿದ್ದ ಅನುಶ್ರೀ ಕೊನೆಗೂ ರೋಷನ್ ಎಂಬುವವರ ಜೊತೆ ವಿವಾಹವಾಗಿದ್ದಾರೆ.

ನಿರೂಪಕಿ ಅನುಶ್ರೀ ಹಾಗೂ ರೋಷನ್ ಅದ್ದೂರಿ ಮದುವೆಗೆ ಶಿವರಾಜ್ ಕುಮಾರ್, ರಾಜ್ ಬಿ ಶೆಟ್ಟಿ, ಶರಣ್, ನೆನಪಿರಲಿ ಪ್ರೇಮ್, ಕಾವ್ಯ ಶಾ, ಸೋನಲ್ ಮೊಂಥೆರೋ, ನಟ ನಾಗಭೂಷಣ್, ಚೈತ್ರಾ ಜೆ ಆಚಾರ್, ಸೇರಿದಂತೆ ಸಾಕಷ್ಟು ಸ್ಟಾರ್ ಸೆಲೆಬ್ರಿಟಿಗಳು ಬಂದು ಶುಭ ಹಾರೈಸಿದ್ದಾರೆ.

ತಾಳಿ ಕಟ್ಟುವ ವೇಳೆ ಭಾವುಕ: ಶಾಲಾ-ಕಾಲೇಜು ದಿನಗಳಲ್ಲಿ ಕಷ್ಟದಲ್ಲಿ ಜೀವನ ಸಾಗಿಸಿ ತಮ್ಮ ಜೀವನವನ್ನು ತಾವೇ ರೂಪಿಸಿಕೊಂಡು ಬೆಂಗಳೂರಿಗೆ ಬಂದು ಚಿತ್ರರಂಗ, ಕನ್ನಡ ಕಿರುತೆರೆಯಲ್ಲಿ ಕಷ್ಟಪಟ್ಟು ವೃತ್ತಿ ಕಂಡುಕೊಂಡು ಇಂದು ಸ್ಟಾರ್ ನಿರೂಪಕಿಯಾಗಿ ಬೆಳೆದು ನಿಂತಿರುವ ಅನುಶ್ರೀ ವೈಯಕ್ತಿಕ ಜೀವನದಲ್ಲಿ ತಮ್ಮ ತಾಯಿ ಮತ್ತು ತಮ್ಮನ ಜವಾಬ್ದಾರಿ ವಹಿಸಿಕೊಂಡಿದ್ದರು. ಇಷ್ಟು ವರ್ಷಗಳ ಕಾಲ ವೈಯಕ್ತಿಕ ಮತ್ತು ವೃತ್ತಿ ಬದುಕಿನ ಜವಾಬ್ದಾರಿಗಳನ್ನು ನಿರ್ವಹಿಸಿ ಮದುವೆಯಾಗುವ ವೇಳೆ ಅನುಶ್ರೀ ಭಾವುಕರಾಗಿದ್ದು ಕಂಡುಬಂತು.

ಆಟೋಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಆರು ಮಂದಿ ಸಾವು




ಮಂಗಳೂರು, ಆ.28- ಕಾಸರಗೋಡಿನಿಂದ ಮಂಗಳೂರಿಗೆ ಹೋಗುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ) ಯ ಬಸ್ ಗುರುವಾರ ಬ್ರೇಕ್ ಫೇಲ್ ಆಗಿ ರಸ್ತೆ ಬದಿ ನಿಂತಿದ್ದ ವ್ಯಕ್ತಿಗಳಿಗೆ ಮತ್ತು ಆಟೋಗೆ ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಮಗು ಸೇರಿ ಆರು ಜನ ಮೃತಪಟ್ಟಿದ್ದಾರೆ.

ಇಂದು ಮಧ್ಯಾಹ್ನ 1.30ರ ಸುಮಾರಿಗೆ ಈ ಅಪಘಾತ ಸಂಭವಿಸಿದ್ದು, ಬ್ರೇಕ್ ಫೇಲ್ ಆಗಿದ್ದರಿಂದ ಬಸ್, ಚಾಲಕನ ನಿಯಂತ್ರಣ ತಪ್ಪಿ, ಹಿಂದಕ್ಕೆ ಬಂದು ಬಸ್ ನಿಲ್ದಾಣದಲ್ಲಿ ನಿಂತಿದ್ದ ವ್ಯಕ್ತಿಗಳಿಗೆ ಹಾಗೂ ಆಟೋಗೆ ಡಿಕ್ಕಿ ಹೊಡೆ ದಿದೆ. ಬಸ್ ನಿಲ್ದಾಣದಲ್ಲಿ ಬಸ್‌ಗಾಗಿ ಕಾಯುತ್ತಿದ್ದ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಮೂವರು ಮಹಿಳೆಯರು, ಇಬ್ಬರು ಪುರುಷರು ಹಾಗೂ ಮಗು ಸೇರಿದಂತೆ ಆರು ಜನ ಸಾವನ್ನಪ್ಪಿದ್ದಾರೆ. ಇದಲ್ಲದೆ, ಏಳು ಜನರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೇರಳದ ಮಂಜೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಪತ್ನಿ ಕೊಂದ ಪತಿಗೆ ಮರಣದಂಡನೆ

ಮೈಸೂರು,ಆ.28(ಎಂಕೆ)- ಜಮೀನು ಮಾರಾಟಕ್ಕೆ ಸಹಿ ಮಾಡದ ತನ್ನ ಹೆಂಡತಿಯನ್ನೇ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದ ಪತಿಗೆ ಮರಣದಂಡನೆ ವಿಧಿಸಿ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಆದೇಶಿಸಿದೆ.

ಮೈಸೂರು ಆಲನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಮಹೇಶ ಶಿಕ್ಷೆಗೆ ಗುರಿಯಾದವನು. ಶಿಲ್ಪಾ ಎಂಬುವರನ್ನು ಮದುವೆಯಾಗಿದ್ದ ಮಹೇಶನಿಗೆ ಇಬ್ಬರು ಮಕ್ಕಳಿದ್ದು, ತನ್ನ ಜಮೀನು ಮಾರಾಟಕ್ಕೆ ಸಹಿ ಮಾಡುವಂತೆ ಹೆಂಡತಿಯನ್ನು ಪೀಡಿಸುತ್ತಿದ್ದ. ಸಹಿ ಮಾಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಈತ, 2024ರ ಏ.15 ರಂದು ಸಂಜೆ 7.30ರ ಸುಮಾರಿಗೆ ಎಸ್.ವಿ.ಪಿ ನಗರ ಆರ್ಚ್ ಬಳಿ ನ್ಯೂ ಕಿಶೋರ್ ಎಂಟರ್ ಪ್ರೈಸಸ್ ಅಂಗಡಿ ಸಮೀಪ ಶಿಲ್ಪಾಳ ಕುತ್ತಿಗೆಗೆ ಹಲವು ಬಾರಿ ಕೊಚ್ಚಿ ಪರಾರಿಯಾಗಿದ್ದ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಶಿಲ್ಪಾಳನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಆಕೆ ಮೃತಪಟ್ಟಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಆಲನಹಳ್ಳಿ ಠಾಣೆ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ರೂಪ, ಅವರು ಮಹೇಶನಿಗೆ ಮರಣ ದಂಡನೆ ಹಾಗೂ 1 ಲಕ್ಷ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕರಾದ ಬಿ.ಈ.ಯೋಗೇಶ್ವರ ಸರ್ಕಾರದ ಪರ ವಾದ ಮಂಡಿಸಿದ್ದರು.



ಮೈಸೂರು ಮಿತ್ರ ಶುಕ್ರವಾರ 29 ಆಗಸ್ಟ್ 2025

ಚಾಮುಂಡಿಬೆಟ್ಟಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ

ಚಾಮುಂಡಿಬೆಟ್ಟ ಹಿಂದೂಗಳಿಗೆ ಮಾತ್ರ ಸೇರಿಲ್ಲ ಎಂಬ ಡಿಕೆಶಿ ಹೇಳಿಕೆಗೆ ಸಂಸದ ಯದುವೀರ್ ತಿರುಗೇಟು

- ಕಾಂಗ್ರೆಸ್ ಸರ್ಕಾರಕ್ಕೆ ಹಿಂದೂ ದೇವಾಲಯಗಳೇ ಟಾರ್ಗೆಟ್
- ಹಿಂದೂ ಧರ್ಮದ ಉಳಿವಿಗೆ ಎಂತಹ ಹೋರಾಟಕ್ಕೂ ಸಿದ್ಧ
- ಆರ್‌ಎಸ್‌ಎಸ್ ಗೀತೆ ಹಾಡಿ ಕ್ಷಮೆ ಕೇಳಿದ ಡಿ.ಕೆ.ಶಿವಕುಮಾರ್

ಮೈಸೂರು, ಆ.28(ಬಿಎಲ್‌ಯು)- ಮೈಸೂರಿನ ಚಾಮುಂಡಿಬೆಟ್ಟಕ್ಕೆ ಸಾವಿರಾರು ವರ್ಷಗಳ ಐತಿಹಾಸಿಕ ಹಿನ್ನೆಲೆ ಇದ್ದು, ಮಾರ್ಕಂಡೇಯ ಮಹರ್ಷಿಗಳು ತಪಸ್ಸು ಮಾಡಿದ ಪೌರಾಣಿಕ ಕಥೆ ಸಾರುತ್ತದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ನಗರದಲ್ಲಿ ನಿನ್ನೆ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಚಾಮುಂಡಿಬೆಟ್ಟ ಕೇವಲ ಹಿಂದೂಗಳ ಆಸ್ತಿಯಲ್ಲ ಎಂಬ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಯದುವೀರ್ ಒಡೆಯರ್ ತಿರುಗೇಟು ನೀಡಿದ್ದಾರೆ.

ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿ ಎಂಬುವುದರಲ್ಲಿ ಯಾವುದೇ ಸಂಶಯ ಬೇಡ. ವಾಸ್ತವ ಸಂಗತಿ ಹೀಗಿರುವಾಗ ಚಾಮುಂಡೇಶ್ವರಿ ದೇವಸ್ಥಾನ ಹಿಂದೂಗಳ ಆಸ್ತಿ ಅಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿರುವುದು ಹಾಸ್ಯಾಸ್ಪದ ಹೇಳಿಕೆಯಾಗಿದೆ. ಗೌರಿ, ಗಣೇಶ ಹಬ್ಬದ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್ ಅವರು ಈ ರೀತಿಯ ಹೇಳಿಕೆ ನೀಡಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಯದುವೀರ್ ಒಡೆಯರ್

ಚಾಮುಂಡಿಬೆಟ್ಟದಲ್ಲಿ ಮಾರ್ಕಂಡೇಯ ಮಹರ್ಷಿಗಳು ತಪಸ್ಸು ಮಾಡಿದ್ದಾರೆ. ಚಾಮುಂಡಿ ಬೆಟ್ಟಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಅಂದು ಬೇರೆ ಧರ್ಮಗಳಿರಲಿಲ್ಲ ಎಂದು ಹೇಳಿದರು.

ನಮ್ಮ ಧಾರ್ಮಿಕ ಕ್ಷೇತ್ರಗಳಿಗೆ ಎಲ್ಲರಿಗೂ ಮುಕ್ತ ಪ್ರವೇಶವಿದೆ. ನಾವು ಜಾತ್ಯಾತೀತ ಹಾಗೂ ಧರ್ಮಾತೀತ ಭಾವನೆಯಿಂದ ನೋಡುತ್ತೇವೆ. ಹಾಗೆಂದ ಮಾತ್ರಕ್ಕೆ ನಮ್ಮ ಹಿಂದೂ ಧರ್ಮವನ್ನು ದುರ್ಬಳಕೆ ಮಾಡಿಕೊಳ್ಳಲು ಅವರಿಗೆ ಬಿಡುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ನಮ್ಮ ಧಾರ್ಮಿಕ ಸ್ಥಳ ಹಿಂದೂಗಳಿಗೆ ಸೇರಿಲ್ಲ ಎಂದು ಹೇಳಬಾರದು. ಇಂತಹ ಹೇಳಿಕೆಯಿಂದ ಕೋಟ್ಯಾಂತರ ಜನರ ಧಾರ್ಮಿಕ ಭಾವನೆಗೆ ಧಕ್ಕೆಯಾಗುತ್ತದೆ. ಇನ್ನು ಮುಂದಾದರೂ ಡಿ.ಕೆ.ಶಿವಕುಮಾರ್ ಅವರು ಜವಾಬ್ದಾರಿಯಿಂದ ಮಾತನಾಡಬೇಕು ಎಂದು ಯದುವೀರ್ ಒಡೆಯರ್ ಸಲಹೆ ನೀಡಿದರು.

ರಾಜ್ಯ ಸರ್ಕಾರ ಚಾಮುಂಡಿಬೆಟ್ಟವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಮುಂದಾಗಿದೆ. ಈ ಮೂಲಕ ಅಲ್ಲಿನ ಧಾರ್ಮಿಕ ಮಹತ್ವಕ್ಕೆ ಧಕ್ಕೆ ಉಂಟು ಮಾಡುತ್ತಿದೆ. ರಾಜ್ಯ ಸರ್ಕಾರ ಹಿಂದೂ ಧರ್ಮೀಯರ ದೇವಾಲಯವನ್ನು ಟಾರ್ಗೆಟ್ ಮಾಡುತ್ತಿದೆ ಎಂದು ಆರೋಪಿಸಿದರು.

ಡಿ.ಕೆ.ಶಿವಕುಮಾರ್ ಅವರು ಮುಕ್ತ ಮನಸ್ಸಿನಿಂದ ಆರ್‌ಎಸ್‌ಎಸ್ ಗೀತೆ ಹಾಡಿದರು. ಇದಕ್ಕೆ ತಮ್ಮ ಪಕ್ಷದವರಿಂದಲೇ ವಿರೋಧ ವ್ಯಕ್ತವಾದಾಗ ಕ್ಷಮೆ ಕೇಳಿದರು. ರಾಜ್ಯದಲ್ಲಿ ಜನರಿಗೆ ಸಂಬಂಧಿಸಿದಂತೆ ಬಹಳಷ್ಟು ಗಂಭೀರ ಸಮಸ್ಯೆಗಳಿವೆ. ಇವುಗಳನ್ನು ಪರಿಹಾರ ಮಾಡುವ ಬದಲು ರಾಜಕೀಯ ಕಾರಣಕ್ಕಾಗಿ ಹಾಸ್ಯಾಸ್ಪದ ಹೇಳಿಕೆ ನೀಡಬಾರದು ಎಂದು ಅವರು ಸಲಹೆ ನೀಡಿದರು.

ಧರ್ಮದ ವಿಚಾರ ಬಂದಾಗ ನಾವು ಎಂತಹ ಹೋರಾಟಕ್ಕೂ ಸಿದ್ಧರಾಗಿದ್ದೇವೆ. ಈ ನಿಟ್ಟಿನಲ್ಲಿ ನಮ್ಮ ಧರ್ಮದ ಉಳಿವಿಗೆ ಹೋರಾಟ ಮಾಡುತ್ತೇವೆ ಎಂದು ಯದುವೀರ್ ಒಡೆಯರ್ ಎಚ್ಚರಿಸಿದರು.

'ಭುವನೇಶ್ವರಿ' ಒಪ್ಪದ ಬಾನು ಮುಷ್ತಾಕ್ ಅವರು 'ಚಾಮುಂಡೇಶ್ವರಿ' ಒಪ್ಪುವರೇ...

ಮಾಜಿ ಸಂಸದ ಪ್ರತಾಪ್ ಸಿಂಹ ತೀಕ್ಷ್ಣ ಪ್ರಶ್ನೆ

- ಮುಸ್ಲಿಂರು ಕನ್ನಡ ಕಲಿಯಲು ಭುವನೇಶ್ವರಿ ಮೂರ್ತಿ ಅಡ್ಡಿಯಂತೆ
- ಅರಿಶಿನ, ಕುಂಕುಮ ಬಾನುಗೆ ಅಡ್ಡಿಯಂತೆ
- ನಮ್ಮ ಆಚಾರ, ಸಂಸ್ಕೃತಿ ಒಡೆಯುವ ಪ್ರಯತ್ನವಾಗುತ್ತಿದೆ
- ತಮಿಳುನಾಡಿನ ಮುಸ್ಲಿಂರಿಗೆ ತಮಿಳು ಮಾತೃಭಾಷೆ; ಇಲ್ಲಿ ಉರ್ದು ಭಾಷೆ

ಮೈಸೂರು, ಆ.28(ಬಿಎಲ್‌ಯು)- ಕನ್ನಡವನ್ನು ಭುವನೇಶ್ವರಿ ಮಾತೆಯಾಗಿ ಒಪ್ಪದ ಬಾನು ಮುಷ್ತಾಕ್ ಅವರು ಮೈಸೂರು ದಸರಾ ಉದ್ಘಾಟನೆ ವೇಳೆ ನಾಡದೇವಿ ರೂಪದಲ್ಲಿನ ಚಾಮುಂಡೇಶ್ವರಿಯನ್ನು ಒಪ್ಪುತ್ತಾರೆಯೇ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ.



ಪ್ರತಾಪ್ ಸಿಂಹ

ಮೈಸೂರಿನಲ್ಲಿ ನಿನ್ನೆ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನೀವು ನಂಬಿರುವ ನಿಮ್ಮ ಅಲ್ಲಾ ನಿಮ್ಮನ್ನು (ಮಹಿಳೆ) ಮಸೀದಿಗೆ ಕರೆಸಿಕೊಳ್ಳುವುದಿಲ್ಲ. ನಮ್ಮ ದೇವರು ಹೇಗೆ ನಿಮ್ಮನ್ನು ಕರೆಸಿಕೊಳ್ಳುತ್ತಾರೆ ಎಂದು ಪ್ರಶ್ನಿಸಿದರು.

ಸಾಹಿತ್ಯ ಸಮಾರಂಭದಲ್ಲಿ ಮಾತನಾಡುವ ವೇಳೆ, ಮುಸ್ಲಿಂರು ಕನ್ನಡ ಕಲಿಯಲು ಭುವನೇಶ್ವರಿ ಮೂರ್ತಿ ಅಡ್ಡಿಯಾಯಿತು ಎಂದು ಸ್ವತಃ ಬಾನು ಮುಷ್ತಾಕ್ ಅವರೇ ಹೇಳಿದ್ದರು. ಹೀಗಿರುವಾಗ ದಸರಾ ಉದ್ಘಾಟನೆ ವೇಳೆ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯುವುದು ಸೇರಿದಂತೆ ಪೂಜೆ ಮಾಡುವುದನ್ನು ಬಾನು ಮುಷ್ತಾಕ್ ಅವರು ಹೇಗೆ ಒಪ್ಪಿಕೊಳ್ಳುತ್ತಾರೆ ಎಂದು ಪ್ರತಾಪ್ ಸಿಂಹ ಮರು ಪ್ರಶ್ನಿಸಿದರು.

ಹಿಂದೂ ಧರ್ಮೀಯರ ಯಾರ ಮನೆಗೆ ಹೋದರೂ ಸುಮಂಗಲಿಯರು ಕುಂಕುಮ ಕೊಡುತ್ತಾರೆ. ದೇವಸ್ಥಾನಕ್ಕೆ ಹೋದರೆ ಕುಂಕುಮ, ಪ್ರಸಾದ ನೀಡುತ್ತಾರೆ. ಆದರೆ ಅರಿಶಿನ ಕುಂಕುಮದ ಬಗ್ಗೆ ಬಾನು ಅವರಿಗೆ ತಕರಾರು, ಕಿರಿಕಿರಿ ಇದೆ. ಅರಿಶಿನ ಕುಂಕುಮದ ಬಗ್ಗೆ ಬಾನು ಮುಷ್ತಾಕ್ ಅವರಿಗೆ ದ್ವೇಷ ಭಾವನೆ ಇದೆ. ಹೀಗಿರುವಾಗ ಹಿಂದೂಗಳ ಧಾರ್ಮಿಕ ಭಾವನೆ ಇರುವ ತಾಯಿ ಚಾಮುಂಡೇಶ್ವರಿಯನ್ನು ಪೂಜಿಸಿ ಬಾನು ಹೇಗೆ ದಸರಾ ಉದ್ಘಾಟನೆ ಮಾಡುತ್ತಾರೆ ಎಂದು ಕೇಳಿದರು.

ತಮಿಳು ಮಾತೃಭಾಷೆ; ನಮ್ಮಲ್ಲಿ ಉರ್ದು: ತಮಿಳುನಾಡಿನಲ್ಲಿರುವ ಮುಸ್ಲಿಂರಿಗೆ ಮಾತೃಭಾಷೆ ತಮಿಳು. ಆದರೆ ಕರ್ನಾಟಕದಲ್ಲಿರುವ ಮುಸ್ಲಿಂರಿಗೆ ಕನ್ನಡ ಮಾತೃಭಾಷೆಯಾಗದೆ, ಉರ್ದು ಮಾತೃಭಾಷೆಯಾಗಿದೆ. ಬಾನು ಮುಷ್ತಾಕ್ ಅವರು ಮುಸ್ಲಿಂ ಸಮುದಾಯದವರು ಎಂಬ ಕಾರಣಕ್ಕೆ ನಾನು ಅವರು ದಸರಾ ಉದ್ಘಾಟಿಸುವುದನ್ನು ವಿರೋಧಿಸುತ್ತಿಲ್ಲ. ಟಿಪ್ಪು ಜಯಂತಿ ಮಾಡಿ ಎಂದು ಮುಸ್ಲಿಂರು ಕೇಳಿರಲಿಲ್ಲ, ಆದರೆ ಸಿದ್ದರಾಮಯ್ಯ ಅವರು ಮುಸ್ಲಿಂರ ಓಲೈಕೆಗಾಗಿ ಟಿಪ್ಪು ಜಯಂತಿ ಮಾಡಿದರು. ಹಾಗೆಯೇ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಹ್ವಾನಿಸಿ ಎಂದು ಯಾವ ಮುಸ್ಲಿಂರು ಕೇಳದಿದ್ದರೂ ಧರ್ಮ ತುಷ್ಟೀಕರಣಕ್ಕಾಗಿ ಸಿದ್ದರಾಮಯ್ಯ ಅವರು ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮುಸ್ಲಿಂರು ಹಾಗೂ ಕ್ರಿಶ್ಚಿಯನ್ನರು ಆಕ್ರಮಣಕಾರಿಯಾಗಿ ಭಾರತಕ್ಕೆ ಬಂದರು. ಮುಸ್ಲಿಂ ರಾಜರು ನಮ್ಮ ಆಚಾರ, ವಿಚಾರ, ಸಂಸ್ಕೃತಿ ಒಡೆಯಲು ಯತ್ನಿಸಿದರು. ಈಗ ಬಾನು ಮುಷ್ತಾಕ್ ಕೂಡ ನಮ್ಮ ನಂಬಿಕೆಯನ್ನು ಒಡೆಯುತ್ತಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ ಮಾಡಿಸುವುದನ್ನು ಸ್ವಾಗತಿಸಿದ ಸಂಸದ ಯದುವೀರ್ ಅವರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಪ್ರತಾಪ್ ಸಿಂಹ ಅವರು, ಈ ವಿಚಾರವಾಗಿ ನಮ್ಮ ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೀಡಿದ ಹೇಳಿಕೆಯನ್ನು ಉಲ್ಲೇಖಿಸಿ, ಬೆಂಬಲಿಸಿ ನಾನು ಈ ಅಭಿಪ್ರಾಯ ನೀಡಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಭುವನೇಶ್ವರಿ ಬಗ್ಗೆ ಅವಮಾನಕಾರಿಯಾಗಿ ಮಾತನಾಡಿದವರಿಂದ ದಸರಾ ಉದ್ಘಾಟನೆ ಮಾಡಿಸಬೇಕೇ ಅಥವಾ ಬೇಡವೇ ಎಂದು ಮೈಸೂರು ಜನರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಿ ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

ಶಿವನ ಕಪಾಲಿ ಬೆಟ್ಟವನ್ನು ಏಸು ಬೆಟ್ಟ ಮಾಡಲು ಮುಂದಾದ ಡಿ.ಕೆ.ಶಿವಕುಮಾರ್

ಶಿವನ ಕಪಾಲಿ ಬೆಟ್ಟವನ್ನು ಏಸು ಬೆಟ್ಟ ಮಾಡಲು ಹೊರಟ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ನಮಗೆ ಧರ್ಮದ ಪಾಠ ಬೇಡ ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು. ಅನ್ಯ ಧರ್ಮವನ್ನು ಬರೀ ಓಲೈಕೆಗಾಗಿ ಬ್ರದರ್ಸ್ ಎಂದು ಕರೆಯುವ ಡಿ.ಕೆ.ಶಿವಕುಮಾರ್ ಅವರಿಂದ ನಮಗೆ ಧರ್ಮದ ಅರಿವು ಮೂಡಿಸುವುದು ಬೇಡ. ಸಿದ್ದರಾಮಯ್ಯ ಅವರ ತಂತ್ರಗಾರಿಕೆ ಕಾಂಗ್ರೆಸ್ ಮೂರ್ಖರಿಗೆ ಅರ್ಥವಾಗುತ್ತಿಲ್ಲ. ಮುಸ್ಲಿಂರನ್ನು ತಮ್ಮ ಬೆನ್ನ ಹಿಂದೆ ಇಟ್ಟುಕೊಳ್ಳಲು ಸಿದ್ದರಾಮಯ್ಯ ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿದ್ದಾರೆ ಎಂದು ಕಿಡಿಕಾರಿದರು.

ನಾಳೆ ತಮ್ಮ ಕುರ್ಚಿಗೆ ಕಂಟಕ ಬಂದಾಗ ಮುಸ್ಲಿಂ ಶಕ್ತಿಯನ್ನು ತಮ್ಮ ಬೆನ್ನ ಹಿಂದೆ ನಿಲ್ಲಿಸಿಕೊಳ್ಳಲು ಸಿದ್ದರಾಮಯ್ಯ ಹೆಣದಿರುವ ತಂತ್ರ ಇದು. ಕಾಂಗ್ರೆಸ್ ಅನ್ನು ಬ್ಲ್ಯಾಕ್‌ಮೇಲ್ ಮಾಡಲು ಸಿದ್ದರಾಮಯ್ಯ ಮಾಡಿರುವ ಪ್ಲಾನ್ ಕೈ ನಾಯಕರಿಗೆ ತಿಳಿಯುತ್ತಿಲ್ಲ ಎಂದರು. ಆರ್‌ಎಸ್‌ಎಸ್ ಗೀತೆ ಹಾಡಿರುವುದಕ್ಕೆ ಡಿ.ಕೆ.ಶಿವಕುಮಾರ್ ಕ್ಷಮೆ ಕೇಳುವ ಸ್ಥಿತಿ ಬಂದಿದೆ ಎಂದರೆ ಕಾಂಗ್ರೆಸ್‌ಗೆ ಮಾತೃಭೂಮಿಗೆ ಎಷ್ಟು ಗೌರವವಿದೆ ಎಂದು ತೋರುತ್ತದೆ ಎಂದು ಪ್ರತಾಪ್ ಸಿಂಹ ಗೇಲಿ ಮಾಡಿದರು.

ಒಂದು ಪತ್ರಿಕೆ ಮಹತ್ವ ಹೆಚ್ಚಳದಲ್ಲಿ ಪತ್ರಿಕಾ ವಿತರಕರ ಪಾತ್ರ ಮಹತ್ತರವಾದುದು

- ಸುತ್ತೂರು ಶ್ರೀ ಅಭಿಮತ
- ವಿಶ್ವ ಪತ್ರಿಕಾ ವಿತರಕರ ದಿನಾಚರಣೆ
- ಪತ್ರಿಕೆ ಓದುಗರ ಕೈ ಸೇರುವುದೇ ಸಾರ್ಥಕತೆ



ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಬುಧವಾರ ನಡೆದ 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಆ.28(ಎಂಕೆ)-ಓದುಗರ ಕೈಗೆ ತಲುಪಿಸಿ ಪತ್ರಿಕೆಯ ಮಹತ್ವ ಹೆಚ್ಚಿಸುವ ಪತ್ರಿಕಾ ವಿತರಕರ ಮೇಲೆ ಮಹತ್ತರ ಜವಾಬ್ದಾರಿ ಇದ್ದು, ಪತ್ರಿಕಾ ವಿತರಣೆ ವೃತ್ತಿ ಎಂದಿಗೂ ಕೀಳಲ್ಲ ಎಂದು ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಿಕೆಗಳು ಓದುಗರ ಕೈಗೆ ತಲುಪಿದಾಗಲೇ ಪತ್ರಿಕೆ ತನ್ನ ಮಹತ್ವ ಪಡೆದುಕೊಳ್ಳಲಿದೆ. ಈ ಕಾರ್ಯ ಮಾಡುವ ಪತ್ರಿಕಾ ವಿತರಕ ವೃತ್ತಿ ಮಹತ್ವದ್ದಾಗಿದೆ ಎಂದರು.

ದಿನಪತ್ರಿಕೆಗಳು ಮನುಷ್ಯರ ಬದುಕಿನ ಅವಿಭಾಜ್ಯವಾಗಿದೆ. ದೃಶ್ಯ ಮಾಧ್ಯಮಗಳ ಮೂಲಕ ಜಗತ್ತಿನಲ್ಲಾಗುವ ಎಲ್ಲಾ ಸಂಗತಿಗಳನ್ನು ತಿಳಿದುಕೊಳ್ಳುವ ಮಟ್ಟಕ್ಕೆ ತಂತ್ರಜ್ಞಾನ ಬೆಳೆದಿದ್ದರೂ ಬೆಳಗ್ಗೆ ಎದ್ದು ಪೇಪರ್ ನೋಡಿದರಷ್ಟೇ ಸಮಾಧಾನ ಎನ್ನುವವರು ಸಾಕಷ್ಟು ಜನರಿದ್ದಾರೆ. ಒಂದು ದಿನ ಮನೆಗೆ ಪತ್ರಿಕೆ ಬರದಿದ್ದರೂ ಪರದಾಡುವವರನ್ನು ಕಂಡಿದ್ದೇವೆ. ಗಾಳಿ-ಮಳೆ-ಚಳಿಯನ್ನು ಲೆಕ್ಕಿಸದೆ ಪತ್ರಿಕೆ ವಿತರಣೆ ಮಾಡುವ ವಿತರಕ ವೃತ್ತಿ ಮಹತ್ವದ್ದಾಗಿದೆ ಎಂದು ಶ್ಲಾಘಿಸಿದರು.

ವಿದೇಶಗಳಲ್ಲಿ ಪತ್ರಿಕೆಗಳನ್ನು ಪ್ಲಾಸ್ಟಿಕ್‌ನಲ್ಲಿ ಸುತ್ತಿ ಮನೆ ಬಾಗಿಲಲ್ಲಿ ಇಟ್ಟು ಹೋಗಿರುತ್ತಾರೆ. ಆದರೆ, ನಮ್ಮ ದೇಶದಲ್ಲಿ ಗೌರವದಿಂದ ಮನೆ ಮನೆಗೆ ತೆರಳಿ, ಓದುಗರ ಕೈಗೆ ಕೊಡುವ ಸಂಸ್ಕೃತಿ ಇದೆ. ಪತ್ರಿಕೆ ವಿತರಕ ದೇಶದ ಮೊದಲ ಪ್ರಜೆಯಾಗಬಹುದು ಎಂಬುದಕ್ಕೆ ಮಾಜಿ ರಾಷ್ಟ್ರಪತಿ ದಿವಂಗತ ಎಪಿಜೆ ಅಬ್ದುಲ್ ಕಲಾಂ ಸಾಕ್ಷಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಪತ್ರಿಕಾ ವಿತರಕರ ಅನುಕೂಲತೆಗೆ ಸಂಘ ರಚನೆ ಮಾಡುವುದು ಅವಶ್ಯವಾಗಿದೆ. ಸಂಘ ಕಟ್ಟುವಾಗಲೂ ಸಾಕಷ್ಟು ಅಡೆ-ತಡೆಗಳನ್ನು ಎದುರಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿತರಕರ ಒಕ್ಕೂಟ ಯಶಸ್ವಿಯಾಗಿ ಮುನ್ನಡೆಯಲಿ ಎಂದು ಆಶಿಸಿದರು.

ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮಾತನಾಡಿ, ಮೂಲತಃ ಪತ್ರಿಕಾ ವಿತರಕನಾಗಿ ಬೆಳೆದ ನಾನು ಎಲ್ಲಿಯೇ ಪತ್ರಿಕಾ ವಿತರಕರ ಕಾರ್ಯಕ್ರಮಗಳು ನಡೆದರೂ ಭಾಗವಹಿಸುತ್ತೇನೆ. ಪತ್ರಿಕಾ ವಿತರಣೆ ವೃತ್ತಿ ನಿಜಕ್ಕೂ ಕೀಳಲ್ಲ ಪತ್ರಿಕಾ ವಿತರಕನಾಗಿ ನನ್ನ ವೃತ್ತಿ ಜೀವನ ಆರಂಭಿಸಿ, ಇಂದು ಈ ಸ್ಥಾನದಲ್ಲಿದ್ದೇನೆ ಎಂದು ಪ್ರೋತ್ಸಾಹಿಸಿದರು.


ಕ್ಷೇಮನಿಧಿ ಸ್ಥಾಪಿಸಿ, ಅಕಾಡೆಮಿ ಸ್ಥಾನಮಾನ ಕಲ್ಪಿಸಲು ಮನವಿ...

"ಕೊರೊನಾ ಸಂದರ್ಭ ಪ್ರಾಣದ ಹಂಗು ತೊರೆದು ವೃತ್ತಿಯಲ್ಲಿ ತೊಡಗಿದ್ದ ಪತ್ರಿಕಾ ವಿತರಕರ ಕಷ್ಟಕ್ಕೆ ಸರ್ಕಾರದ ಮಟ್ಟದಲ್ಲಿ ಕ್ಷೇಮನಿಧಿ ಸ್ಥಾಪನೆಯಾಗಬೇಕು. ಹಾಗೆಯೇ ಮಾಧ್ಯಮ ಅಕಾಡೆಮಿಯಲ್ಲಿ ಸೂಕ್ತ ಸ್ಥಾನ-ಮಾನ ಕಲ್ಪಿಸಬೇಕು.

-ಕೆ.ಶಂಭುಲಿಂಗ, ರಾಜ್ಯಾಧ್ಯಕ್ಷ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಸಂಘ.

ಪತ್ರಿಕೆಯ ನರಮಂಡಲ: ಪತ್ರಿಕಾ ವಿತರಕರು ಪತ್ರಿಕೆಯೊಂದರ ನರಮಂಡಲವಿದ್ದಂತೆ. ಪತ್ರಿಕೋದ್ಯಮದ ಬೆನ್ನುಮೂಳೆಯಂತೆ ದೇಶದ ಆರ್ಥಿಕತೆಯ ಪಾಲುದಾರರೂ ಆಗಿರುವ ಪತ್ರಿಕಾ ವಿತರಕರು, ನಿನ್ನೆ ಮತ್ತು ನಾಳೆ ಎಂಬುದರ ಚಿಂತಿಸದೆ, ವೃತ್ತಿಯ ಕಡೆ ಗಮನ ಹರಿಸಿ. ಪತ್ರಿಕಾ ವಿತರಕರ ಸಮಸ್ಯೆಗಳನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗುವುದು ಎಂದು ಭರವಸೆ ನೀಡಿದರು. ಸಮ್ಮೇಳನಾಧ್ಯಕ್ಷ ಎಂ.ಎನ್. ನಾಗರಾಜ್, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಜೆ.ಎಸ್.ಹೋಮದೇವ, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಡಾ.ಎಸ್.ನಾಗಣ್ಣ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಅಧ್ಯಕ್ಷ ಕೆ.ದೀಪಕ್, ಮಾಜಿ ಅಧ್ಯಕ್ಷ ಸಿ.ಕೆ.ಮಹೇಂದ್ರ, ಮುಖಂಡ ವೇಣುಗೋಪಾಲ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜವರಪ್ಪ, ನಗರಪಾಲಿಕೆ ಮಾಜಿ ಸದಸ್ಯ ವೇಣುಗೋಪಾಲ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪ್ರಸರಣ ವಿಭಾಗದ ವ್ಯವಸ್ಥಾಪಕ ಟಿ.ಎಸ್.ಗೋಪಿನಾಥ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ಮಾಜಿ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ರಾಜ್ಯ ಸಮಿತಿ ಸದಸ್ಯ ಬಿ.ರಾಘವೇಂದ್ರ, ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಜನ್ಮದಿನದ ಶುಭಾಶಯ...



ಮೈಸೂರ್ ರೇಸ್ ಕ್ಲಬ್ ಅಧ್ಯಕ್ಷರಾದ ಜಿ.ವೆಂಕಟೇಶ್ ಅವರ ಜನ್ಮದಿನಕ್ಕೆ ಶುಭಾಶಯ ಕೋರಲಾಯಿತು. ಈ ವೇಳೆ ಅವರ ಧರ್ಮಪತ್ನಿ ಪ್ರೇಮ, ಭೈರವ ಗ್ರೂಪ್ ಮಾಲೀಕ ಬಿ.ಮಹದೇವ್, ಮೈಸೂರು ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಅಭಿಷೇಕ್, ದರ್ಶನ್, ಅಪ್ಪು ಇದ್ದರು.

ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಭಾಗಿ



ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ವತಿಯಿಂದ ಹಾವೇರಿಯ ರಜನಿ ಸಭಾ ಭವನದಲ್ಲಿ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ದೇಶಕರು, ಹೊಸದಾಗಿ ಆಯ್ಕೆಯಾದ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನಡೆದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಆರ್.ಸೋಮಣ್ಣ, ಕೆ.ಗಿರೀಶ್ ಭಾಗವಹಿಸಿದ್ದರು.

ಇಂದು ಜನಪದ ಕಲಾವಿದರ ಸಭೆ

ಮೈಸೂರು, ಆ. 28- ಈ ಬಾರಿಯ ಯುವ ದಸರಾ ಮುಖ್ಯ ವೇದಿಕೆಯಲ್ಲಿ ಮೈಸೂರಿನ ಸಾಂಸ್ಕೃತಿಕ ದಸರಾ ಪರಂಪರೆ ಉಳಿಸಲು ಹಾಗೂ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡುವ ಮೂಲಕ 2 ದಿನ ಅವಕಾಶ ನೀಡಬೇಕೆಂದು ಹಕ್ಕೊತ್ತಾಯ ಮಾಡಲು ನವ್ಯ ಜನಪದ ಅನುಷ್ಠಾನದ ವಿಷಯವಾಗಿ ಪ್ರೊ.ನಂಜರಾಜ ಅರಸು ಮಾರ್ಗದರ್ಶನದಲ್ಲಿ ನಾಳೆ (ಆ. 29)ಬೆಳಗ್ಗೆ 11 ಗಂಟೆಗೆ ನಗರದ ಕಲಾಮಂದಿರದ ಚಿಂತನ ಚಾವಡಿಯಲ್ಲಿ ಜನಪದ ಕಲಾವಿದರ ಸಭೆ ಕರೆಯಲಾಗಿದೆ.

ಮೈಸೂರು ಜಿಲ್ಲಾ ಮಟ್ಟದ ಸಮಾವೇಶ

ಮೈಸೂರು, ಆ.28-ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ, ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಆ.31ರಂದು ಮೈಸೂರಿನ ಗನ್‌ಹೌಸ್ ಬಳಿ ಇರುವ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಗ್ರಾಮ ಪಂಚಾಯಿತಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಸಮಾವೇಶವನ್ನು ಏರ್ಪಡಿಸಲಾಗಿದೆ.

ಸಮಾವೇಶವನ್ನು ಸಂಘದ ರಾಜ್ಯಾಧ್ಯಕ್ಷ ಎಂ.ಬಿ.ನಾಡಗೌಡ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ, ಕರ್ನಾಟಕ ಪ್ರಾಂತ್ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಸಿಐಟಿಯು ಜಿಲ್ಲಾ ಅಧ್ಯಕ್ಷ ಕೆ.ಜಯರಾಮ್, ಚಾಮರಾಜನಗರ ಜಿಲ್ಲಾಧ್ಯಕ್ಷ ಸಿದ್ದರಾಜು ಭಾಗವಹಿಸಲಿದ್ದಾರೆ.

ಹಾಸನದಲ್ಲಿ ಗಣೇಶ ಹಬ್ಬದಂದೇ ಯುವಕನ ಬರ್ಬರ ಹತ್ಯೆ

ಹಾಸನ: ಗೌರಿ-ಗಣೇಶ ಹಬ್ಬದ ಸಂಭ್ರಮದಲ್ಲಿದ್ದ ಊರಿನಲ್ಲಿ ರಕ್ತಪಾತ ನಡೆದು, ಗ್ರಾಮಸ್ಥರು ಆತಂಕಕ್ಕೀಡಾಗಿರುವ ಘಟನೆ ಸಂಭವಿಸಿದೆ.

ತಾಲೂಕಿನ ಯರೇಹಳ್ಳಿ ಗ್ರಾಮದ ಬಳಿ ಬುಧವಾರ ರಾತ್ರಿ ಯುವಕನೊಬ್ಬನನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ನಡೆದಿದೆ. ಮೃತನನ್ನು ದೊಡ್ಡಮಂಡಿಗನಹಳ್ಳಿಯ ನಿವಾಸಿ, ಆಟೋ ಚಾಲಕ ಅಂಕಿತ್ (26) ಎಂದು ಗುರುತಿಸಲಾಗಿದೆ.

ಘಟನೆ ವಿವರ: ಬುಧವಾರ ರಾತ್ರಿ ಅಂಕಿತ್ ಬೈಕ್‌ನಲ್ಲಿ ರಾಗಿಮುದ್ದನಹಳ್ಳಿ ಗ್ರಾಮದ ಕಡೆಗೆ ತೆರಳುತ್ತಿದ್ದ ವೇಳೆ ದುಷ್ಕರ್ಮಿಗಳು ದಾಳಿ ನಡೆಸಿ, ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆಂದು ತಿಳಿದುಬಂದಿದೆ. ಘಟನೆ ನಡೆದ ತಕ್ಷಣ ಸ್ಥಳೀಯರು ಭೀತಿಗೊಳಗಾಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.



ಸುದ್ದಿ ತಿಳಿಯುತ್ತಿದ್ದಂತೆ ಹಾಸನ ಗ್ರಾಮಾಂತರ ಪೊಲೀಸ್ ಠಾಣೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿದ್ದಾರೆ. ದಾಳಿ ನಡೆಸಿದವರ ಪತ್ತೆಗೆ ಪೊಲೀಸರು ತೀವ್ರ ತನಿಖೆ ಕೈಗೊಂಡಿದ್ದಾರೆ.


ಹಬ್ಬದ ದಿನವೇ ನಡೆದಿರುವ ಈ ಹತ್ಯೆ ಪ್ರಕರಣದಿಂದ ಗ್ರಾಮಾಂತರ ಪ್ರದೇಶದಲ್ಲಿ ಆತಂಕ ಉಂಟಾಗಿದೆ. ಮೃತ ಅಂಕಿತ್‌ನ ಕುಟುಂಬಸ್ಥರು ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಘಟನೆಯಲ್ಲಿ ವೈಯಕ್ತಿಕ ದ್ವೇಷವೇ ಕಾರಣವೋ ಅಥವಾ ಇನ್ನಾವುದೇ ಅಸಮಾಧಾನ ಹಿನ್ನೆಲೆಯಿದೆಯೋ ಎಂಬುದರ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಘಟನಾ ಸ್ಥಳದಲ್ಲಿ ಕೆಲ ಸುಳಿವು ದೊರೆತಿದ್ದು, ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿರುವ ಪೊಲೀಸರು ಅಪರಾಧಿಗಳ ಪತ್ತೆ ಬಲೆ ಬೀಸಿದ್ದಾರೆ.

ದೇಶ - ವಿದೇಶ

ಉಕ್ರೇನ್‌ನಲ್ಲಿ ನಡೆಯುತ್ತಿರುವುದು ಮೋದಿ ಯುದ್ಧ ಎಂದ ಟ್ರಂಪ್ ಆಪ್ತ

ವಾಷಿಂಗ್ಟನ್: ರಷ್ಯಾದಿಂದ ರಿಯಾಯಿತಿ ದರದಲ್ಲಿ ತೈಲ ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಭಾರತ ಉತ್ತೇಜನ ನೀಡುತ್ತಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಪ್ತ ಹಾಗೂ ಶ್ವೇತಭವನದ ಸಲಹೆಗಾರ ಪೀಟರ್ ನವರೊ ಹೇಳಿದ್ದಾರೆ.



ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಪೀಟರ್ ನವರೊ, ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಿದರೆ ಭಾರತಕ್ಕೆ ಅಮೆರಿಕದ ಸುಂಕದಲ್ಲಿ 25% ಕಡಿತ ದೊರೆಯುತ್ತದೆ ಎಂದರು. ನನ್ನ ಪ್ರಕಾರ, ಶಾಂತಿ ಮಾರ್ಗವು ಭಾಗಶಃ ಭಾರತದ ಮೂಲಕವೇ ಸಾಗುತ್ತದೆ. ಉಕ್ರೇನ್‌ನಲ್ಲಿ ನಡೆಯುತ್ತಿರುವುದು ಮೋದಿ ಯುದ್ಧವೆಂದು ಹೇಳುತ್ತೇನೆ. ಭಾರತವು ರಿಯಾಯಿತಿ ದರದಲ್ಲಿ ತೈಲ ಖರೀದಿಸುವ ಮೂಲಕ ರಷ್ಯಾಗೆ ಹಣಕಾಸಿನ ನೆರವು ನೀಡುತ್ತಿದೆ. ರಷ್ಯಾದಿಂದ ತೈಲ ಖರೀದಿ ನಿಲ್ಲಿಸಿ ಯುದ್ಧವನ್ನು ನಿಲ್ಲಿಸಲು ಸಹಾಯ ಮಾಡಿದರೆ ಭಾರತ 25% ರಿಯಾಯಿತಿ ಪಡೆಯಬಹುದು. ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಆದರೆ ನೀವು ಪ್ರಜಾಪ್ರಭುತ್ವ ರಾಷ್ಟ್ರಗಳೊಂದಿಗೆ ಸೇರುವ ಬದಲು, ಸರ್ವಾಧಿಕಾರಿಗಳೊಂದಿಗೆ ಕೈಜೋಡಿಸುತ್ತಿದ್ದೀರಿ ಎಂದು ನವಾರೊ ಹೇಳಿದರು.

ಗಣೇಶಮೂರ್ತಿ ಮೆರವಣಿಗೆ ವೇಳೆ ಮೊಟ್ಟೆ ಎಸೆದ ಕಿಡಿಗೇಡಿಗಳು

ವಡೋದರ: ಗಣೇಶ ಮೂರ್ತಿ ಮೆರವಣಿಗೆ ವೇಳೆ ಕಿಡಿಗೇಡಿಗಳ ಗುಂಪೊಂದು ಮೊಟ್ಟೆ ಎಸೆದ ಘಟನೆ ಗುಜರಾತ್‌ನ ವಡೋದರ ನಗರದಲ್ಲಿ ಬುಧವಾರ ರಾತ್ರಿ ನಡೆದಿದೆ.



ಘಟನೆಗೆ ಸಂಬಂಧಿಸಿದಂತೆ ಮಾಹಿತಿ ಪಡೆದ ಪೊಲೀಸರು ಇಬ್ಬರು ವ್ಯಕ್ತಿಗಳನ್ನು ಬಂಧಿಸಿ, ಬಾಲಕನನ್ನು ವಶಕ್ಕೆ ಪಡೆದಿದ್ದಾರೆ. ಹಬ್ಬದ ಹಿನ್ನೆಲೆ ನಿಗದಿತ ಸ್ಥಳದಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲು ಮೆರವಣಿಗೆ ಮೂಲಕ ತೆಗೆದುಕೊಂಡು ಹೋಗುವಾಗ ಒಬ್ಬ ಬಾಲಕ ಮತ್ತು ಇಬ್ಬರು ಯುವಕರು ಮೂರ್ತಿಗೆ ಮೊಟ್ಟೆಯನ್ನು ಎಸೆದಿದ್ದಾರೆ. ಒಂದು ಮೊಟ್ಟೆ ಮೂರ್ತಿಗೆ ತಾಗಿದೆ. ಗಣೇಶ ಮೂರ್ತಿಯನ್ನು ಅಪವಿತ್ರಗೊಳಿಸಿದ್ದಾರೆ ಎಂದು ಗಲಾಟೆ ಆರಂಭವಾಗಿದ್ದು, ಉದ್ವಿಗ್ನತೆಗೆ ಕಾರಣವಾಯಿತು. ಸಿಸಿಟಿವಿ ದೃಶ್ಯಗಳನ್ನು ಪರಿಶೀಲನೆ ನಡೆಸಿದ ಬಳಿಕ ಮೂವರು ಆರೋಪಿಗಳನ್ನು ಪತ್ತೆ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಬಂಧಿತರನ್ನು ಸುಫಿಯಾನ್ ಮನ್ಸೂರಿ (20), ಶಹನವಾಜ್ ಖುರೇಷಿ (29) ಇನ್ನೊಬ್ಬ ಅಪ್ರಾಪ್ತನಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಷ್ಟ್ರಗೀತೆ ಹಾಡುವಾಗ ಪ್ರತಿಮೆಯಂತೆ ನಿಂತ ವಿದ್ಯಾರ್ಥಿ


ಬ್ಯಾಂಕಾಂಕ್: ರಾಷ್ಟ್ರಗೀತೆ ಹಾಡುವಾಗ ಎಲ್ಲರೂ ಎದ್ದುನಿಂತು ಗೌರವಿಸಬೇಕು. ಇದು ಪ್ರಪಂಚದ ಬಹುತೇಕ ಎಲ್ಲಾ ದೇಶಗಳಲ್ಲೂ ಈ ನಿಯಮವಿದೆ. ಹಾಗೆಯೇ ಥೈಲ್ಯಾಂಡ್ ಶಾಲೆಯಲ್ಲಿ ರಾಷ್ಟ್ರಗೀತೆ ಹಾಡುವಾಗ ಬಾಲಕನೊಬ್ಬ ಗೌರವಿಸಿದ ಕ್ಷಣದ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ವೈರಲ್ ಆಗಿದೆ.



ಥೈಲ್ಯಾಂಡ್ ಶಾಲೆಗಳಲ್ಲಿ ಪ್ರತಿದಿನ ಬೆಳಗ್ಗೆ 8 ಗಂಟೆಗೆ ರಾಷ್ಟ್ರಗೀತೆ ಹಾಡಲಾಗುತ್ತದೆ. ವಿದ್ಯಾರ್ಥಿಗಳು ಗೌರವ ಸಲ್ಲಿಸಲು ಸ್ಥಿರವಾಗಿ ನಿಲ್ಲುತ್ತಾರೆ. ಆದರೆ, ಥಾಯ್ ಶಾಲೆಯೊಂದರ ವಿಡಿಯೊವೊಂದು ಹಾಸ್ಯಾಸ್ಪದ ಕಾರಣಕ್ಕಾಗಿ ವೈರಲ್ ಆಗಿದೆ. ಈ ವಿಡಿಯೊದಲ್ಲಿ, ದೇಶಗೀತೆ ಪ್ರಾರಂಭವಾಗುತ್ತಿದ್ದಂತೆ ಬಾಲಕನೊಬ್ಬ ನಡಿಗೆಯ ಮಧ್ಯದಲ್ಲಿ ಪ್ರತಿಮೆ ತರಹ ನಿಂತು ಬಿಟ್ಟಿದ್ದಾನೆ. ಈ ದೃಶ್ಯದಲ್ಲಿ ವಿದ್ಯಾರ್ಥಿಯೊಬ್ಬ ಸ್ಕೂಲ್ ಬ್ಯಾಗ್ ಹಿಡಿದು ಪ್ರತಿಮೆ ತರಹ (ನಡೆಯುವ ರೀತಿಯಲ್ಲಿ) ನಿಂತಿದ್ದಾನೆ. ಆದರೆ, ಅದು ಫೋಟೋವಲ್ಲ, ವಿಡಿಯೊ ದೃಶ್ಯವಾಗಿದೆ. ರಾಷ್ಟ್ರಗೀತೆ ಮುಗಿದ ತಕ್ಷಣ, ಅವನು ಮುಂದೆ ನಡೆದಿದ್ದಾನೆ. ಸದ್ಯ ಈ ವಿಡಿಯೋ ಭಾರಿ ವೈರಲ್ ಆಗಿದೆ.

ಬರ್ತ್‌ಡೇ ಪಾರ್ಟಿ ನಡೆಯುತ್ತಿದ್ದ ಅಪಾರ್ಟ್‌ಮೆಂಟ್ ಕುಸಿತ

ಪಾಲ್ಘರ್: ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ವಿರಾರ್ ನಗರದಲ್ಲಿ ಬುಧವಾರ ಮಧ್ಯಾಹ್ನ 4 ಅಂತಸ್ತಿನ ಅನಧಿಕೃತ ಅಪಾರ್ಟ್‌ಮೆಂಟ್ ಕುಸಿದ ಪರಿಣಾಮ ಮೃತಪಟ್ಟವರ ಸಂಖ್ಯೆ 15ಕ್ಕೆ ಏರಿಕೆಯಾಗಿದ್ದು, ಮೃತದೇಹಗಳನ್ನು ಹೊರತೆಗೆಯಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



4ನೇ ಮಹಡಿಯಲ್ಲಿ ಬಾಲಕಿಯ ಹುಟ್ಟುಹಬ್ಬದ ಪಾರ್ಟಿ ನಡೆಯುತ್ತಿದ್ದಾಗಲೇ ಅಪಾರ್ಟ್‌ಮೆಂಟ್‌ನ ಒಂದು ಭಾಗ ಕುಸಿದುಬಿತ್ತು. ಫ್ಲಾಟ್‌ನಲ್ಲಿದ್ದ ನಿವಾಸಿಗಳು, ಅತಿಥಿಗಳು ಅವಶೇಷಗಳ ಅಡಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಸೇರಿದಂತೆ ಇತರ ರಕ್ಷಣಾ ತಂಡಗಳು ಘಟನಾ ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯ ನಡೆಸುತ್ತಿವೆ. ಘಟನೆಯಲ್ಲಿ 15 ಮಂದಿ ಮೃತಪಟ್ಟಿದ್ದು, ಗಾಯಾಳುಗಳನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ ಎಂದು ಪಾಲ್ಘರ್ ಡಿಸಿ ತಿಳಿಸಿದ್ದಾರೆ. 2012ರಲ್ಲಿ ಈ ಅಪಾರ್ಟ್‌ಮೆಂಟ್ ಅನ್ನು ನಿರ್ಮಿಸಲಾಗಿತ್ತು. ಘಟನೆ ಸಂಬಂಧ ಅಪಾರ್ಟ್‌ಮೆಂಟ್ ಮಾಲೀಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕಟ್ಟಡವು ಅನಧಿಕೃತವಾಗಿತ್ತು ಎಂದು ವಿರಾರ್ ಮಹಾನಗರಪಾಲಿಕೆಯ ವಕ್ತಾರರು ದೃಢಪಡಿಸಿದ್ದಾರೆ.

ಅರಿಜೋನಾದಲ್ಲಿ 'ಧೂಳಿನ ಬಿರುಗಾಳಿ'

ವಾಷಿಂಗ್ಟನ್: ಅರಿಜೋನಾದ ಫೀನಿಕ್ಸ್‌ನಲ್ಲಿ ಹಬೂಬ್ ಎಂಬ ಧೂಳಿನ ಬಿರುಗಾಳಿ ಬೀಸಿದ್ದು, ಎದೆ ಝಲ್ ಎನಿಸುವ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಧೂಳಿನ ಬಿರುಗಾಳಿಯಿಂದ ಫೀನಿಕ್ಸ್ ನಗರ ಸೇರಿದಂತೆ ಮಾರಿ ಕೊಪಾಕೌಂಟಿಯಲ್ಲಿ 39,000ರಿಂದ 52,000 ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಂಡವು. ಚಂಡಮಾರುತದಿಂದಾಗಿ ಫೀನಿಕ್ಸ್ ಸ್ಕೈ ಹಾರ್ಬರ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ವಿದ್ಯುತ್ ಕಡಿತಗೊಂಡು ಎಲ್ಲಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿತ್ತು. ಹಬೂಬ್ ಎಂಬ ಧೂಳಿನ ಬಿರುಗಾಳಿ ಕಂಡು ಇದು ಮರಳಿನ ರಾಕ್ಷಸ ಎಂದು ಜನರು ಹೇಳಿದ್ದಾರೆ. ಧೂಳಿನ ಬಿರುಗಾಳಿಯ ಭಯಾನಕ ವಿಡಿಯೋ, ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಜನರು ಹಂಚಿಕೊಂಡಿದ್ದು, ಸಖತ್ ವೈರಲ್ ಆಗಿವೆ. ಹಬೂಬ್ ಧೂಳಿನ ಬಿರುಗಾಳಿ ಕೆಲವೇ ಕೆಲವು ನಿಮಿಷಗಳಲ್ಲಿ ಎಲ್ಲವನ್ನೂ ಆವರಿಸಿತ್ತು. ರಸ್ತೆಗಳು ಧೂಳಿನಿಂದ ಆವೃತವಾಗಿದ್ದವು. ಮುಂದೇನಿದೆ ಅನ್ನೋದು ಕೂಡ ಕಾಣಿಸದಷ್ಟು ಧೂಳು ಆವರಿಸಿತ್ತು. ಧೂಳಿನ ಬಿರುಗಾಳಿಗಳು ಗಾಳಿಯ ಗುಣಮಟ್ಟವನ್ನೂ ಹಾಳು ಮಾಡುತ್ತವೆ. ಆದ್ದರಿಂದ ಉಸಿರಾಟದ ಸಮಸ್ಯೆ ಉಂಟು ಮಾಡುತ್ತವೆ. ವೇಗವಾಗಿ ಗಾಳಿ ಬೀಸುವುದರಿಂದ ಅಪಘಾತಗಳ ಅಪಾಯವೂ ಹೆಚ್ಚಾಗುತ್ತದೆ ಎಂದು ತಜ್ಞರು ಹೇಳಿದ್ದಾರೆ.



ಬಾಂಗ್ಲಾ ದೇಶಿಯರು, ರೋಹಿಂಗ್ಯಗಳಿಗೆ ಕೊಡಗಲ್ಲಿ ಆಶ್ರಯ ಕಲ್ಪಿಸಲು ಷಡ್ಯಂತ್ರ

ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪ



ವಿರಾಜಪೇಟೆಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅಧ್ಯಕ್ಷತೆಯಲ್ಲಿ ನಡೆದ ಮಾನವ ಸರಪಳಿ ಕಾರ್ಯಕ್ರಮ.

ಮಡಿಕೇರಿ,ಆ.28– ಕೊಡವರ ಬಾಹುಳ್ಯದ ಮೂಲ ನೆಲೆಯಾದ ಪಶ್ಚಿಮ ಘಟ್ಟದ ಪರ್ವತ ಶ್ರೇಣಿಯ ಸಂಕೋಲೆಗಳಾದ ಮಲೆನಾಡಿನಿಂದ ಸೂರ್ಲಬ್ಬಿನಾಡ್‌ವರೆಗೆ ಸಾವಿರಾರು ಎಕರೆ ಪ್ರದೇಶದಲ್ಲಿ ಬಾಂಗ್ಲಾ ದೇಶಿಗರು ಹಾಗೂ ರೋಹಿಂಗ್ಯಗಳಿಗೆ ಅಕ್ರಮವಾಗಿ ಆಶ್ರಯ ಕಲ್ಪಿಸಲು ಷಡ್ಯಂತ್ರ ನಡೆದಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪಿಸಿದ್ದಾರೆ.

ರಾಷ್ಟ್ರೀಯ ಜನಗಣತಿ ಸಂದರ್ಭದಲ್ಲಿ ಕೊಡವರಿಗಾಗಿ ಪ್ರತ್ಯೇಕ ಕೋಡ್ ಮತ್ತು ಕಾಲಮ್ ಅನ್ನು ಸೇರಿಸಬೇಕೆಂದು ಒತ್ತಾಯಿಸಿ ವಿರಾಜಪೇಟೆಯಲ್ಲಿ ಸಿಎನ್‌ಸಿ ವತಿಯಿಂದ ನಡೆದ 11ನೇ ಮಾನವ ಸರಪಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಕ್ರಮ ವಲಸಿಗರಿಗೆ ಆಶ್ರಯ ಕಲ್ಪಿಸುವ ಏಕೈಕ ಉದ್ದೇಶದಿಂದ ನಕಲಿ ಆಧಾರ್ ಕಾರ್ಡ್ ಸೃಷ್ಟಿಸಲಾಗುತ್ತಿದ್ದು, ದೊಡ್ಡ ಜಾಲವೊಂದು ಕಾರ್ಯಾಚರಿಸುತ್ತಿದೆ. ಬಾಂಗ್ಲಾ ದೇಶಿಗರು ಹಾಗೂ ರೋಹಿಂಗ್ಯಗಳು ಕಾನೂನು ಬಾಹಿರವಾಗಿ ಕೊಡವ ಲ್ಯಾಂಡ್‌ನಲ್ಲಿ ಆಶ್ರಯ ಪಡೆದು ತಮ್ಮ ಇರುವಿಕೆಯನ್ನು ಸಕ್ರಮಗೊಳಿಸಿಕೊಳ್ಳಲು ಮುಂದಾಗಿರುವುದು, ಸರಕಾರಿ ಯಂತ್ರಗಳು ಆಶ್ರಯ ನೀಡಲು ಹವಣಿಸುತ್ತಿರುವುದು ಮತ್ತು ದೊಡ್ಡ ದೊಡ್ಡ ಕಂಪೆನಿಗಳು ಬೆಂಬಲಕ್ಕೆ ನಿಂತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ನಾಚಪ್ಪ ಆತಂಕ ವ್ಯಕ್ತಪಡಿಸಿದರು.

ನಕಲಿ ಆಧಾರ್ ಮತ್ತು ಐಡಿ ಕಾರ್ಡ್ ನೀಡುವ ಜಾಲ ಕಳೆದ 2 ವರ್ಷಗಳಿಂದ ಚಟುವಟಿಕೆಯಿಂದ ಇದ್ದು, ಈ ನಕಲಿ ಆಧಾರ್ ಕಾರ್ಡ್‌ನ್ನೇ ಬಳಸಿ ಅಕ್ರಮ ವಲಸಿಗರು ಕೊಡಗು ಮಾತ್ರವಲ್ಲದೆ ಹೊರ ಭಾಗದಲ್ಲೂ ತೋಟದ ಕೆಲಸ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಕೊಡವರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟು ಬಾಂಗ್ಲಾ ಮತ್ತು ಮಾಯನ್ಮಾರ್‌ನ ರಾಖಿನೆ ಪ್ರಾಂತ್ಯದ ರೋಹಿಂಗ್ಯಗಳನ್ನು ಮತದಾರರ ಪಟ್ಟಿಯಲ್ಲಿ ಸೇರಿಸುವ ಸಂಚು ನಡೆದಿದೆ ಎಂದು ಆರೋಪಿಸಿದರು. ಜನಗಣತಿಯ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ಕೊಡವರು ಅರಿತುಕೊಳ್ಳಬೇಕು. ಕೊಡವರ ಸಾಂವಿಧಾನಿಕ ಹಕ್ಕುಗಳಿಗಾಗಿ ಸಿಎನ್‌ಸಿ ನಡೆಸುವ ಶಾಂತಿಯುತ ಹೋರಾಟಕ್ಕೆ ಕೈಜೋಡಿಸಬೇಕೆಂದು ನಾಚಪ್ಪ ಕರೆ ನೀಡಿದರು.

ಬಿದ್ದಂಡ ಉಷಾ ದೇವಮ್ಮ, ಮುದ್ದಿಯಡ ಲೀಲಾವತಿ, ಬೊಳ್ಳಂಡ ಸೌಮ್ಯ ಪೂವಯ್ಯ, ಪಾಂಡಂಡ ಗೊಂಬೆ ಪ್ರಕಾಶ್, ಕೋಳೆರ ಟೀನ ರನ್ನ, ಪಾಲಂ ದೀರಗಂಗಮ್ಮ ದೇಯಂಡ ಶಾಂತಿ, ನೆಲ್ಲಮಕ್ಕಡ ಕಾವೇರಮ್ಮ, ಮುಂಡಂಡ ಲಿಲ್ಲಿ, ಕರಿನೆರವಂಡ ಬೋಜಿ ಭೀಮಯ್ಯ, ಕರಿನೆರ ವಂಡ ಶಾಂತಿ, ಬಿದ್ದಂಡ ತಿಲಕ, ಚಿಂಬಂಡ ಜಾಗೃತ ಬಿದ್ದಪ್ಪ, ಪೋರ್ಕಂಡ ಬೋಪಣ್ಣ, ಮಾದೆಯಂಡ ಹ್ಯಾರಿ ಮತ್ತಿತರರು ಮಾನವ ಸರಪಳಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಾಳೆ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ

ಮಡಿಕೇರಿ,ಆ.28– 2025–26ನೇ ಸಾಲಿನಲ್ಲಿ ತಾಲ್ಲೂಕು ಮಟ್ಟದಲ್ಲಿ ವಿಜೇತರಾದ ಪುರುಷ ಹಾಗೂ ಮಹಿಳೆಯರಿಗೆ ಹಾಗೂ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ ಸ್ಪರ್ಧೆಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆ.30 ರಂದು ಕೊಡಗು ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟವು ಕೂಡಿಗೆ ಕ್ರೀಡಾ ಶಾಲೆ ಮೈದಾನದಲ್ಲಿ ಏರ್ಪಡಿಸಲಾಗಿದೆ.

ಮೇಕೇರಿ ಬಳಿ ಮತ್ತೆ ಭೂ ಕುಸಿತ

ಮಡಿಕೇರಿ-ವಿರಾಜಪೇಟೆ ಸಂಪರ್ಕದ ಕಾಂಕ್ರೀಟ್ ರಸ್ತೆಗೆ ಸಂಚಕಾರ


ಮೇಕೇರಿ ಬಳಿ ಕಾಂಕ್ರೀಟ್ ರಸ್ತೆ ಕುಸಿತಗೊಂಡಿದ್ದು, ದುರಸ್ತಿ ಕಾರ್ಯ ನಡೆಸುತ್ತಿರುವುದು.

ಮಡಿಕೇರಿ,ಆ.28– ಮಡಿಕೇರಿ–ವಿರಾಜಪೇಟೆ ಸಂಪರ್ಕ ರಸ್ತೆಯ ಮೇಕೇರಿ ಬಳಿ ಮತ್ತೆ ಭೂ ಕುಸಿತವಾಗಿದ್ದು, ಕಾಂಕ್ರೀಟ್ ರಸ್ತೆಗೆ ಸಂಚಕಾರ ಎದುರಾಗಿದೆ. ಗುರುವಾರ ಮುಂಜಾನೆ ಸುರಿದ ಮಳೆಯಿಂದ ಚರಂಡಿ ನೀರು ಕಾಂಕ್ರೀಟ್ ರಸ್ತೆಯ ಮೇಲೆ ಹರಿದು ಇಳಿಜಾರು ಪ್ರದೇಶದಲ್ಲಿರುವ ಕಾಫಿ ತೋಟಕ್ಕೆ ನುಗ್ಗಿದ್ದು ಭೂ ಕುಸಿತಕ್ಕೆ ಕಾರಣವಾಗಿದೆ. ಆಗಸ್ಟ್ ಮೊದಲ ವಾರದಲ್ಲಿ ಸುರಿದ ಮಳೆಯ ಪರಿಣಾಮ ಚರಂಡಿ ನೀರು ರಸ್ತೆಯಲ್ಲಿ ಹರಿದು ಪಕ್ಕದಲ್ಲಿದ್ದ ಕಡಿದಾದ ಕಾಫಿ ತೋಟಕ್ಕೆ ಹರಿದು ಅಲ್ಪ ಪ್ರಮಾಣದ ಭೂ ಕುಸಿತವಾಗಿತ್ತು. ಆ ವೇಳೆ ಕಾಂಕ್ರೀಟ್ ರಸ್ತೆ ನಿರ್ಮಿಸುವ ಸಂದರ್ಭ ಅಳವಡಿಸಿದ್ದ ಎಂ.ಸ್ಯಾಂಡ್ ಚೀಲಗಳು ಕೊಚ್ಚಿಹೋಗಿದ್ದವು. ತಕ್ಷಣವೇ ಎಚ್ಚೆತ್ತ ಲೋಕೋಪಯೋಗಿ ಇಲಾಖೆ, ಮಡಿಕೇರಿ ಸಂಚಾರಿ ಪೊಲೀಸರು ಘಟನಾ ಸ್ಥಳದಲ್ಲಿ ಎಚ್ಚರಿಕೆಯ ರಿಬ್ಬನ್‌ಗಳನ್ನು ಅಳವಡಿಸಿ ವಾಹನ ಸವಾರರಿಗೆ ಅನುಕೂಲ ಕಲ್ಪಿಸಿದ್ದರು. ಸ್ಥಳದಲ್ಲಿ ಮಣ್ಣು ಚೀಲಗಳನ್ನು ಅಳವಡಿಸಿ ನೀರು ಹರಿಯದಂತೆ ಎಚ್ಚರ ವಹಿಸಲಾಗಿತ್ತು.

ಆದರೆ ಮಳೆ ಮುಂದುವರೆದ ಪರಿಣಾಮ ಮತ್ತೊಮ್ಮೆ ಭೂ ಕುಸಿತವಾಗಿದ್ದು ಮತ್ತೆ ಮಳೆಯಾದಲ್ಲಿ ಮಡಿಕೇರಿ–ವಿರಾಜಪೇಟೆ ಸಂಪರ್ಕ ರಸ್ತೆಗೆ ಸಂಚಕಾರ ಎದುರಾಗುವ ಎಲ್ಲಾ ಸಾಧ್ಯತೆಗಳು ಕಂಡು ಬಂದಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ತಹಶೀಲ್ದಾರ್ ಕಿರಣ್, ನಗರ ಸಭೆ ಪೌರಾಯುಕ್ತ ರಮೇಶ್ ಹಾಗೂ ಅಧಿಕಾರಿಗಳು, ಸಂಚಾರಿ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ.

ಆರೆಂಜ್ ಅಲರ್ಟ್: ಜಿಲ್ಲೆಯಲ್ಲಿ ಮಳೆ ಮುಂದುವರೆಯುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಹವಾಮಾನ ಇಲಾಖೆ ಶುಕ್ರವಾರ ಬೆಳಗಿನವರೆಗೆ ಜಿಲ್ಲೆಯಾದ್ಯಂತ 'ಆರೆಂಜ್ ಅಲರ್ಟ್' ಘೋಷಣೆ ಮಾಡಿದೆ. ಈ ನಡುವೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಾಧಾರಣ ಮಳೆ ಸುರಿದಿರುವ ಬಗ್ಗೆ ವರದಿಯಾಗಿದೆ.

ಮೊಬೈಲ್ ಅಂಗಡಿಯಲ್ಲಿ ಕಳ್ಳತನ ಮಾಡಿದ್ದ ಆರೋಪಿ ಬಂಧನ



ಗೋಣಿಕೊಪ್ಪ: ಮೊಬೈಲ್ ಅಂಗಡಿಯಲ್ಲಿ ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಆ.24 ರಂದು ಮಧ್ಯ ರಾತ್ರಿ ಗೋಣಿಕೊಪ್ಪ ಮುಖ್ಯ ರಸ್ತೆಯಲ್ಲಿರುವ ಫಲೀಲ್ ಎಂಬುವವರಿಗೆ ಸೇರಿದ HARMONY PHONES ಅಂಗಡಿಯ ಶೆಟ್ರಸ್ ಮುರಿದು ವಿವಿಧ ಕಂಪನಿಯ ಅಂದಾಜು 32 ಹೊಸ ಮೊಬೈಲ್ ಫೋನ್‌ಗಳು ಮತ್ತು 3000 ರೂ. ನಗದು ಕಳವು ಮಾಡಿರುವ ಕುರಿತು ಪ್ರಕರಣ ದಾಖಲಾಗಿತ್ತು.

ಈ ಪ್ರಕರಣ ಆರೋಪಿ ಪತ್ತೆಗಾಗಿ ಮಹೇಶ್ ಕುಮಾರ್.ಎಸ್, ಡಿಎಸ್‌ಪಿ, ವಿರಾಜಪೇಟೆ ಉಪವಿಭಾಗ, ಶಿವರಾಜ ಆರ್.ಮುಧೋಳ್, ಸಿಪಿಐ, ಗೋಣಿಕೊಪ್ಪ ವೃತ್ತ ಪ್ರದೀಪ್ ಕುಮಾರ್.ಬಿ.ಕೆ. ಪಿಎಸ್‌ಐ, ಗೋಣಿಕೊಪ್ಪ ಪೊಲೀಸ್ ಠಾಣೆ ಮತ್ತು ಸಿಬ್ಬಂದಿಗಳ ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ಕೈಗೊಂಡು ಮಾಹಿತಿ ಸಂಗ್ರಹಿಸಿ ಗುರುವಾರ ಅಸ್ಸಾಂ ಮೂಲದ ಚಿಕ್ಕಮಗಳೂರು ಜಿಲ್ಲೆ ತೇಗೂರು ಗ್ರಾಮದ ನಿವಾಸಿಯಾದ ಜೋಹರ್ ಅಲಿ(28) ಎಂಬಾತನನ್ನು ದಸ್ತಗಿರಿ ಮಾಡಿ ಕಾನೂನು ಕ್ರಮ ಕೈಗೊಳ್ಳಲಾಗಿದ್ದು, 32 ಮೊಬೈಲ್ ಫೋನ್‌ಗಳನ್ನು ಕೂಡ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಬೊಳ್ಳಮ್ಮ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ನೆಲಜಿ ಗ್ರಾಮದ ನಿವಾಸಿ ಮನವಟ್ಟಿರ ಉತ್ತಪ್ಪ (ಸಾಬು) ಅವರ ಪತ್ನಿ ಬೊಳ್ಳಮ್ಮ ಅಲಿಯಾಸ್ ಪಪ್ಪು ಗುರುವಾರ ನಿಧನರಾದರು. ಅವರಿಗೆ 72 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಗುರುವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿತು. ಮೃತರು ಪತಿ ಮನವಟ್ಟಿರ ಉತ್ತಪ್ಪ (ಸಾಬು) ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಭಾಂದವರನ್ನು ಅಗಲಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ಪ್ರತ್ಯೇಕ ರಸ್ತೆ ಅಪಘಾತ

ಮೂವರು ಬೈಕ್ ಸವಾರರು ದುರ್ಮರಣ

ಮಂಡ್ಯ: ಜಿಲ್ಲೆಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತದಲ್ಲಿ ಮೂವರು ಸಾವನ್ನಪ್ಪಿ ಮತ್ತೋರ್ವ ಗಾಯಗೊಂಡಿರುವ ಘಟನೆ ವರದಿಯಾಗಿದೆ

ಮೊದಲ ಪ್ರಕರಣ: ಕಿಕ್ಕೇರಿ ಹೋಬಳಿಯ ಅಂಚೆಬೀರನಹಳ್ಳಿ ಬಳಿ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರರಿಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಹಾಸನ ಜಿಲ್ಲೆಯ ಚಿಕ್ಕ ಗಂಡಸಿ ಗ್ರಾಮದ ದರ್ಶನ್(24) ಹಾಗೂ ಕಡಹೆಮ್ಮಿಗೆ ಗ್ರಾಮದ ಉಮೇಶ್(25) ಮೃತರು.

ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿದ್ದ ದರ್ಶನ್ ಗೌರಿ ಗಣೇಶ ಹಬ್ಬಕ್ಕೆ ರಜೆಯಿದ್ದ ಕಾರಣ ಸ್ವಗ್ರಾಮ ಗಂಡಸಿಗೆ ಹಾಗೂ ಈತನ ಸ್ನೇಹಿತ ಕಿಕ್ಕೇರಿ ಹೋಬಳಿಯ ಕಡಹೆಮ್ಮಿಗೆ ಗ್ರಾಮಕ್ಕೆ ಬಂದಿದ್ದರು. ಹಳ್ಳಿ ಮೈಸೂರು ಬಳಿ ಇರುವ ದೇವಿತಂದ್ರಿ ದೇಗುಲಕ್ಕೆ ತೆರಳಿ ಪೂಜೆ ಮುಗಿಸಿಕೊಂಡು ತಮ್ಮ ಗ್ರಾಮಕ್ಕೆ ವಾಪಸ್ಸಾಗಲು ಕಿಕ್ಕೇರಿ ಮಾರ್ಗವಾಗಿ ಬೈಕ್‌ನಲ್ಲಿ ಇಬ್ಬರು ತೆರಳುತ್ತಿದ್ದರು. ಅಂಚೆಬೀರನಹಳ್ಳಿ ಗ್ರಾಮದ ಬಳಿ ಸಾಗುತ್ತಿದ್ದಾಗ ಎದುರುಗಡೆಯಿಂದ ಬಂದ ಮೈಸೂರಿಗೆ ಸಾಗುತ್ತಿದ್ದ ಕೆಎಸ್ ಆರ್‌ಟಿಸಿ ಬಸ್ ಮೋಟಾರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಇಬ್ಬರು ದ್ವಿಚಕ್ರ ವಾಹನ ಸವಾರರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಕಿಕ್ಕೇರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮತ್ತೋರ್ವನಿಗೆ ಗಾಯ, ಆಸ್ಪತ್ರೆಗೆ ದಾಖಲು


ಸುಹಾಸ್


ಓರ್ವ ಸಾವು, ಮತ್ತೋರ್ವನಿಗೆ ಗಾಯ: ಮತ್ತೊಂದು ಪ್ರಕರಣದಲ್ಲಿ ಎತ್ತಿನ ಗಾಡಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಯುವಕನೊಬ್ಬ ಸಾವನ್ನಪ್ಪಿ ಮತ್ತೊಬ್ಬನಿಗೆ ತೀವ್ರ ಗಾಯಗಳಾಗಿರುವ ಘಟನೆ ಭಾರತೀನಗರ ಸಮೀಪದ ಬೋರಾಪುರ ಗೇಟ್ ಬಳಿ ಸಂಭವಿಸಿದೆ.

ಸುಹಾಸ್(19) ದುರಂತದಲ್ಲಿ ಸಾವನ್ನಪ್ಪಿದ ದುರ್ದೈವಿ. ತೇಜಸ್ (20) ಎಂಬಾತ ಗಾಯಗೊಂಡಿದ್ದು ಆಸ್ಪತ್ರೆಗೆ ಸೇರಿಸಲಾಗಿದೆ. ಈ ಇಬ್ಬರೂ ಕಳೆದ ಬುಧವಾರ ಮಧ್ಯಾಹ್ನ 12 ಗಂಟೆಯಲ್ಲಿ ಬೋರಾಪುರದಿಂದ ಮದ್ದೂರಿಗೆ ಗಣಪತಿ ಪ್ರತಿಷ್ಠಾಪನೆಗೆ ಬೇಕಾದ ಪದಾರ್ಥಗಳನ್ನು ತರಲು ತೆರಳುತ್ತಿದ್ದರೆಂದು ತಿಳಿದು ಬಂದಿದೆ.

ಬೋರಾಪುರ ಗ್ರಾಮದ ಗೇಟ್ ಬಳಿ ನಿಲ್ಲಿಸಲಾಗಿದ್ದ ಎತ್ತಿನ ಗಾಡಿಗೆ ಸುಹಾಸ್ ಓಡಿಸುತ್ತಿದ್ದ ಬೈಕ್ ಡಿಕ್ಕಿಯಾಗಿದ್ದು, ಸುಹಾಸ್ ತಲೆ, ಬೆನ್ನಿನ ಭಾಗಕ್ಕೆ ಬಲವಾದ ಪೆಟ್ಟು ಬಿದ್ದು ಆತ ಸ್ಥಳದಲ್ಲಿಯೇ ಸಾವನ್ನಪ್ಪಿದ್ದು, ಹಿಂಬದಿ ಸವಾರ ತೇಜಸ್‌ಗೆ ಗಂಭೀರ ಸ್ವರೂಪದ ಗಾಯಗಳಾಗಿವೆ.

ತೇಜಸ್ ಸದ್ಯ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿದ್ದು, ಸುಹಾಸ್ ಮೃತ ದೇಹವನ್ನು ಕೆ.ಎಂ. ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಗಿದೆ. ಈ ಸಂಬಂಧ ಕೆ.ಎಂ. ದೊಡ್ಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆ.31ರಂದು ಚಂದ್ರಶೇಖರ ಶ್ರೀಗಳ ಪುಣ್ಯಾರಾಧನೆ



ಮಂಡ್ಯ: ಕೆಂಗೇರಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಸಂಸ್ಥಾಪಕ ಪೀಠಾಧ್ಯಕ್ಷರಾಗಿದ್ದ ಲಿಂಗೈಕ್ಯ ಶ್ರೀ ಕುಮಾರ ಚಂದ್ರಶೇಖರನಾಥ ಮಹಾಸ್ವಾಮಿಗಳ 16ನೇ ದಿನದ ಪುಣ್ಯಾರಾಧನೆಯನ್ನು ಮಠದ ಎರಡನೇ ಪೀಠಾಧ್ಯಕ್ಷ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಆ.31ರಂದು ಬೆಳಿಗ್ಗೆ 11 ಗಂಟೆಗೆ ಮಠದ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಎ.ಸಿ.ರಮೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಮಪೂಜ್ಯರು ಶಿಕ್ಷಣ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ಅಪಾರ ಕೊಡುಗೆಗಳನ್ನು ನೀಡಿದ್ದು 81 ವರ್ಷಗಳ ತುಂಬು ಜೀವನ ನಡೆಸಿ ಸಮಾಜಕ್ಕೆ ಮಾರ್ಗದರ್ಶನ ನೀಡಿ ಶ್ರೀ ಕ್ಷೇತ್ರವನ್ನು ನಾಡಿಗೆ ಅರ್ಪಿಸಿ ಆಗಸ್ಟ್ 16 ರಂದು ಭೈರವೈಕ್ಯರಾದರು ಎಂದು ತಿಳಿಸಿದರು.

ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ನಾಡಿನ ಹಲವಾರು ಆಧ್ಯಾತ್ಮಿಕ ಚಿಂತಕರು, ಸಾಧು ಸಂತರು, ಸಮಾಜದ ಮುಖಂಡರು, ವಿವಿಧ ಸಂಘ ಸಂಸ್ಥೆಗಳು, ಸಾಹಿತಿಗಳು ಹಾಗೂ ಕಲಾವಿದರು ಭಾಗವಹಿಸಲಿದ್ದಾರೆ. ಆದ್ದರಿಂದ ಶ್ರೀಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀ ಮಹಾಮೇರು ಪಂಚಗಣಪತಿ ದೇವರ ಹಾಗೂ ಗುರುಗಳ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿದರು.

ಸೆ.25ರಿಂದ ಶ್ರೀರಂಗಪಟ್ಟಣ ದಸರಾ

ಈ ಬಾರಿ ವಿಭಿನ್ನ, ಆಕರ್ಷಕ ಕಾರ್ಯಕ್ರಮ, ಸ್ಥಳೀಯ ಕಲಾವಿದರಿಗೆ ಒತ್ತು, ಶೀಘ್ರ ಉದ್ಘಾಟಕರ ಆಯ್ಕೆ


ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಗುರುವಾರ ಅಧಿಕಾರಿಗಳ ಸಭೆ ನಡೆಸಿದರು.

ಮಂಡ್ಯ, ಆ.28– ನಾಡಹಬ್ಬ ಮೈಸೂರು ದಸರಾದ ಮೂಲ ಶ್ರೀರಂಗಪಟ್ಟಣ ದಸರಾವನ್ನು ಜಿಲ್ಲಾಡಳಿತದ ವತಿಯಿಂದ ಈ ಬಾರಿ 4 ದಿನಗಳ ಕಾಲ ಸೆ.25ರಿಂದ 28ರ ವರಗೆ ಹಮ್ಮಿಕೊಳ್ಳಲಾಗಿದ್ದು, ಈ ಬಾರಿಯ ಕಾರ್ಯಕ್ರಮಗಳು ವಿಭಿನ್ನವಾಗಿ ಜನರನ್ನು ಆಕರ್ಷಿಸುವ ರೀತಿ ಇರಲಿದ್ದು, ಶೀಘ್ರದಲ್ಲೇ ಉದ್ಘಾಟಕರನ್ನು ಆಯ್ಕೆ ಮಾಡಲಾಗುವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಗುರುವಾರ ನಗರದ ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ನಡೆದ ದಸರಾ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶ್ರೀರಂಗ ಪಟ್ಟಣ ದಸರಾ ಕಾರ್ಯಕ್ರಮದ ಮೆರವಣಿಗೆಗೆ ಸೆಪ್ಟೆಂಬರ್ 25 ರಂದು ಮಧ್ಯಾಹ್ನ 3 ಗಂಟೆಗೆ ಚಾಲನೆ ನೀಡಲಾಗುವುದು. ಕಾರ್ಯಕ್ರಮಗಳು ಶ್ರೀ ರಂಗನಾಥ ದೇವಸ್ಥಾನದ ಮುಂಭಾಗದ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಲಿದೆ. ಶ್ರೀರಂಗಪಟ್ಟಣ ದಸರಾ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುವುದು. ಕಾರ್ಯಕ್ರಮಗಳು ನಮ್ಮ ಇತಿಹಾಸ ಹಾಗೂ ಸಂಸ್ಕೃತಿಗಳ ಹಿನ್ನಲೆ ಹೊಂದಿರಲಿ ಎಂದರು.

ಮಹಿಳೆಯರು, ಮಕ್ಕಳು, ಯುವಕರು, ವೃದ್ಧರು ಸೇರಿದಂತೆ ವಿವಿಧ ವಯೋಮಿತಿಗಳ ಜನರು ಭಾಗವಹಿಸುವ ರೀತಿ ಕಾರ್ಯಕ್ರಮಗಳನ್ನು ಅಧಿಕಾರಿಗಳು ವೈವಿದ್ಯಮಯವಾಗಿ ರೂಪಿಸಿ ದಸರಾ ಕಾರ್ಯಕ್ರಮಗಳನ್ನು ಯಾವುದೇ ಲೋಪವಿಲ್ಲದಂತೆ ಅಚ್ಚುಕಟ್ಟಾಗಿ ಸಂಘಟಿಸುವಂತೆ ಸೂಚಿಸಿದರು.

ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಹಾಲು ಕರೆಯುವ ಸ್ಪರ್ಧೆಯ ಜೊತೆಗೆ ಈ ಬಾರಿ ರಾಸುಗಳ ಪ್ರದರ್ಶನ ಏರ್ಪಡಿಸಿ ಬಹುಮಾನ ವಿತರಣೆ ಮಾಡಬೇಕು. ಮೆರವಣಿಗೆಗೆ ಚಾಲನೆ ನೀಡುವ ಕಿರಂಗೂರು ಬನ್ನಿಮಂಟಪದಲ್ಲಿ ಸ್ವಚ್ಛತಾ ಕಾರ್ಯಕ್ರಮಗಳನ್ನು ಕೈಗೊಂಡು ಸಿದ್ಧತೆಗಳನ್ನು ಪ್ರಾರಂಭಿಸಿ. ಯೋಗ ದಸರಾದಲ್ಲಿ ಯೋಗ ಪ್ರದರ್ಶನದೊಂದಿಗೆ ಯೋಗ ಸ್ಪರ್ಧೆಗಳನ್ನು ಸಹ ಆಯೋಜಿಸಿ. ಶಿಕ್ಷಣ ಇಲಾಖೆ ಅವರು ಯೋಗ ಸ್ಪರ್ಧೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸುವಂತೆ ಶಾಲಾ ಕಾಲೇಜುಗಳಿಗೆ ಮಾಹಿತಿ ನೀಡಿ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮಗಳ ಆಯೋಜನೆಗಾಗಿ ಸ್ವಾಗತ, ಕ್ರೀಡಾ, ವೇದಿಕೆ, ಮೆರವಣಿಗೆ, ಆರೋಗ್ಯ, ನಗರ ಅಲಂಕಾರ, ಹಣಕಾಸು, ಸ್ವಚ್ಛತೆ, ಆಹಾರ, ಆಹಾರ ಮೇಳ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿದಂತೆ ವಿವಿಧ ಉಪಸಮಿತಿಗಳನ್ನು ರಚಿಸಿ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ವಸ್ತು ಪ್ರದರ್ಶನ ಸಮಿತಿಯಿಂದ ಅನಾವರಣಗೊಳಿಸಲಾಗುವ ಮಳಿಗೆಗಳಲ್ಲಿ ಅರ್ಧದಷ್ಟು ಮಳಿಗೆಗಳನ್ನು ಆಹಾರ ಮೇಳಕ್ಕೆ ನೀಡಲಾಗುವುದು. ಇಲ್ಲಿ ವಿವಿಧ ಜಿಲ್ಲೆಯಲ್ಲಿ ಹೆಸರುವಾಸಿಯಾಗಿರುವ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ನಗರಸಭೆ ಅಧ್ಯಕ್ಷ ಎಂ.ವಿ ಪ್ರಕಾಶ್, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ, ಪಾಂಡವಪುರ ಉಪವಿಭಾಗಾಧಿಕಾರಿ ಶ್ರೀನಿವಾಸ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ನಂದಕುಮಾರ್ ನಿಧನ



ಕೆ.ಆರ್.ಪೇಟೆ: ನಿವೃತ್ತ ಬಿಸಿಎಂ ಅಧಿಕಾರಿ ನಂದಕುಮಾರ್(66) ಗುರುವಾರ ಮೈಸೂರಿನ ಹೆಬ್ಬಾಳು ಬಡಾವಣೆಯ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.


ಮೃತರ ಅಂತ್ಯಕ್ರಿಯೆಯು ಆ.29ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂಪತ್ ಕುಮಾರ್



ಕೆ.ಆರ್.ಪೇಟೆ: ತಾಲೂಕಿನ ಜಾಗಿನಕೆರೆ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಅರ್ಚಕರಾದ, ನಿವೃತ್ತ ಪೋಸ್ಟ್ ಮಾಸ್ಟರ್ ಸಂಪತ್ ಕುಮಾರ್(75) ಗುರುವಾರ ಕೆ.ಆರ್.ಪೇಟೆ ಪಟ್ಟಣದ ಜಯನಗರ ಬಡಾವಣೆಯಲ್ಲಿನ ತಮ್ಮ ನಿವಾಸದಲ್ಲಿ ನಿಧನ ಹೊಂದಿದ್ದಾರೆ.ಮೃತರು ಪತ್ನಿ ರತ್ನಮ್ಮ, ಪುತ್ರ ಜೆ.ಎನ್.ನಾಗೇಶ್, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಆ.29ರಂದು ಶುಕ್ರವಾರ ಬೆಳಿಗ್ಗೆ 9ಗಂಟೆಗೆ ಹುಟ್ಟೂರು ಜಾಗಿನಕೆರೆ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ,

ಬಾಲ್ಯವಿವಾಹದಿಂದ ಬಾಲಕಿಯ ರಕ್ಷಣೆ



ಚಾಮರಾಜನಗರ: ಜಿಲ್ಲೆಯ ಹನೂರು ತಾಲೂಕಿನ ಪಟ್ಟಣವೊಂದರ ಅಪ್ರಾಪ್ತ ಬಾಲಕಿಗೆ ಆ.29ರಂದು ತಮಿಳುನಾಡಿನ ಬಣ್ಣಾರಿ ಅಮ್ಮನ ದೇವಸ್ಥಾನದಲ್ಲಿ ನಡೆಯುತ್ತಿದ್ದ ಬಾಲ್ಯವಿವಾಹವನ್ನು ತಡೆದು ಬಾಲಕಿಯನ್ನು ರಕ್ಷಿಸಿದ್ದಾರೆ.

ಅಪ್ರಾಪ್ತ ಬಾಲಕಿಗೆ ತಮಿಳುನಾಡಿನ ಬಣ್ಣಾರಿ ಅಮ್ಮನ ದೇವಸ್ಥಾನದಲ್ಲಿ ಬಾಲ್ಯ ವಿವಾಹ ಮಾಡುತ್ತಿದ್ದಾರೆ ಎಂಬ ದೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಸಹಾಯವಾಣಿ ಸಂಖ್ಯೆ 1098ಗೆ ಬಂದಿತ್ತು ಈ ಮಾಹಿತಿ ಮೇರೆಗೆ ಹನೂರು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ, ರಾಜಸ್ವ ನಿರೀಕ್ಷಕರು, ಪೊಲೀಸ್, ಆರೋಗ್ಯ ಸಿಬ್ಬಂದಿ, ಶಾಲಾ ಮುಖ್ಯ ಶಿಕ್ಷಕರು, ಬಿಸಿಎಂ ಇಲಾಖೆಯವರು, ಶಿಶು ಅಭಿವೃದ್ಧಿ ಯೋಜನೆ ಮೇಲ್ವಿಚಾರಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಸಹಾಯವಾಣಿ ಸಿಬ್ಬಂದಿ ಬಾಲಕಿಯ ಮನೆಗೆ ಭೇಟಿ ನೀಡಿ ಮಾಹಿತಿ ಪಡೆದರು.

ಬಾಲಕಿಯನ್ನು ರಕ್ಷಿಸಿ ಅಗತ್ಯ ದಾಖಲಾತಿಗಳೊಡನೆ ಮುಂದಿನ ಕ್ರಮಕ್ಕಾಗಿ ಮಕ್ಕಳ ಕಲ್ಯಾಣ ಸಮಿತಿಗೆ ತಾತ್ಕಾಲಿಕ ಆಶ್ರಯಕ್ಕಾಗಿ ಹಾಜರುಪಡಿಸಲಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮಕ್ಕಳ ಸಹಾಯವಾಣಿಯ ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾ.ನಗರ ಜಿಲ್ಲೆಯಾದ್ಯಂತ ಅದ್ಧೂರಿ ಗಣಪತಿ ಪ್ರತಿಷ್ಠಾಪನೆ


ಗಣೇಶ ಚತುರ್ಥಿ ಅಂಗವಾಗಿ ಚಾಮರಾಜನಗರದ ರಥದ ಬೀದಿಯಲ್ಲಿ ಶ್ರೀವಿದ್ಯಾಗಣಪತಿ ಮಂಡಳಿ ವತಿಯಿಂದ ಗಣೇಶಮೂರ್ತಿ ಪ್ರತಿಷ್ಠಾಪಿಸಲಾಯಿತು.

ಚಾಮರಾಜನಗರ, ಆ.28– ಗಣೇಶ ಚತುರ್ಥಿ ಅಂಗವಾಗಿ ಚಾಮರಾಜನಗರ ಜಿಲ್ಲೆಯಾದ್ಯಂತ ಗಣಪತಿಯನ್ನು ಪ್ರತಿಷ್ಠಾಪಿಸಿ ಅದ್ಧೂರಿ ಪೂಜೆ ನೆರವೇರಿಸಲಾಯಿತು. ಜಿಲ್ಲೆಯಾದ್ಯಂತ ಅಲ್ಲಲ್ಲಿ ಗಣಪತಿ ಪೆಂಡಾಲ್ ಹೂವಿನ ಅಲಂಕಾರ ಸೇರಿದಂತೆ ವೈವಿದ್ಯಮಯ ಅಲಂಕಾರಗಳಿಂದ ಪ್ರತಿಷ್ಠಾಪಿಸಿ, ಪೂಜಿಸಿ, ಪ್ರಸಾರ ವಿತರಿಸಿದಲ್ಲದೆ ಕೆಲವು ಕಡೆ ಆರ್ಕೆಸ್ಟ್ರಾ, ಸಂಗೀತಗಳನ್ನು ಏರ್ಪಡಿಸಿ ಭಕ್ತರನ್ನು ರಂಜಿಸಿದರು. ನಗರದ ರಥದ ಬೀದಿಯಲ್ಲಿ ಶ್ರೀ ವಿದ್ಯಾಗಣಪತಿ ಮಂಡಳಿ ವತಿಯಿಂದ ಗಣೇಶಮೂರ್ತಿ ಪ್ರತಿಷ್ಠಾಪಿಸಲಾಯಿತು.

ನಗರಸಭಾ ಅಧ್ಯಕ್ಷ ಸುರೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ ಪಿ.ಲಕ್ಷ್ಮಯ್ಯ ಇತರರು ಪ್ರತಿಷ್ಠಾಪನೆ ವೇಳೆ ಹಾಜರಿದ್ದು, ಪೂಜೆಯಲ್ಲಿ ಪಾಲ್ಗೊಂಡು ಮೊದಲ ಪೂಜೆ ಮಾಡಿ ಗಮನ ಸೆಳೆದರು. ಕಳೆದ 63 ವರ್ಷಗಳಿಂದ ವಿಜೃಂಭಣೆಯಿಂದ, ಸೌಹಾರ್ದತೆಯಿಂದ ಗಣೇಶ ಹಬ್ಬ ನಡೆದುಕೊಂಡು ಬಂದಿದ್ದು, ಈ ಬಾರಿಯೂ ಕೂಡ ಅದ್ದೂರಿಯಾಗಿ ಮತ್ತು ಸೌಹಾರ್ದತೆಯಿಂದ ಕೂಡಿರಲಿ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಹೇಳಿದರು

ನಗರಸಭಾ ಅಧ್ಯಕ್ಷ ಸುರೇಶ್ ಮಾತನಾಡಿ, ಶ್ರೀ ವಿದ್ಯಾ ಗಣಪತಿ ಮಂಡಳಿ ವತಿಯಿಂದ 63ನೇ ವರ್ಷದ ಗಣೇಶಮೂರ್ತಿ ಪ್ರತಿಷ್ಠಾಪನೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಬೃಹತ್ ಗಣಪತಿ ಮೂರ್ತಿ ಕೂರಿಸಿ ಅದ್ದೂರಿಯಾಗಿ ಜಾನಪದ ಕಲಾತಂಡಗಳೊಂದಿಗೆ ವಿಸರ್ಜನೆ ಮಾಡಲಾಗುವುದು ಇದಕ್ಕೆ ನಗರದ ಎಲ್ಲ ಸಮುದಾಯದ ಮುಖಂಡರ ಸಹಕಾರ ಅಗತ್ಯವಾಗಿದೆ ಎಂದರು.

ಶ್ರೀ ವಿದ್ಯಾಗಣಪತಿ ಮಂಡಳಿ ಅಧ್ಯಕ್ಷ ಶಿವಣ್ಣ ಮಾತನಾಡಿ, ಶ್ರೀ ವಿದ್ಯಾ ಗಣಪತಿ ಮಂಡಳಿ ವತಿಯಿಂದ ಪ್ರತಿ ವರ್ಷದಂತೆ ಒಂದಲ್ಲಾ ಒಂದು ವೈವಿಧ್ಯಮಯ ಗಣಪತಿ ಪ್ರತಿಷ್ಠಾಪನೆಗೆ ಮಾಡಿಕೊಂಡು ಬಂದಿದ್ದು, ಇಂದು ಸಣ್ಣ ಗಣಪತಿ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದು ಮುಂದಿನ ದಿನಗಳಲ್ಲಿ ಬೃಹತ್ ಗಣಪತಿಯನ್ನು ಪ್ರತಿಷ್ಠಾಪಿಸಲಾಗುವುದು.

ಕಳೆದ 63 ವರ್ಷಗಳಿಂದ ವಿಜೃಂಭಣೆಯಿಂದ ಗಣಪತಿಮೂರ್ತಿ ಪ್ರತಿಷ್ಠಾಪಿಸಿಕೊಂಡು ಬರಲಾಗಿದ್ದು, ಸದ್ಯದಲ್ಲೇ ಗಣಪತಿ ಮೂರ್ತಿ ವಿಸರ್ಜನೆ ಗೆ ದಿನಾಂಕ ನಿರ್ಧರಿಸಲಾಗುವುದು ಎಂದರು.

ಶ್ರೀವಿದ್ಯಾ ಗಣಪತಿ ಮಂಡಳಿ ಉಪಾಧ್ಯಕ್ಷ ಶಿವುವಿರಾಟ್ ಮಾತನಾಡಿ, ಚಾಮರಾಜನಗರ ಶ್ರೀವಿದ್ಯಾಗಣಪತಿ ಮಂಡಳಿಯು ತನ್ನದೆಯಾದ ಇತಿಹಾಸ, ಪರಂಪರೆಯನ್ನು ಹೊಂದಿದ್ದು, ಪ್ರತಿವರ್ಷದಂತೆ ಈ ಬಾರಿಯೂ ಕೂಡ ಬೃಹತ್ ಗಣೇಶಮೂರ್ತಿ ಪ್ರತಿಷ್ಠಾಪಿಸಲು ನಿರ್ಧರಿಸಿದ್ದು, ಕಾರಣಾಂತರಗಳಿಂದ ಸಣ್ಣ ಗಣೇಶಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಮುಂದಿನ ದಿನಗಳಲ್ಲಿ. ಬೃಹತ್ ಗಣೇಶ ಮೂರ್ತಿ ಕೂರಿಸಲಾಗುವುದು ಎಂದರು.

ಗಣಪತಿ ಮಂಡಳಿ ವತಿಯಿಂದ ಸಾಮಾಜಿಕ ಸೇವಾ ಕಾರ್ಯಕ್ರಮಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅಯೋಜಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಶ್ರೀವಿದ್ಯಾ ಗಣಪತಿ ಮಂಡಳಿಯ ಕಾರ್ಯಾಧ್ಯಕ್ಷ ಬುಲೆಟ್ ಚಂದ್ರನಾಯಕ, ಪ್ರಧಾನ ಕಾರ್ಯದರ್ಶಿಗಳಾದ ಬಂಗಾರನಾಯಕ, ಮಹೇಶ್, ಉಪಾಧ್ಯಕ್ಷ ವಿರಾಟ್ ಶಿವು, ಎಸ್.ಕಿರಣ್, ರಮೇಶ್, ನಗರಸಭಾ ಸದಸ್ಯರಾದ ಸುದರ್ಶನ್ ಗೌಡ, ಶಿವರಾಜ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಮಾಜಿ ಸದಸ್ಯ ಸುಂದರ್ ರಾಜ್, ಮುಖಂಡರಾದ ಬಾಲಸುಬ್ರಹ್ಮಣ್ಯಂ, ನೂರೊಂದು ಶೆಟ್ಟಿ, ಮಾಜಿ ಚುಡ ಅಧ್ಯಕ್ಷರಾದ ಶಾಂತಮೂರ್ತಿ ಕುಲಗಾಣ, ಅಧ್ಯಕ್ಷ ಸೈಯದ್ ರಫೀ, ಯ.ಮಾಧು, ಯ.ರಾಜುನಾಯಕ, ಚಂದ್ರಶೇಖರ, ಮಾರ್ಕೇಟ್ ಕುಮಾರ್, ನವೀನ್, ರಾಜು ಭಕ್ತಿ, ಶ್ರೀನಿಧಿ ಕುದರ್, ಪಾಪಣಿ, ಶ್ರೀನಿವಾಸಗೌಡ, ಶಂಕರ್, ಕಾಂತರಾಜು, ಎಂ.ಎಸ್.ಚಂದ್ರಶೇಖರ್, ಅಶ್ವಿನ್‌ಇತರರು ಹಾಜರಿದ್ದರು.

ಕುದೇರು ಗ್ರಾಮಸ್ಥರಿಂದಲೇ ರಸ್ತೆ ರಿಪೇರಿ



ಚಾಮರಾಜನಗರ: ಸಂತೆಮರಹಳ್ಳಿ ನಂಜ ನಗೂಡು ಹೆದ್ದಾರಿಯಲ್ಲಿ ಭಾರೀ ಮಳೆಯಿಂದ ಬಾರಿ ವಾಹನಗಳು ಓಡಾಡುತ್ತಿರುವುದರಿಂದ ದೊಡ್ಡ ಗುಂಡಿಗಳಾಗಿ ವಾಹನಗಳು ಸಂಚರಿಸಲು ಬಹಳ ತೊಂದರೆಯಾಗಿತ್ತು.

ಸ್ಥಳೀಯ ಜನಪ್ರತಿನಿಧಿಗಳ ಬಳಿ ಗ್ರಾಮಸ್ಥರು ಹಲವಾರು ಬಾರಿ ರಸ್ತೆಯ ಬಗ್ಗೆ ತಿಳಿಸಿದ್ದರೂ ಸಹ ಜನ ಪ್ರತಿನಿಧಿಗಳು ಗಣನೆಗೆ ತೆಗೆದುಕೊಳ್ಳದೆ ಇದ್ದಾಗ ಗ್ರಾಮಸ್ಥರೇ ಬೇಸತ್ತು ತಮ್ಮ ಸ್ವಂತ ಹಣದಿಂದ ರಸ್ತೆ ರಿಪೇರಿ ಮಾಡಿಸುತ್ತಿದ್ದಾರೆ.

ಮುಂದಿನ ವಾರ ಕರ್ನಾಟಕದಲ್ಲಿ ಹೆಸರುವಾಸಿಯಾಗಿರುವ ಕುಧೇರು ಸ್ವರ್ಣ ಗೌರಿ ಅಮ್ಮನವರ ಜಾತ್ರೆ ಇರುವುದರಿಂದ ಭಕ್ತಾದಿಗಳಿಗೆ ತೊಂದರೆ ಆಗದಂತೆ ನಾವೇ ರಸ್ತೆ ನಿರ್ಮಿಸಿಕೊಳ್ಳುತ್ತೇವೆ ಎಂದು ಗ್ರಾಮಸ್ಥರು ತಿಳಿಸಿದರು.

ನಶಾ ಮುಕ್ತ ಭಾರತ ಅಭಿಯಾನದಡಿ ಮಾದಕ ವಸ್ತು ವ್ಯಸನ ಮುಕ್ತ ಭಾರತಕ್ಕಾಗಿ ಪ್ರತಿಜ್ಞಾ ವಿಧಿ ಸ್ವೀಕಾರ


ಮಾದಕ ವಸ್ತು ಸೇವನೆ ಮಾಡದಿರಲು ಗುರುವಾರ ನಡೆದ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಚಾಮರಾಜನಗರ, ಆ.28– ನಶಾ ಮುಕ್ತ ಭಾರತ ಅಭಿಯಾನ ಯೋಜನೆಯಡಿ ಮಾದಕ ವಸ್ತು ಸೇವನೆ ಮಾಡದಿರಲು ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿ ಇಂದು ಏರ್ಪಡಿಸಲಾಗಿತ್ತು.

ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಅವರು ಯುವಕರು, ಸಾರ್ವಜನಿಕರು ಮಾದಕ ವಸ್ತು ವ್ಯಸನಕ್ಕೆ ಬಲಿಯಾಗಬಾರದು. ಮಾದಕ ವಸ್ತುಗಳಾದ ಗಾಂಜಾ, ಅಫೀಮು, ನಾರ್ಕೋಟಿಕ್ ಡ್ರಗ್ಸ್ ಮತ್ತು ನಶೆ ಉಂಟು ಮಾಡುವ ವಸ್ತುಗಳಿಂದ ದೂರ ಇರಬೇಕು. ಶಾಲಾ–ಕಾಲೇಜುಗಳಲ್ಲಿ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ ದೇಶವನ್ನು ವ್ಯಸನಮುಕ್ತ ಅಥವಾ ನಶೆ ಮುಕ್ತ ಭಾರತವಾಗಿಸಲು ನಾವೆಲ್ಲಾ ಪಣ ತೊಡಬೇಕು ಎಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ಚಂದ್ರಶೇಖರ್ ಮಾತನಾಡಿ, ನಮ್ಮ ದೇಶದ ಬೆಳವಣಿಗೆಗೆ ಸಂಪನ್ಮೂಲ ಬಳಕೆ ಮತ್ತು ಉತ್ಪಾದಕತೆಗೆ ಯುವಕರು ಬಹಳ ಮುಖ್ಯ. ಯುವಕರು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗದೆ ಉತ್ತಮ ಬೆಳವಣಿಗೆಯತ್ತ ಗಮನಹರಿಸಬೇಕು ಎಂದರು.

ಪ್ರಭಾರ ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ಎಂ.ಎಸ್.ರಾಜೇಶ್‌ಕುಮಾರ್, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ. ಅಂಕಪ್ಪ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆ.31ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಚಾಮರಾಜನಗರ ಉಪವಿಭಾಗ ವ್ಯಾಪ್ತಿಯಲ್ಲಿ ಎರಡನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಆ.31ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಬದನಗುಪ್ಪೆ, ಪಣ್ಯದಹುಂಡಿ, ಬೆಂಡರವಾಡಿ, ಕೆಲ್ಲಂಬಳ್ಳಿ ಎನ್‌ಜೆವೈ, ಇಂಡಸ್ಟ್ರಿಯಲ್ ಏರಿಯಾ, ಯುನಿವರ್ಸಿಟಿ, ಮರಿಯಾಲ, ಮುತ್ತಿಗೆ, ಹೆಗ್ಗೋಠಾರ ಹಾಗೂ ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಕಲ್ಲಹಳ್ಳಿ, ಕಸ್ತೂರು ಎನ್‌ಜೆವೈ, ಮರಿಯಾಲ, ಬೇಡರಪುರ, ಕೆಲ್ಲಂಬಳ್ಳಿ, ಬಸವಾಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಿಗ್‌ಬಾಸ್ ಜಗನ್ ನಟನೆಯ ಮಾಂಗಲ್ಯ



ಬಿಗ್‌ಬಾಸ್ ಖ್ಯಾತಿಯ ನಟ ಜಗನ್ ಈಗ ನಿರ್ದೇಶಕರಾಗುತ್ತಿದ್ದಾರೆ. ಮಾಂಗಲ್ಯ ಎಂಬ ಧಾರಾವಾಹಿಯ ನಿರ್ಮಾಣ, ನಿರ್ದೇಶನದ ಜತೆಗೆ ನಾಯಕನಾಗೂ ನಟಿಸುತ್ತಿದ್ದಾರೆ. ಉದಯ ವಾಹಿನಿಯಲ್ಲಿ ಸೆ.2ರಿಂದ ಪ್ರಾರಂಭವಾಗಲಿರುವ ಮಧ್ಯಮ ವರ್ಗದ ಯುವತಿ ಹಾಗೂ ಶ್ರೀಮಂತ ಕುಟುಂಬದ ಯುವಕನ ಸುತ್ತ ನಡೆಯುವ ಕಥಾಹಂದರ ಒಳಗೊಂಡಿರುವ ಮಾಂಗಲ್ಯ ಮಂಗಳವಾರ ಪ್ರಾರಂಭವಾಗುತ್ತಿರುವ ಕನ್ನಡದ ಮೊದಲ ಸೀರಿಯಲ್.

ದುರ್ಗಾಪುರದ ದಿಟ್ಟ ಯುವತಿ ಮಯೂರಿ ಹಾಗೂ ತಾರಕ್ ಸುತ್ತ ನಡೆಯುವ ಕಥಾಹಂದರ ಇದರಲ್ಲಿದ್ದು, ಕೃಷಿ, ಹೈನುಗಾರಿಕೆ ಹೀಗೆ ಏನೇ ಕೆಲಸವಾದರೂ ಪುರುಷರಿಗೆ ಸಮಾನವಾಗಿ ಎಲ್ಲವನ್ನೂ ನಿಭಾಯಿಸುವ ಗಟ್ಟಿಗಿತ್ತಿ ಮಯೂರಿ. ತಾರಕ್ ಶ್ರೀಮಂತ ಕುಟುಂಬದ ಹುಡುಗ ಆ ಮನೆಯ ತೋಟದ ಉಸ್ತುವಾರಿಯನ್ನು ಮಯೂರಿಯೇ ನೋಡಿಕೊಳ್ಳುತ್ತಿರುತ್ತಾಳೆ. ಆದರೆ ಅಹಂಕಾರಿಯಾದ ತನ್ನ ತಾಯಿಯ ವರ್ತನೆ ಸಹಿಸದ ತಾರಕ್ ಮದ್ಯ ವ್ಯಸನಿಯಾಗಿರುತ್ತಾನೆ. ಒಂದು ಸಂದರ್ಭದಲ್ಲಿ ತನ್ನಮ್ಮನ ಸೊಕ್ಕನ್ನು ಮುರಿಯಲು ಹೋಗಿ ಬಡಕುಟುಂಬದ ಮಯೂರಿಯ ಕೊರಳಿಗೆ ತಾಳಿ ಕಟ್ಟಿಬಿಡುತ್ತಾನೆ. ಅಲ್ಲಿಂದ ಮಯೂರಿಯ ಜೀವನದ ಹೊಸ ಪಯಣ ಶುರುವಾಗುತ್ತದೆ.

ಬಿಗ್ಬಾಸ್ ಅಲ್ಲದೆ ಕೆಲ ಧಾರಾವಾಹಿಗಳಲ್ಲಿ ನಟಿಸಿರುವ ಜಗನ್, ಕುಡುಕ ಗಂಡನ ಪಾತ್ರ ನಿರ್ವಹಿಸಲು ಸಾಕಷ್ಟು ತಯಾರಿ ಮಾಡಿಕೊಂಡಿದ್ದಾರೆ. ನಟನೆ, ನಿರ್ದೇಶನ ಹಾಗೂ ನಿರ್ಮಾಣದಂತಹ ಮೂರೂ ಜವಾಬ್ದಾರಿಗಳನ್ನು ಒಟ್ಟಿಗೇ ನಿಭಾಯಿಸುವುದು ತುಸು ಕಷ್ಟವೇ. ಆದರೆ ಬರ್‍ತಾ ಬರ್‍ತಾ ಸರಿಹೋಯ್ತು ಎನ್ನುತ್ತಾರೆ ಜಗನ್.



ಸಿಜಿ ಎಫೆಕ್ಟ್‌ನಲ್ಲಿ ಡಿ.25ಕ್ಕೆ ರಿಲೀಸ್

ಅರ್ಜುನ್ ಜನ್ಯ ನಿರ್ದೇಶನದ, ಡಾ.ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ. ಶೆಟ್ಟಿ ನಟಿಸಿರುವ, 45 ಚಿತ್ರದ ಬಿಡುಗಡೆ ದಿನಾಂಕ ಪ್ರಕಟವಾಗಿದೆ ಎಂ. ರಮೇಶ್ ರೆಡ್ಡಿ ಅವರು ನಿರ್ಮಿಸಿರುವ ಈ ಚಿತ್ರ ಆ.15ರಂದೇ ತೆರೆ ಕಾಣಬೇಕಿತ್ತು. ಸಿಜಿ ವರ್ಕ್ ತಡವಾಗುತ್ತಿರುವ ಹಿನ್ನೆಲೆ ರಿಲೀಸ್ ಡೇಟ್ ಮುಂದೆ ಹೋಗಿದೆ,

ನಿರ್ಮಾಪಕ ರಮೇಶ್ ರೆಡ್ಡಿ ಮಾತನಾಡುತ್ತಾ, ಡಿ. 25 ನಮಗೆಲ್ಲ ತುಂಬಾ ಚೆನ್ನಾಗಿದೆ ಅಂತ ಗುರುಗಳು ಹೇಳಿದರು, ಹಾಗಾಗಿ ಅದೇ ದಿನ ರಿಲೀಸ್ ಮಾಡುತ್ತಿದ್ದೇವೆ, ನನ್ನ, ಶಿವಣ್ಣ, ಜನ್ಯ ಮೂವರ ಜಾತಕಕ್ಕೂ ಆ ದಿನ ತುಂಬಾ ಚೆನ್ನಾಗಿದೆಯಂತೆ. ಈಗಾಗಲೇ 75% ಸಿಜಿ ವರ್ಕ್ ಆಗಿದೆ. ಚಿತ್ರವನ್ನು ಪ್ರಾಕ್ಟಿಕಲ್ ಆಗಿ ನೋಡಿದಾಗ ಚೆನ್ನಾಗಿದೆ ಅನಿಸ್ತಿತ್ತು. ನಮ್ಮ ಇಡೀ ಸಿನಿಮಾ ನಿಂತಿರೋದೇ ಸಿಜಿ ಮೇಲೆ. ಅದೇ ಕಾರಣಕ್ಕೆ ಇಷ್ಟು ತಡವಾಗ್ತಿದೆ. ಮೈಸೂರಿನವರೇ ಆದ ಯಶ್‌ಗೌಡ ಅವರು ವಿಎಫ್‌ಎಕ್ಸ್ ಕೆಲಸ ಮಾಡ್ತಿದ್ದಾರೆ ಎಂದರು.

ನಿರ್ದೇಶಕ ಅರ್ಜುನ್ ಜನ್ಯ ಮಾತನಾಡಿ, ಚಿತ್ರದಲ್ಲಿ 45% ಸಿಜಿ ಬರುತ್ತದೆ. ನಾವೇನೂ ಬೇಕಂತ ಮಾಡ್ತಿಲ್ಲ, ಅದನ್ನು ಕಥೆನೇ ಡಿಮ್ಯಾಂಡ್ ಮಾಡ್ತಿದೆ, ನಮ್ಮ ಚಿತ್ರಕ್ಕೆ ಶಿವಣ್ಣನೇ ದೊಡ್ಡ ಶಕ್ತಿಯಾಗಿ ನಿಂತಿದ್ದಾರೆ. ಚಿತ್ರದಲ್ಲಿ ಮೂವರೂ ನಾಯಕರಿಗೆ ಸಮಾನ ಅವಕಾಶವಿದೆ, ಚಿತ್ರ ನೋಡುವಾಗ ಅದು ಸಿಜಿ ಅನಿಸಬಾರದು, ರಿಯಲಿಸ್ಟಿಕ್ ಆಗಿ ಕಾಣಬೇಕು ಅಂತ ನಿಖರತೆಗಾಗಿ ಕಾಯ್ತಿದ್ದೆವು. ಕನ್ನಡ ಸಿನಿಮಾದಲ್ಲಿ ನೋಡದೇ ಇರುವಂಥ ಅದ್ಭುತ ಸಿಜಿ ಮಾಯಾಲೋಕ ಈ ಚಿತ್ರದಲ್ಲಿ ಕಾಣಿಸುತ್ತದೆ ಎಂದು ಹೇಳಿದರು. ನಂತರ ಮಾತನಾಡಿದ ನಿರ್ಮಾಪಕ ರಮೇಶ್ ರೆಡ್ಡಿ, ಚಿತ್ರವನ್ನು ತುಂಬಾ ಜನ ಕೇಳ್ತಿದಾರೆ, ಆದರೆ ನಾವೇ ಸಿಜಿ ಮುಗಿಯಲಿ ಅಂತ ಕಾಯ್ತಿದ್ದೇವೆ, ಬಜೆಟ್ ಜಾಸ್ತಿನೇ ಆಗಿದೆ. ಅದು ಸಿನಿಮಾದಲ್ಲಿ ಕಾಣುತ್ತೆ ಎಂದರು.

ನೋಡಿದ್ದು ಸುಳ್ಳಾಗಬಹುದು... ಇದು ರಿಯಲ್ ಕಥೆ



ಮಿಸ್ಸಿಂಗ್ ಕೇಸ್ ಒಂದರ ಸುತ್ತ ನಡೆಯುವ ಕಥೆ ಇಟ್ಟುಕೊಂಡ ವಿಜಯ್ ಚಲಪತಿ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ 'ನೋಡಿದ್ದು ಸುಳ್ಳಾಗಬಹುದು' ಅನಿಲ್‌ಕುಮಾರ್ ಕೆ.ಆರ್. ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಈ ಚಿತ್ರವನ್ನು ನಿರ್ಮಿಸುವ ಜತೆಗೆ ನಾಯಕನಾಗೂ ನಟಿಸಿದ್ದಾರೆ. ಕನಸುಗಳ ಮೆರವಣಿಗೆ ಎಂಬ ಹಾಡಿನ ಲಿರಿಕಲ್ ವಿಡಿಯೋ ಇತ್ತೀಚೆಗೆ ಬಿಡುಗಡೆಯಾಯಿತು.

ಹಲವು ಚಿತ್ರಗಳಿಗೆ ಸಹ, ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿರುವ ವಿಜಯ್ ಚಲಪತಿ ಮೊದಲ ಬಾರಿಗೆ ನಿರ್ದೇಶನ ಮಾಡಿರುವ ಚಿತ್ರವಿದು. ಇದೊಂದು ಸಸ್ಪೆನ್ಸ್, ಥ್ರಿಲ್ಲರ್ ಚಿತ್ರವಾಗಿದ್ದು, ಬೆಂಗಳೂರಲ್ಲಿ ನಡೆದಂಥ ಘಟನೆ ಈ ಚಿತ್ರಕ್ಕೆ ಪ್ರೇರಣೆ. ಚಿತ್ರದ ಕಥೆಗೂ, ಟೈಟಲ್‌ಗೂ ಏನು ಸಂಬಂಧ ಎನ್ನುವುದು ಚಿತ್ರ ನೋಡಿದಾಗ ತಿಳಿಯುತ್ತದೆ. ಎಂಟರ್‌ಟೈನ್‌ಮೆಂಟ್ ಜತೆಗೆ ಕೊನೆಯಲ್ಲಿ ಒಂದೊಳ್ಳೆ ಮೆಸೇಜ್ ಕೂಡ ಚಿತ್ರದಲ್ಲಿದೆ ಎಂದು ಹೇಳಿದರು.

ನಾಯಕ ಹಾಗೂ ನಿರ್ಮಾಪಕ ಅನಿಲ್‌ಕುಮಾರ್ ಮಾತನಾಡುತ್ತಾ, ನಾನು ಮೂಲತಃ ಚಿಕ್ಕಬಳ್ಳಾಪುರದವನು. ನನಗೆ ಮೊದಲಿನಿಂದಲೂ ನಟನೆಯಲ್ಲಿ ಆಸಕ್ತಿ. ಉಷಾ ಭಂಡಾರಿ ಅವರ ಶಾಲೆಯಲ್ಲಿ ಕಲಿತು, ಈಗ ನಟನಾಗಿದ್ದೇನೆ. ವಿಜಯ್ ಚಲಪತಿ ಪರಿಚಯವಾಗಿ ಈ ಕಥೆ ಹೇಳಿದಾಗ ಕಥೆ ಹಾಗೂ ಶೀರ್ಷಿಕೆ ಎರಡೂ ನನಗೆ ಇಷ್ಟವಾಯಿತು. ಕೊನೆಯ 15 ನಿಮಿಷದಲ್ಲಿ ಒಳ್ಳೆಯ ಮೆಸೇಜ್ ಕೊಡುತ್ತೇವೆ, ನಮ್ಮ ಮಕ್ಕಳನ್ನು ನಾವು ಹೇಗೆ ನೋಡಿಕೊಳ್ಳಬೇಕು, ಅವರು ಹೇಗೆ ತಮ್ಮ ತಂದೆ, ತಾಯಿಗೆ ರಿಯಾಕ್ಟ್ ಮಾಡುತ್ತಾರೆ ಅಂತ ಹೇಳಿದ್ದೇವೆ. ಚಿತ್ರದಲ್ಲಿ ನಾನೊಬ್ಬ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನಮ್ಮ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ ಎಂದು ಹೇಳಿದರು. ನಟ ಶ್ರೀಕಾಂತ್ ಮಾತನಾಡಿ, ಇದು ನನ್ನ 3ನೇ ಚಿತ್ರ. ಈವರೆಗೆ ನಾನು ಲವ್‌ಸಾಂಗ್ ಮಾಡಿದ್ದಿಲ್ಲ ಎಂದು ಹೇಳಿದರು. ನಾಯಕಿ ಪ್ರಿಯ ತರುಣ್ ಮಾತನಾಡಿ, ನಾನು ಸುಮಾರು ಸಿನಿಮಾಗಳಲ್ಲಿ ಅಭಿನಯಿಸಿದ್ದೇನೆ, ಇದರಲ್ಲಿ ಒಬ್ಬ ಲಾಯರ್ ಹೆಂಡತಿ ಹಾಗೂ ಇಬ್ಬರು ಮಕ್ಕಳ ತಾಯಿಯ ಪಾತ್ರ ಮಾಡಿದ್ದೇನೆ ಎಂದರು. ನಂತರ ಕಲಾವಿದರಾದ ಗಣೇಶ್‌ರಾವ್ ಕೇಸರ್‌ಕರ್, ಛಾಯಾಗ್ರಾಹಕ ಕೆ.ವಿ.ಕಿರಣ್ ಮುಂತಾದವರು ಚಿತ್ರದ ಕುರಿತಂತೆ ಮಾತನಾಡಿದರು. ಚಿತ್ರದ ನಾಲ್ಕು ಹಾಡುಗಳಲ್ಲಿ ಗುಮ್ಮಿನೇನಿ ವಿಜಯ್ ಎರಡು ಹಾಡುಗಳಿಗೆ ಹಾಗೂ ಮಿಹಿರಾವ್ಸ್ ಎರಡು ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ.

ಲವ್, ಆ್ಯಕ್ಷನ್, ಸೆಂಟಿಮೆಂಟ್ ಚಿತ್ರ ಓಂ ಶಿವ





'ಓಂ ಶಿವಂ' ಚಿತ್ರದಲ್ಲಿ ಭಾರ್ಗವ ಕೃಷ್ಣ ಮತ್ತು ವಿರಾನಿಕ ಶೆಟ್ಟಿ

ತಮ್ಮ ಪ್ರೀತಿ ಉಳಿಸಿಕೊಳ್ಳಲು ಯುವ ಪ್ರೇಮಿಗಳು ನಡೆಸುವ ಹೋರಾಟದ ಕಥೆಯೇ ಓಂ ಶಿವಂ. ಅಲ್ವಿನ್ ನಿರ್ದೇಶನ, ಕೆಎನ್.ಕೃಷ್ಣ ಅವರ ನಿರ್ಮಾಣದ ಈ ಚಿತ್ರದ ಟ್ರೈಲರನ್ನು ಇತ್ತೀಚೆಗೆ ನಿರ್ದೇಶಕ ಸಿಂಪಲ್ ಸುನಿ ಅವರು ಬಿಡುಗಡೆ ಮಾಡಿದರು. ನಮ್ಮ ಚಿತ್ರ ಈಗಾಗಲೇ ತನ್ನ ಹಾಡುಗಳು ಹಾಗೂ ಟ್ರೇಲರ್ ಮೂಲಕವೇ ಜನರ ಮನಸ್ಸಿಗೆ ಹತ್ತಿರವಾಗಿದೆ. ಸೆಪ್ಟೆಂಬರ್ 5ರಂದು ತೆರೆ ಕಾಣಲಿರುವ ನಮ್ಮ ಚಿತ್ರ ಲವ್ ಮತ್ತು ಆ್ಯಕ್ಷನ್ ಹೀಗೆ ಎರಡು ಜಾನರ್‌ನಲ್ಲಿ ಸಾಗುತ್ತದೆ. ಇಂದಿನ ಹುಡುಗ-ಹುಡುಗಿಯರು ತಮ್ಮ ಪ್ರೀತಿ ಉಳಿಸಿಕೊಳ್ಳಲು ಹೇಗೆಲ್ಲಾ ಸ್ಟ್ರಗಲ್ ಮಾಡುತ್ತಾರೆ ಎಂಬುದನ್ನು ಭಾವನಾತ್ಮಕ ಸನ್ನಿವೇಶಗಳ ಜತೆ ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಿದ್ದೇವೆ ಎಂದು ಹೇಳಿದರು.


ನಂತರ ನಿರ್ಮಾಪಕ ಕೃಷ್ಣ ಕೆ.ಎನ್. ಮಾತನಾಡಿ, 20 ವರ್ಷಗಳ ಹಿಂದೆ ನಾನೇ ನಾಯಕನಾಗಬೇಕೆಂಬ ಆಸೆ ಇತ್ತು. ಅದು ಆಗಲಿಲ್ಲ. ಈಗ ನನ್ನ ಮಗ ಭಾರ್ಗವ ಕೃಷ್ಣನನ್ನು ಈ ಚಿತ್ರದ ಮೂಲಕ ನಾಯಕನಾಗಿ ಚಿತ್ರರಂಗಕ್ಕೆ ಪರಿಚಯಿಸಿದ್ದೇನೆ. ನಿರ್ಮಾಣದ ಜೊತೆ ಪೊಲೀಸ್ ಅಧಿಕಾರಿ ಪಾತ್ರವನ್ನೂ ಮಾಡಿದ್ದೇನೆ. ಆಲ್ವಿನ್ ಒಂದೊಳ್ಳೆ ಕಥೆ ಮಾಡಿಕೊಂಡು ನನ್ನ ಬಳಿ ಬಂದಿದ್ದರು. ಇಂಥ ಕಥೆಯ ಮೂಲಕ ನನ್ನ ಮಗನನ್ನು ಪರಿಚಯಿಸಿದರೆ ಆತನಿಗೆ ಒಳ್ಳೇ ಭವಿಷ್ಯವಿರುತ್ತದೆ ಎಂದು ಆತನಿಗೆ ಬಣ್ಣ ಹಚ್ಚಿಸಿದ್ದೇನೆ, ಸಿನಿಮಾ ಇಷ್ಟು ಚನ್ನಾಗಿ ಮೂಡಿಬರಲು ಚಿತ್ರ ತಂಡದ ಸಹಕಾರವೇ ಕಾರಣ. ಕನ್ನಡ, ತೆಲುಗು ಹಾಗೂ ತಮಿಳು ಸೇರಿ ಮೂರು ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರ ಸೆ.5ರಂದು ಕನ್ನಡದಲ್ಲಿ ಮಾತ್ರ ಬಿಡುಗಡೆಯಾಗಲಿದೆ ಎಂದರು.

ನಾಯಕ ಭಾರ್ಗವ ಕೃಷ್ಣ ಮಾತನಾಡುತ್ತಾ, ಆಲ್ವಿನ್ ಅವರು ಹೇಳಿದ ಈ ಕಥೆ ನಮಗೆಲ್ಲ ಬಹಳ ಇಷ್ಟವಾಯಿತು. ಚಿತ್ರದಲ್ಲಿ ನನ್ನ ಪಾತ್ರಕ್ಕೆ ಮೂರು ಶೇಡ್ ಇದೆ. ಪಾತ್ರದ ಹೆಸರು ಶಿವ. ಸಾಕಷ್ಟು ತಯಾರಿ ಮಾಡಿಕೊಂಡು ಚಿತ್ರದಲ್ಲಿ ನಟಿಸಿದ್ದೇನೆ. ಲವ್, ಆ್ಯಕ್ಷನ್, ಸೆಂಟಿಮೆಂಟ್ ಹೀಗೆ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳು ಚಿತ್ರದಲ್ಲಿದೆ. ವಿರಾನಿಕ ಶೆಟ್ಟಿ, ಯಶ್‌ಶೆಟ್ಟಿ, ವರ್ಧನ್ ತೀರ್ಥಹಳ್ಳಿ, ಕಾಕ್ರೋಜ್ ಸುಧೀ ಹೀಗೆ ಸಾಕಷ್ಟು ಪ್ರಮುಖ ಕಲಾವಿದರು ನಮ್ಮ ಚಿತ್ರದಲ್ಲಿ ನಟಿಸಿದ್ದಾರೆ ಎಂದರು. ನಾಯಕಿ ವಿರಾನಿಕ ಶೆಟ್ಟಿ ಮಾತನಾಡಿ, ತಮ್ಮ ಪಾತ್ರದ ಬಗ್ಗೆ ವಿವರಿಸಿದರು. ವೀರೇಶ್ ಅವರ ಛಾಯಾಗ್ರಹಣ ಹಾಗೂ ಸತೀಶ್ ಚಂದ್ರ ಅವರ ಸಂಕಲನ ಈ ಚಿತ್ರಕ್ಕಿದೆ.

ಸಿನಿಪದಬಂಧ-591



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1. ಇಂಪಾದ ಧ್ವನಿಯಲ್ಲಿ ಮಾಧುರ್ಯವಿದೆ 3
2. ಸತ್ಯಜ್ಯೋತಿ ಚಿತ್ರದ 'ನಾಯಕಿ' 4
6. ರವಿವರ್ಮ ಚಿತ್ರ ಬಿಡಿಸಲು ಬಳಸಿದ ಸಾಧನ 2
7. ಹನ್ನೆರಡು ಸೂತ್ರಗಳನ್ನು ಒಳಗೊಂಡ ಕುಟುಂಬ 5
9. ಜಗ್ಗೇಶ್ – ಮೋನಿಕಾ ಬೇಡಿ ಅಭಿನಯದ ಹೊಂಬಾಳೆ ! 6
10. ರವಿಚಂದ್ರನ್ – ಯಮುನಾ ಅಭಿನಯದ ಬಂಗಾರ 2
11. ಬಗ್ಗಡದಲ್ಲಿ ಅರಳಿದ ಕುಸುಮ 7
15. ಕೆ. ಬಾಲಚಂದರ್ ನಿರ್ದೇಶನದಲ್ಲಿ ರಮೇಶ್ ಕಂಡ ಕನಸು 7
17. ಮುರಾರಿಯೊಂದಿಗೆ ಬಂದವನು 3
18." _ _ _ _ _ _ _ _ _ ಮರೆಯಾಗಿ ಹೋಗದೆ ನಿಲ್ಲು ಬಾಳಲ್ಲಿ ಕತ್ತಲೆ ತುಂಬಿ.... ", 9

ಮೇಲಿನಿಂದ ಕೆಳಕ್ಕೆ

1. ಮಂಗಳ ಗೌರಿ ಚಿತ್ರದ ನಾಯಕ 5
2. ಒಳ್ಳೆಯ ಪ್ರಸೂತಿಯಲ್ಲಿ ಜನಿಸಿದವಳು 3
3. ಎರಡು ಕನಸು ಚಿತ್ರದ ಮಂಜುಳಾ ಪಾತ್ರ 3
4. ರಮೇಶ್ – ಸುಧಾರಾಣಿ ಪ್ರೇಮ ಕಾವ್ಯ! 5
5. ಅಂಬಿ – ಮಹಾಲಕ್ಷ್ಮಿ ನಡೆಸಿದ ನಾವೇ 5
8. ಕಲ್ಯಾಣ್‌ಕುಮಾರ್ ಅಭಿನಯದ ವಕೀಲರ ಪುತ್ರಿ 6
9. ನರಿ ಬಾರಿಸಿದ ವಾದ್ಯ 3
10. ಹೇಗಿದ್ದವನು ಹೇಗಾದ ಗೊತ್ತಾ !? 5
12. ಅಂಬರೀಷ್ ನೀಡಿದ ಆತಿಥ್ಯ ! 3
13. " _ _ _ _ ಬೆಳದಿಂಗಳ ಈ ತಂಪಿನ ಅಂಗಳದಲ್ಲಿ.... ", 4
14. ರಾಮ್ ಕುಮಾರ್ – ಶ್ವೇತಾ ಅಭಿನಯದ ನೂಪುರದ ಸದ್ದು 4
16. ಅನಂತ್‌ನಾಗ್‌ನ ಆಕಾಶ ಇಲ್ಲಿ ಅಸ್ತವ್ಯಸ್ತ 3

ಹೆಸರು ____________________
ವಿಳಾಸ ____________________
____
ದೂರವಾಣಿ ಸಂಖ್ಯೆ ____________________

ಸಿನಿ ಪದಬಂಧ 590ರ ಉತ್ತರ

ಪಾ	ಪ	ಪು	ಣ್ಯ		ಅ	ಸಂ	ಭ	ವ		ಸಂ
ವ		ಟ್ಟ				ಗ್ರಾ				ಭ್ರ
ನ			ಸು		ರಾ	ಮ	ಶ್ಯಾ	ಮ	ಭಾ	ಮ
ಗಂ	ಡು	ಗ	ಲಿ	ರಾ	ಮ			ದ		
ಗಾ			ಗೆ		ಪ		ತ	ರಂ	ಗಿ	ಣಿ
		ಪ್ರ			ರ			ಗಿ		
ಮಂ	ಕು	ತಿ	ಮ್ಮ		ಶು		ಆ			ದೋ
		ಕಾ			ರಾ	ಣಿ	ಮ	ಹಾ	ರಾ	ಣಿ
ಮ	ಧು	ರ	ಸಂ	ಗ	ಮ		ನಿ			ಸಾ
ಯೂ				ಲಾ				ಣ		ಗ
ರ		ಟಾ	ಪ್	ಟೆ	ನ್		ರಾ	ಜಾ	ಹು	ಲಿ

ವಿಜೇತರು: ಶಶಿಕಲಾ ಎಂ., ರಿವರ್ ಸ್ಟೋರ್, ಸರಸ್ವತಿಪುರಂ, ಮೈಸೂರು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಈ ವಾರ ತೆರೆಗೆ 'ಗಂಗೆ ಗೌರಿ' ಕಥೆ



ಹಿರಿಯ ನಟ ಗಣೇಶ್‌ರಾವ್ ಕೇಸರಕರ್ ನಿರ್ಮಾಣದ ಹಾಗೂ ಬಿ.ಎ.ಪುರುಷೋತ್ತಮ್ ನಿರ್ದೇಶನದ ಪೌರಾಣಿಕ ಕಥಾಹಂದರ ಒಳಗೊಂಡ ಗಂಗೆ ಗೌರಿ ಚಿತ್ರ ಈ ವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಈ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಯಾಯಿತು. ಈ ಚಿತ್ರದಲ್ಲಿ ಗಣೇಶ್‌ರಾವ್ ಅವರು ಶಿವನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಇದು ಅವರ ನಟನೆಯ 350ನೇ ಚಿತ್ರ ಜಿ.ಆರ್.ಫಿಲಂಸ್ ಮೂಲಕ ಗಣೇಶ್‌ರಾವ್ ಅವರೇ ಈ ಚಿತ್ರವನ್ನು ನಿರ್ಮಿಸಿದ್ದಾರೆ, ತುಳಜಾಬಾಯಿ, ರೂಪ. ದೊಡ್ಮನಿ, ಸುಮಿತ ಪ್ರವೀಣ್, ಬಸವರಾಜ್ ದೇಸಾಯಿ ಚಿತ್ರದ ಸಹ ನಿರ್ಮಾಪಕರು.

ದಶಕಗಳ ಹಿಂದೆ ಡಾ.ರಾಜ್‌ಕುಮಾರ್, ಲೀಲಾವತಿ ಹಾಗೂ ಭಾರತಿ ಅವರ ಅಭಿನಯದಲ್ಲಿ ತೆರೆ ಕಂಡಿದ್ದ ಗಂಗೆ ಗೌರಿ ಸೂಪರ್ ಹಿಟ್ ಆಗಿತ್ತು. ಇದೀಗ ಅದೇ ಶೀರ್ಷಿಕೆಯಡಿ ಮತ್ತಷ್ಟು ಅಂಶಗಳನ್ನು ಈ ಚಿತ್ರದ ಮೂಲಕ ನಿರ್ದೇಶಕರು ಹೇಳ ಹೊರಟಿದ್ದಾರೆ. ರಾಣೆಬೆನ್ನೂರಿನ ರೂಪಾಲಿ ಅವರು ಗೌರಿ, ಪಾರ್ವತಿ ಹಾಗೂ ದಾಕ್ಷಾಯಿಣಿ ಆಗಿ ಮೂರು ಶೇಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಗಂಗೆಯಾಗಿ ನಿಖಿತಾಸ್ವಾಮಿ ನಟಿಸಿದ್ದು, ಉಳಿದಂತೆ ಜಯಸಿಂಹ ಮುಸುರಿ, ಎಸ್ಕಾರ್ಟ್ ಶ್ರೀನಿವಾಸ್, ಜಿಮ್ ಶಿವು, ಬಸವರಾಜ ದೇಸಾಯಿ, ಧನಲಕ್ಷ್ಮಿ, ಮಮತಗೌಡ, ಕು.ಋತುಸ್ಪರ್ಶ, ಗೀತಾ, ರಕ್ಷಾಗೌಡ ನಟಿಸಿದ್ದಾರೆ. ರಾಜ್ ಭಾಸ್ಕರ್ ಅವರ ಸಂಗೀತ, ಗೌರಿ ವೆಂಕಟೇಶ್ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಸುತ್ತಮುತ್ತ ಗಂಗೆ ಗೌರಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಶಿವ ಪುರಾಣದಲ್ಲಿ ಗಂಗೆ ಗೌರಿಯ ಸಂಬಂಧವೇನು? ಗಂಗೆ ಯಾಕೆ ಶಿವನ ತಲೆಯ ಮೇಲಿರುತ್ತಾಳೆ? ಗೌರಿ ಯಾಕೆ ಶಿವನ ತೊಡೆ ಮೇಲೆ ಕೂತಿರುತ್ತಾಳೆ? ಇವರಿಬ್ಬರನ್ನು ಶಿವ ಯಾವ ರೀತಿ ಸಂಭಾಳಿಸುತ್ತಾನೆ. ಜಗತ್ ರಕ್ಷಕನಾದ ಪರಮೇಶ್ವರನಿಗೂ ವಿಧಿ ಹೇಗೆ ಕಾಟ ಕೊಟ್ಟಿತು. ಶನಿದೇವನಿಂದ ಈ ಮೂವರು ಯಾವ ರೀತಿ ಸಂಕಷ್ಟ ಅನುಭವಿಸುತ್ತಾರೆ ಎಂಬುದನ್ನು ಗಂಗೆ ಗೌರಿ ಚಿತ್ರದಲ್ಲಿ ತೋರಿಸಲಾಗುತ್ತಿದೆ. ಈಗಾಗಲೇ ಸಾಕಷ್ಟು ಪೌರಾಣಿಕ ಚಿತ್ರಗಳಲ್ಲಿ ಬೇರೆ ಬೇರೆ ಪಾತ್ರ ನಿರ್ವಹಿಸಿರುವ ಗಣೇಶ್‌ರಾವ್ ಈ ಹಿಂದೆ ಸಿದ್ದರಾಮೇಶ್ವರ ಚಿತ್ರದಲ್ಲಿ ಶಿವನಾಗಿ ಬಣ್ಣ ಹಚ್ಚಿದ್ದರು. ಈ ಚಿತ್ರದಲ್ಲಿ ಎರಡನೇ ಬಾರಿಗೆ ಶಿವನ ಪಾತ್ರ ಮಾಡಿದ್ದಾರೆ,

ಮೈಸೂರು ಮಿತ್ರ

ಬೃಹತ್ ಗಣೇಶ ಮೂರ್ತಿ ಪ್ರತಿಷ್ಠಾಪನೆ



ಮೈಸೂರು ತಾಲೂಕಿನ ಬರಡನಪುರದಲ್ಲಿ ಬೃಹತ್ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿ ಪೂಜೆ ಸಲ್ಲಿಸಲಾಯಿತು. ಈ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್, ಜಯಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಬಸವಣ್ಣ ಮತ್ತು ಗ್ರಾಮಸ್ಥರಿದ್ದರು.



ವಿಜೃಂಭಣೆಯ ಶ್ರೀಗಣೇಶ ಚತುರ್ಥಿ

ಸರಗೂರಿನಲ್ಲಿ ಏಕದಂತ ಗ್ರೂಪ್ ವತಿಯಿಂದ ಶ್ರೀಗಣೇಶ ಚತುರ್ಥಿಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ವೇಳೆ ಗ್ರೂಪ್‌ನ ಶ್ರೀಕಾಂತ್, ಕೃಷ್ಣ ರಾಖಿ, ಬೆಟ್ಟ ಮೈಲಾರಿ ಆನಂದ, ಚೆನ್ನನಾಯಕ, ನಾಗರಾಜು, ಮಹೇಶ, ಶಿವು, ರವಿ, ನಂದಿ, ಪ್ರಸಾದ್, ಮಧು, ರಮೇಶ ಇನ್ನಿತರರಿದ್ದರು.

ನಾಳೆ ಭಗೀರಥ ಜಯಂತಿ, ಸಮುದಾಯ ಭವನಕ್ಕೆ ಗುದ್ದಲಿ ಪೂಜೆ

ನಂಜನಗೂಡು, ಆ.28– ತಾಲೂಕು ಉಪ್ಪಾರ ಸಂಘದಿಂದ ಆ.31ರಂದು ಭಗೀರಥ ಜಯಂತಿ ಹಾಗೂ ಸಮುದಾಯ ಭವನ ಗುದ್ದಲಿ ಪೂಜೆ ಕಾರ್ಯಕ್ರಮ ನಡೆಯಲಿದ್ದು, ಸಾರ್ವಜನಿಕರು ಹಾಗೂ ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕಾಂಗ್ರೆಸ್ ಯುವ ಘಟಕ ತಾಲೂಕು ಅಧ್ಯಕ್ಷ ವಿಜಯಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 6 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಉಪ್ಪಾರ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸುವರು. ನಂತರ ಬೆಳಗ್ಗೆ 11.30ಕ್ಕೆ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಭಗೀರಥ ಮಹರ್ಷಿ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡದೊಂದಿಗೆ ಮೆರವಣಿಗೆ ಮಾಡಲಾಗುವುದು. ಮೆರವಣಿಗೆಗೆ ಶಾಸಕ ದರ್ಶನ್ ಚಾಲನೆ ನೀಡುವರು. ನಂತರ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಆವರಣದಲ್ಲಿ ಭಗೀರಥ ಮಹರ್ಷಿ ಜಯಂತಿ ಜರುಗಲಿದ್ದು, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಪುರುಷೋತ್ತಮನಂದ ಪುರಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು. ದರ್ಶನ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಪುಟ್ಟರಂಗಶೆಟ್ಟಿ ಸೇರಿದಂತೆ ಜನ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಉಪ್ಪಾರ ಸಮುದಾಯದ ಎಲ್ಲಾ ಕುಲಬಾಂಧವರು ಮತ್ತು ಸಾರ್ವಜನಿಕರು ಹಾಗೂ ವಿವಿಧ ಸಂಘ–ಸಂಸ್ಥೆಗಳ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಿದ್ದು, ಪ್ರಸನ್ನ, ಸುಖಿ, ರಂಗಸ್ವಾಮಿ, ನವೀನ, ರವಿ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಪ್ರತ್ಯೇಕ ಅಪಘಾತ: ವೃದ್ಧ, ಮಗು ಸಾವು

ಹುಣಸೂರು, ಆ.28– ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಮಗು ಹಾಗೂ ವೃದ್ಧರೊಬ್ಬರು ಸಾವನ್ನಪ್ಪಿದ್ದಾರೆ.

ವೃದ್ಧ ಸಾವು: ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಕುಳಿತ್ತಿದ್ದ ವೃದ್ಧ ಸಾವನ್ನಪ್ಪಿ, ಸವಾರ ಗಾಯಗೊಂಡಿರುವ ಘಟನೆ ತಾಲೂಕಿನ ಮನುಗನಹಳ್ಳಿ ಬಳಿ ನಡೆದಿದೆ.

ಹಳ್ಳಿಕೆರೆ ಗ್ರಾಮದ ನಿವಾಸಿ ಶಿವಪ್ಪ (64) ಸಾವನ್ನಪ್ಪಿದ್ದು, ಸೋಮಶೇಖರ್ ಗಾಯಗೊಂಡು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮೈಸೂರಿನಿಂದ ಹುಣಸೂರಿಗೆ ಬರುತ್ತಿದ್ದ ಸಾರಿಗೆ ಬಸ್ ಮನುಗನಹಳ್ಳಿ ಗೇಟ್ ಬಳಿ ಬೈಕ್ ಡಿಕ್ಕಿ ಹೊಡೆದಿದೆ. ಈ ವೇಳೆ ಬೈಕ್ ಓಡಿಸುತ್ತಿದ್ದ ಸೋಮಶೇಖರ್ ಎಡ ಭಾಗಕ್ಕೆ ಬಿದ್ದು ಗಾಯಗೊಂಡು ಪ್ರಾಣಾಪಾಯದಿಂದ ಪಾರಾದರೇ, ಹಿಂಬದಿ ಕುಳಿತ್ತಿದ್ದ ಶಿವಪ್ಪ ಅವರ ತಲೆ ಮೇಲೆ ಬಸ್ ಚಕ್ರ ಹರಿದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಮಗು ಸಾವು: ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮಗು ಸಾವನ್ನಪ್ಪಿರುವ ಘಟನೆ ತಾಲೂಕಿನ ಮಧುಗಿರಿ ಕೊಪ್ಪಲು ಗ್ರಾಮದ ಬಳಿ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕಿನ ಮಹದೇಶ್ವರ ಕಾಲೋನಿ ನಿವಾಸಿ ಸೋಮೇಶ್, ಅಮೂಲ್ಯ ದಂಪತಿ ಪುತ್ರ ವೇದಾಂತ್ (3) ಸಾವನ್ನಪ್ಪಿದ ಮಗು. ಸೋಮೇಶ್ ಅವರು ತನ್ನ ಪತ್ನಿ ಅಮೂಲ್ಯ, ಪುತ್ರಿ ಅನುಶ್ರೀ ಹಾಗೂ ಪುತ್ರ ವೇದಾಂತ್‌ನೊಂದಿಗೆ ತಮ್ಮ ಬೈಕ್‌ನಲ್ಲಿ ಕನಕಪುರ ತಾಲೂಕಿನ ಯರೇಹಳ್ಳಿ ಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ಮಧುಗಿರಿಕೊಪ್ಪಲು ಬಳಿ ಕೊಡಗಿನ ಕಡೆಗೆ ಹೂ ತುಂಬಿಕೊಂಡು ಹೋಗುತ್ತಿದ್ದ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಮಗು ವೇದಾಂತ ಸ್ಥಳದಲ್ಲೇ ಸಾವನ್ನಪ್ಪಿದ್ದು, ಉಳಿದವರು ತೀವ್ರ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ ಯುತ್ತಿದ್ದಾರೆ ಎಂದು ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ತಿಳಿಸಿದ್ದಾರೆ. ಈ ಪ್ರಕರಣಗಳ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯುತ್ ಸ್ಪರ್ಶ: ಯುವಕ ಸಾವು



ನಂಜನಗೂಡು, ಆ.28– ವಿದ್ಯುತ್ ಸ್ಪರ್ಶದಿಂದ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬಿಳುಗಲಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ, ವರುಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಗೌತಮ್(27) ಸಾವನ್ನಪ್ಪಿದವರು. ಗೌರಿ–ಗಣೇಶ ಹಬ್ಬದ ಅಂಗವಾಗಿ ಗ್ರಾಮದ ಶ್ರೀಚೌಡೇಶ್ವರಿ ದೇವಾಲಯದಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ದೇವಾಲಯದ ಎದುರು ವಿದ್ಯುತ್ ದೀಪಾಲಂಕಾರಕ್ಕೆ ಸಿದ್ಧತೆ ಮಾಡುತ್ತಿದ್ದ ವೇಳೆ ಕಬ್ಬಿಣದ ಪೈಪ್‌ಗೆ ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ಕಂಬಕ್ಕೆ ಒರಗಿಕೊಂಡು ನಿಂತಿದ್ದ ಗೌತಮ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬಿಳಿಗೆರೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತಿ.ನರಸೀಪುರದಲ್ಲಿ ಕ್ರೀಡಾಪಟುಗಳಿಗೆ ಕರಾಟೆ ಬೆಲ್ಟ್ ಟೆಸ್ಟ್

ತಿ.ನರಸೀಪುರ, ಆ.28– ಪಟ್ಟಣದ ಹಳೇ ಸಂತೆಮಾಳದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮೈಸೂರಿನ ನಾಗ ಮಾರ್ಷಲ್ ಅಕಾಡೆಮಿ ವತಿಯಿಂದ ಕರಾಟೆ ತರಬೇತಿ ಪಡೆದ ಕ್ರೀಡಾಪಟುಗಳಿಗೆ ಕಾಟೆ ಬೆಲ್ಟ್ ಟೆಸ್ಟ್ ಆಯೋಜಿಸಲಾಗಿತ್ತು.

ಕೆಲ ದಿನಗಳ ಕಾಲ ನಡೆದ ತರಬೇತಿಯಲ್ಲಿ ನೂರಾರು ಮಕ್ಕಳು ಭಾಗವಹಿಸಿ ಕರಾಟೆ ಕಲಿತ ಹಿನ್ನೆಲೆಯಲ್ಲಿ ಎಲ್ಲರಿಗೂ ಕರಾಟೆ ಕಲರ್ ಬೆಲ್ಟ್‌ಗಳನ್ನು ಗಣ್ಯರು ವಿತರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಿ.ಸಿ.ಲಿಂಗರಾಜು ಮಾತನಾಡಿ, ಮಕ್ಕಳು ದೇಸಿ ಕ್ರೀಡೆ ಆಗಿರುವ ಕರಾಟೆ ಕಲಿಯುವುದರಿಂದ ಭವಿಷ್ಯದಲ್ಲಿ ಎದುರಾಗುವ ಶತ್ರುಗಳ ದಾಳಿಯಿಂದ ಸ್ವಯಂ ರಕ್ಷಣೆ ಮಾಡಿಕೊಳ್ಳಬಹುದು. ನಾಗ ಮಾರ್ಷಲ್ ಅಕಾಡೆಮಿ ಅಧ್ಯಕ್ಷ ಸೋಸಲೆ ಸಿದ್ದರಾಜು ಹಾಗೂ ಸೆನ್ಸಾಯಿ ಯಡದೊರೆ ಮಹದೇವಸ್ವಾಮಿ ನೇತೃತ್ವದಲ್ಲಿ ನಿತ್ಯ ನಿಗದಿತ ಸಮಯದಲ್ಲಿ ನಡೆಯುತ್ತಿದ್ದ ಕರಾಟೆ ತರಬೇತಿಯಲ್ಲಿ ನೂರಾರು ಮಕ್ಕಳು ಭಾಗವಹಿಸಿದ್ದರು. ಅವರೆಲ್ಲರಿಗೂ ಕರಾಟೆ ಕಲರ್ ಬೆಲ್ಟ್ ವಿತರಿಸಲಾಗುತ್ತಿದೆ ಎಂದರು.

ಪೊಲೀಸ್ ಇನ್ಸ್‌ಪೆಕ್ಟರ್ ಧನಂಜಯ ಹಾಗೂ ಕಾಲೇ ಜಿನ ದೈಹಿಕ ಶಿಕ್ಷಣ ಶಿಕ್ಷಕ ಪಿ.ಕೆ.ಶಶಿರೇಖಾ ಮಾತನಾಡಿದರು. ಅಂತರಾಷ್ಟ್ರೀಯ ಕ್ರೀಡಾಪಟು ಕುರುಬೂರು ಚೈತ್ರ, ದೈಹಿಕ ಶಿಕ್ಷಕ ಜಯರಾಜ್ ಜಯಪ್ಪ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಅಧ್ಯಕ್ಷ ಸೋಸಲೆ ಸಿದ್ದರಾಜು, ಸೆನ್ಸಾಯಿ ಯಡದೊರೆ ಮಹ ದೇವಸ್ವಾಮಿ, ಕರಾಟೆ ಮಾಸ್ಟರ್ ಶಿವಕುಮಾರ್, ಮಾಸ್ಟರ್ ಸತೀಶ್, ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಕೆಂಚಪ್ಪ, ಜ್ಞಾನೋದಯ ಶಾಲೆಯ ಶಿಕ್ಷಕಿ ಹರ್ಷಿತ, ಕ್ರೈಸ್ತ ಪ್ರೈಮರಿ ಶಾಲೆಯ ದೀಪ, ರಾಕೇಶ್ ಸೇರಿದಂತೆ ಕರಾಟೆ ಪಟುಗಳು ಹಾಗೂ ಪೋಷಕರು ಇದ್ದರು.



ಕಾರ್ಯಕ್ರಮದಲ್ಲಿ ಅಧ್ಯಕ್ಷ ಸೋಸಲೆ ಸಿದ್ದರಾಜು ಮಾತನಾಡಿದರು.

ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಪ್ರತಾಪ್ ಆಯ್ಕೆ



ನಂಜನಗೂಡು, ಆ.28– ಸುತ್ತೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಮಾಧ್ಯಮ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ನೀಡುವ 2024ನೇ ಸಾಲಿನ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ತಾಲೂಕಿನ 'ಪ್ರತಿನಿಧಿ' ಪತ್ರಿಕೆ ವರದಿಗಾರ ಪ್ರತಾಪ್ ಟಿ.ಕೋಡಿನರಸೀಪುರ ಆಯ್ಕೆಯಾಗಿದ್ದಾರೆ.

ತಾಲೂಕು ಪತ್ರಕರ್ತರ ಸಂಘದಿಂದ ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಆ.30ರಂದು ಬೆಳಗ್ಗೆ 11 ಗಂಟೆಗೆ ಪತ್ರಿಕಾ ದಿನಾಚರಣೆ ಹಾಗೂ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದ್ದು, ಶಾಸಕ ದರ್ಶನ್ ಉದ್ಘಾಟಿಸಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಶಿವಲಿಂಗಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್ ಬೋಸ್, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಜಿಲ್ಲಾ ಕಾರ್ಯಕಾರಿಣಿ ಸಮಿತಿ ಸದಸ್ಯ ಹುಲ್ಲಹಳ್ಳಿ ಮೋಹನ್, ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ ಭಾಗವಹಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲೂಕು ಸಂಘದ ಅಧ್ಯಕ್ಷ ಹೆಚ್.ಡಿ.ರಂಗಸ್ವಾಮಿ ವಹಿಸಲಿದ್ದಾರೆ ಎಂದು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ಪಿ.ದೀಪಕ್ ಪ್ರಸಾದ್ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ



ನಂಜನಗೂಡು, ಆ.28– ನಂಜನಗೂಡು ವಿದ್ಯುತ್ ವಿತರಣಾ ಕೇಂದ್ರದಿಂದ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.29ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ನಗರದ ಹಳ್ಳದಕೇರಿ, ಗೌರಿಘಟ್ಟ ಬೀದಿ, ಬ್ರಾಡ್ ವೇ ರಸ್ತೆ, ಒಕ್ಕಲಗೇರಿ, ಅಂಗಡಿ ಬೀದಿ, ರಾಜಾಜಿ ಕಾಲೋನಿ, ಸರಸ್ವತಿ ಕಾಲೋನಿ, ಶ್ರೀರಾಂಪುರ, ಶಂಕರಪುರ, ನೀಲಕಂಠ ನಗರ, ಮೇದರ ಬೀದಿಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಸಕ ಅನಿಲ್‌ಗೆ ಸನ್ಮಾನ



ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಕೋಟೆ ಅವರು, ಶಾಸಕ ಹಾಗೂ ಜೆಎಲ್‌ಆರ್ ಸಂಸ್ಥೆ ಅಧ್ಯಕ್ಷ ಅನಿಲ್ ಅವರನ್ನು ಸನ್ಮಾನಿಸಿದರು. ಈ ವೇಳೆ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ, ಉಪಾಧ್ಯಕ್ಷ ಕಡಕೊಳ ಭರತ್, ಕಾರ್ಯದರ್ಶಿ ಹುರದನಹಳ್ಳಿ ಮಹೇಶ್ ಉಪಸ್ಥಿತರಿದ್ದರು.

ಬೆಟ್ಟದಪುರದಲ್ಲಿ ವಿನಾಯಕನ ಪ್ರತಿಷ್ಠಾಪನೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಶ್ರೀವಿನಾಯಕ ಗೆಳೆಯರ ಬಳಗದಿಂದ 14 ಅಡಿ ಎತ್ತರದ ಶ್ರೀವಿಘ್ನ ವಿನಾಯಕನನ್ನು ಪ್ರತಿಷ್ಠಾಪಿಸಲಾಯಿತು. ಈ ವೇಳೆ ಬಳಗದ ಬಿ.ವಿ.ಮಂಜುನಾಥ್, ಶಿವು, ಅರುಣ್, ಅನು ಕುಮಾರ್, ಶಿವ ಕುಮಾರ್, ಪ್ರದಿ, ಮನು, ಕೀರ್ತಿ, ರಾಜೇಶ್, ಜೀವನ್, ಮಂಜು ಗ್ರಾಮಸ್ಥರು ಹಾಜರಿದ್ದರು.

ನರಸಿಂಹಮೂರ್ತಿ ನಿಧನ



ಬೆಟ್ಟದಪುರ, ಆ.28– ಪಿರಿಯಾಪಟ್ಟಣ ತಾಲೂಕಿನ ಕಣಗಾಲು ಗ್ರಾಮದ ನಿವಾಸಿ, ಖ್ಯಾತ ಚಲನಚಿತ್ರ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಹಾಗೂ ಸಾಹಿತಿ ಕಣಗಾಲ್ ಪ್ರಭಾಕರ ಶಾಸ್ತ್ರಿ ಅವರ ಸಹೋದರ ನರಸಿಂಹಮೂರ್ತಿ(89) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸಂಜೆ ಬೆಂಗಳೂರಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐದನೇ ಪುಟದಿಂದ

ಆದವರೆಲ್ಲಾ ನಿವೃತ್ತಿ ಆಗಬೇಕೆಂದೇನಿಲ್ಲ

ಮಾಡುತ್ತೇವೆಯೇ ಹೊರತು ಬಿಜೆಪಿಗೆ ಮಾತ್ರವಲ್ಲ ಎಂದು ತಿಳಿಸಿದ್ದಾರೆ. ಇದಕ್ಕೂ ಮುನ್ನ ಸಭೆಯಲ್ಲಿ ಮಾತನಾಡಿದ ಅವರು, ಭಾರತದಲ್ಲಿನ ಕುಟುಂಬಗಳು ಆದರ್ಶಪ್ರಾಯವಾಗಿ ಮೂರು ಮಕ್ಕಳನ್ನು ಹೊಂದಬೇಕು. ಮನೆ ಮತ್ತು ದೇಶ ಎರಡಕ್ಕೂ ಮೂವರು ಮಕ್ಕಳನ್ನು ಹೊಂದುವುದು ಮುಖ್ಯ. ಮೂರು ಮಕ್ಕಳಿರುವ ಕುಟುಂಬಗಳಲ್ಲಿ, ಅವರು ಅಹಂ ಮತ್ತು ಪರಸ್ಪರ ಸಂಬಂಧಗಳನ್ನು ನಿರ್ವಹಿಸಲು ಕಲಿಯುತ್ತಾರೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. 'ಹಮ್ ದೋನೋ, ಹಮಾರೇ ತೀನ್' ಅಂದರೆ ನಾವಿಬ್ಬರು ನಮಗೆ ಮೂವರು ಎನ್ನುವ ಸೂತ್ರವನ್ನು ಫಾಲೋ ಮಾಡುವಂತೆ ಈಗಿನ ದಂಪತಿಗೆ ಅವರು ಸಲಹೆ ನೀಡಿದರು.

ಜನಸಂಖ್ಯಾ ಸಮತೋಲನ ತಪ್ಪಿದರೆ ದೇಶ ವಿಭಜನೆ: ಭವಿಷ್ಯದಲ್ಲಿ ಕುಟುಂಬ ವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಮತ್ತು ದೇಶದ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಕುಟುಂಬಗಳು ಮೂವರು ಮಕ್ಕಳನ್ನು ಹೊಂದುವುದು ಅವಶ್ಯಕ ಎಂದು ಅವರು ಹೇಳಿದರು. ನಾವು ಜನಸಂಖ್ಯಾಶಾಸ್ತ್ರದ ಬಗ್ಗೆ ಕಾಳಜಿ ವಹಿಸುತ್ತೇವೆ. ಜನಸಂಖ್ಯಾ ಸಮತೋಲನ ಬದಲಾದರೆ, ದೇಶವು ವಿಭಜನೆಯ ಅಪಾಯವನ್ನು ಎದುರಿಸುತ್ತದೆ. ಪ್ರತಿಯೊಂದು ರಾಷ್ಟ್ರವೂ ಜನಸಂಖ್ಯಾ ಅಸಮತೋಲನದಿಂದ ಸವಾಲುಗಳನ್ನು ಎದುರಿಸುತ್ತದೆ ಎಂದು ಅವರು ಹೇಳಿದರು.

ಮತಾಂತರವು ಜನಸಂಖ್ಯೆಯ ಮೇಲೆ ಪರಿಣಾಮ ಬೀರುವುದರಿಂದ ಅದು ಒಂದು ಸಮಸ್ಯೆಯಾಗಿದೆ. ಕ್ಯಾಥೋಲಿಕ್ ಕ್ರಿಶ್ಚಿಯನ್ನರು ತಾವು ಅದರಲ್ಲಿ ತೊಡಗಿಸಿಕೊಳ್ಳುವುದಿಲ್ಲ ಎಂದು ಹೇಳಿಕೊಳ್ಳುತ್ತಾರೆ. ಅತ್ತ ಮುಸ್ಲಿಂ ಉಲೇಮಾಗಳು ಅದನ್ನೇ ಹೇಳುತ್ತಾರೆ. ಧರ್ಮವು ವೈಯಕ್ತಿಕ ಆಯ್ಕೆಯ ವಿಷಯವಾಗಿದೆ, ಆದ್ದರಿಂದ ಮತಾಂತರವು ಅನಪೇಕ್ಷಿತ ಎಂದು ಅವರು ಹೇಳಿದರು.

ಹಿಂದೂ–ಮುಸ್ಲಿಂ ಮೂಲಭೂತವಾಗಿ ಒಬ್ಬರು: ಹಿಂದೂಗಳು ಮತ್ತು ಮುಸ್ಲಿಮರ ನಡುವಿನ ಸಂಬಂಧವನ್ನು ಉದ್ದೇಶಿಸಿ ಮಾತನಾಡಿದ ಮೋಹನ್ ಭಾಗವತ್, ಹಿಂದೂಗಳು ಮತ್ತು ಮುಸ್ಲಿಮರು ಮೂಲಭೂತವಾಗಿ ಒಬ್ಬರು. ಇಬ್ಬರಲ್ಲೂ ಏಕತೆ ಇದೆ. ಆದರೆ ಭಯವನ್ನು ಹುಟ್ಟು ಹಾಕಲಾಗಿದೆ, ಧರ್ಮವು ಗುರುತನ್ನು ವ್ಯಾಖ್ಯಾನಿಸುತ್ತದೆ ಮತ್ತು ಹಿಂದೂಗಳು ಎಲ್ಲವನ್ನೂ ತೆಗೆದುಕೊಳ್ಳುತ್ತಾರೆ ಎಂದು ಜನರು ಭಾವಿಸುವಂತೆ ಮಾಡಲಾಗಿದೆ. ವಾಸ್ತವದಲ್ಲಿ, ನಮ್ಮ ಗುರುತು ಏಕೀಕೃತವಾಗಿದೆ. ಸಾಂಸ್ಕೃತಿಕವಾಗಿ, ನಾವು ಹಿಂದೂಗಳು ಎಂದು ಅವರು ಹೇಳಿದರು.

ಹಿಂದೂ ಸಮುದಾಯದೊಳಗಿನ ಅಭದ್ರತೆಯು ಉದ್ವಿಗ್ನತೆಯನ್ನು ಹೆಚ್ಚಿಸುತ್ತದೆ. ಅನೇಕ ಹಿಂದೂಗಳು ಅಸುರಕ್ಷಿತರಾಗಿದ್ದಾರೆ, ತಾವು ದುರ್ಬಲರು ಎಂದು ಭಾವಿಸುತ್ತಾರೆ ಮತ್ತು ಇತರರೊಂದಿಗೆ ಸಹಬಾಳ್ವೆ ನಡೆಸುವುದರಿಂದ ತಮ್ಮ ಸ್ವಂತ ನಂಬಿಕೆಗೆ ಹಾನಿಯಾಗುವುದಿಲ್ಲ ಎಂಬ ವಿಶ್ವಾಸವನ್ನು ಹೊಂದಿರುವುದಿಲ್ಲ. ಇಸ್ಲಾಂ ಅಸ್ತಿತ್ವದಲ್ಲಿದೆ ಮತ್ತು ಯಾವಾಗಲೂ ಇರುತ್ತದೆ. ಈ ವಿಶ್ವಾಸ ಬೇರೂರಿದರೆ, ಸಂಘರ್ಷ ಕೊನೆಗೊಳ್ಳುತ್ತದೆ ಅಂತ ಮೋಹನ್ ಭಾಗವತ್ ಅಭಿಪ್ರಾಯಪಟ್ಟಿದ್ದಾರೆ.

ನಮಗದು ಧಾರ್ಮಿಕ ಆಚರಣೆ

ತರಲಾಗುತ್ತಿರಲಿಲ್ಲ ಎಂದು ರಾಜಮಾತೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಸರ್ಕಾರದ ದಸರಾ ಒಂದು ಸಾಂಸ್ಕೃತಿಕ ಆಚರಣೆ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯ. ಸರ್ಕಾರದ ವತಿಯಿಂದ ಯಾವುದೇ ಧಾರ್ಮಿಕ ಪಂಗಡದ ಆಚರಣೆಗಳಿಗೆ ಅವಕಾಶವಿಲ್ಲವಾಗಿದ್ದು, ಅಂತಹ ಉತ್ಸವವನ್ನು ನಡೆಸುವಲ್ಲಿ ಧಾರ್ಮಿಕ ಪಾವಿತ್ರ್ಯ, ಸಂಪ್ರದಾಯ ಅಥವಾ ಪರಂಪರೆಯನ್ನು ಪಡೆಯಲು ಸಾಧ್ಯವಿಲ್ಲ. ಈ ಕಾರಣದಿಂದ ಕರ್ನಾಟಕ ಸರ್ಕಾರ ಆಯೋಜಿಸುವ ಆಚರಣೆಗಳು ಸಾಂಸ್ಕೃತಿಕ ಕಾರ್ಯ ಕ್ರಮಗಳೇ ಹೊರತು ಧಾರ್ಮಿಕ ಸಂಪ್ರದಾಯವಾಗಿಲ್ಲ ಎಂದಿದ್ದಾರೆ. ಆಶ್ವೀಯುಜ ಶರನ್ನವರಾತ್ರಿ ಸಮಯದಲ್ಲಿ ನಾವು ಖಾಸಗಿಯಾಗಿ ಅರಮನೆಯ ಒಳಾಂಗಣದಲ್ಲಿ ಹಿಂದಿನ ಪದ್ಧತಿ ಹಾಗೂ ಸಂಪ್ರದಾಯದಂತೆ ನವರಾತ್ರಿ ಸಂಬಂಧ ಧಾರ್ಮಿಕ ಆಚರಣೆಗಳನ್ನು ನಡೆಸುತ್ತೇವೆ. ಅರಮನೆಯ ಹೊರಾಂಗಣದಲ್ಲಿ ಶಾಸ್ತ್ರೋಕ್ತವಾಗಿ ಪಾಡ್ಯದಿಂದ ನವಮಿ ಪರ್ಯಂತ ಪೂಜೆ ನೆರವೇರಿಸಿದ ಬಳಿಕ ವಿಜಯದಶಮಿ ಆಚರಣೆಯೊಂದಿಗೆ ಪೂರ್ಣಗೊಳ್ಳು ತ್ತದೆ. ಇದೇ ದಿನಗಳಲ್ಲಿ ಅರಮನೆ ಮುಂದೆ ಕರ್ನಾಟಕ ಸರ್ಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾ ಗುತ್ತದೆ. ಇವೆರಡರ ನಡುವೆ ಸಮಯ ಅತಿಕ್ರಮಣ ವಾಗದಂತೆ ತಪ್ಪಿಸಲು ಶ್ರೀ ಚಾಮುಂಡೇಶ್ವರಿಯ ಉದ್ಘಾಟನೆ ಮತ್ತು ಚಾಮುಂಡೇ ಶ್ವರಿಯ ಭವ್ಯ ಮೆರವಣಿಗೆಗೆ ಶುಭ ಮತ್ತು ಸೂಕ್ತ ಸಮಯವನ್ನು ನಿಗದಿಪಡಿಸಲಾ ಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಗಣೇಶ ಚತುರ್ಥಿಯ ಆಚರಣೆ ಹಾಗೂ ಅನುಗ್ರಹದಿಂದ ಎಲ್ಲಾ ಅಡೆತಡೆಗಳು, ತಪ್ಪು ಕಲ್ಪನೆಗಳು ಮತ್ತು ಸಂಘರ್ಷಗಳು ನಿವಾರಣೆಯಾಗಿ, ಶೀಘ್ರದಲ್ಲೇ ಒಮ್ಮತವನ್ನು ತಲುಪುತ್ತದೆ ಎಂದು ನಾನು ಭಾವಿಸುತ್ತೇನೆ ಎನ್ನುವ ಮೂಲಕ ಚಾಮುಂಡೇಶ್ವರಿ ಸನ್ನಿಧಿ ಹಿನ್ನೆಲೆಯ ವಾಕ್ಸಮರ ನಿಲ್ಲಬೇಕೆಂದು ಪ್ರಮೋದಾ ದೇವಿ ಒಡೆಯರ್ ಆಶಿಸಿದ್ದಾರೆ.

ಮಂಗಳೂರು ಡ್ರ್ಯಾಗನ್ಸ್ ಚಾಂಪಿಯನ್

ಕರಿಯಪ್ಪ 5(4), ಮನ್ವಂತ್ ಕುಮಾರ್ ಅಜೇಯ 15(9) ಹಾಗೂ ಶ್ರೀಶಾ ಆಚಾರ್ 1(1)ರನ್ ಗಳಿಸಿ ಔಟಾಗದೆ ಉಳಿದರು. ಮಂಗಳೂರು ಪರ ಸಚಿನ್ ಶಿಂಧೆ ಪ್ರಮುಖ 3 ವಿಕೆಟ್ ಪಡೆದರು. ಮ್ಯಾಕ್ನಿಲ್ ಹಾಗೂ ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್, ಸಂತೋಕ್ ಸಿಂಗ್ 1 ವಿಕೆಟ್ ಪಡೆದರು.

155 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡ್ರ್ಯಾಗನ್ಸ್‌ಗೆ ಉತ್ತಮ ಆರಂಭ ದೊರೆಯಿತು. ಲೋಚನ್ ಗೌಡ 18(17), ಬಿ.ಆರ್.ಶರತ್ 49(35) ರನ್ ಕಲೆಹಾಕಿ ಔಟಾದರು. ಬಳಿಕ ಜೊತೆಯಾದ ಪಲ್ಲವ್ ಕುಮಾರ್ ದಾಸ್ 7(8), ಕೆ.ವಿ.ಅನೀಶ್ 5(6)ರನ್ ಗಳಿಸಿ ಉತ್ತಮವಾಗಿ ಆಡುತ್ತಿದ್ದರು. ಆದರೆ ಮಂಗಳೂರು ಡ್ರ್ಯಾಗನ್ಸ್ 10.4 ಓವರ್ ಗಳಲ್ಲಿ 2 ವಿಕೆಟ್ ನಷ್ಟಕ್ಕೆ 85 ರನ್ ಗಳಿಸಿದ್ದ ವೇಳೆ ಪಂದ್ಯಕ್ಕೆ ಮಳೆ ಅಡ್ಡಿಪಡಿಸಿತು. ಆದರೆ ಪಂದ್ಯ ಮುಂದುವರೆಸಲು ಮಳೆ ಬಿಡುವು ನೀಡದ ಹಿನ್ನಲೆಯಲ್ಲಿ ವಿಜೆಡಿ ನಿಯಮದಡಿ ಮಂಗಳೂರು ಡ್ರ್ಯಾಗನ್ಸ್ ತಂಡಕ್ಕೆ 14 ರನ್‌ಗಳ ಜಯ ಎಂದು ಘೋಷಿಸಲಾಯಿತು. ಹುಬ್ಬಳ್ಳಿ ಪರ ರಿತೇಶ್ ಭಟ್ಕಲ್ 2 ವಿಕೆಟ್ ಉರುಳಿಸಿದರು. ಬಿ.ಆರ್.ಶರತ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರೇ, ದೇವದತ್ ಪಡಿಕ್ಕಲ್ ಸರಣಿಶ್ರೇಷ್ಠ ಪ್ರಶಸ್ತಿ ಪಡೆದರು. ಆರ್‌ಸಿಬಿ ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತದಿಂದಾಗಿ ಈ ಬಾರಿ ಪ್ರೇಕ್ಷಕರ ವೀಕ್ಷಣೆ ಮುಕ್ತ ಪಂದ್ಯಾವಳಿ ನಡೆಸಲಾಗಿತ್ತು. ಈ ಬಾರಿ ವೀಕ್ಷಕರಿಲ್ಲದೇ ನಡೆದ ಟೂರ್ನಿಗೆ ಯಾವುದೇ ವರ್ಣರಂಜಿತ ತೆರೆ ಸಿಗಲಿಲ್ಲ.

ಮಹಾರಾಜ ಟ್ರೋಫಿ ವಿನ್ನರ್ಸ್ ವಿವರ

- 2022–ಗುಲ್ಬರ್ಗಾ ಮಿಸ್ಟಿಕ್ಸ್ (ಚಾಂಪಿಯನ್ಸ್), ಬೆಂಗಳೂರು ಬ್ಲಾಸ್ಟರ್ಸ್(ರನ್ನರ್ಸ್)
- 2023–ಹುಬ್ಬಳ್ಳಿ ಟೈಗರ್ಸ್ (ಚಾಂಪಿಯನ್ಸ್), ಮೈಸೂರು ವಾರಿಯರ್ಸ್ (ರನ್ನರ್ಸ್)
- 2024–ಮೈಸೂರು ವಾರಿಯರ್ಸ್ (ಚಾಂಪಿಯನ್ಸ್), ಬೆಂಗಳೂರು ಬ್ಲಾಸ್ಟರ್ಸ್ (ರನ್ನರ್ಸ್)
- 2025– ಮಂಗಳೂರು ಡ್ರ್ಯಾಗನ್ಸ್ (ಚಾಂಪಿಯನ್ಸ್), ಹುಬ್ಬಳ್ಳಿ ಟೈಗರ್ಸ್ (ರನ್ನರ್ಸ್)

- ಅತಿಹೆಚ್ಚು ರನ್: ದೇವ್‌ದತ್ ಪಡಿಕ್ಕಲ್ (449)
- ಅತಿಹೆಚ್ಚು ವಿಕೆಟ್: ಕ್ರಾಂತಿ ಕುಮಾರ್ (26)
- ದಾಖಲಾದ ಶತಕ: 2
- ಹೆಚ್ಚು ಶತಕ: ಮೊಹಮ್ಮದ್ ತಹಾ (2)
- ಹೆಚ್ಚು ಅರ್ಧಶತಕ: ದೇವ್‌ದತ್ ಪಡಿಕ್ಕಲ್ (5)
- ದಾಖಲಾದ ಒಟ್ಟು ಸಿಕ್ಸ್: 251
- ದಾಖಲಾದ ಒಟ್ಟು ಫೋರ್ಸ್: 390
- ವೈಯಕ್ತಿಕ ಅತಿ ಹೆಚ್ಚು ಸಿಕ್ಸ್: 26 (ಸ್ಮರಣ್ ರವಿಚಂದ್ರನ್)
- ವೈಯಕ್ತಿಕ ಅತಿ ಹೆಚ್ಚು ಫೋರ್ಸ್: 51 (ಪಡಿಕ್ಕಲ್)
- ಬೆಸ್ಟ್ ಬೌಲಿಂಗ್: 5/36 (ಕ್ರಾಂತಿ ಕುಮಾರ್)
- ಐದು ವಿಕೆಟ್ ಗೊಂಚಲು: 1 ಬಾರಿ (ಕ್ರಾಂತಿ ಕುಮಾರ್)

ಸ್ವಾಮಿಯೇ ಶಿಕ್ಷೆ ಕೊಡ್ತಾನೆ

ಮುಂದಿನ ದಿನಗಳಲ್ಲಿ ಈ ಸರ್ಕಾರಕ್ಕೆ ಮಂಜುನಾಥ ಸ್ವಾಮಿಯೇ ಶಿಕ್ಷೆ ಕೊಡು ತ್ತಾನೆ ಅನ್ನೋದು ನನ್ನ ಅಭಿಪ್ರಾಯ. ನಾನು ಧರ್ಮವನ್ನು ಬೆರೆಸಲು ಹೋಗಲ್ಲ. ಆದರೆ ಸರ್ಕಾರ ನಡೆದುಕೊಂಡ ರೀತಿ ಕ್ಷೇತ್ರಕ್ಕೆ ಅವಮಾನ, ಅನುಮಾನ ಆಗೋ ರೀತಿಯಲ್ಲಿ ಸರ್ಕಾರ ಎಸ್‌ಐಟಿ ತನಿಖೆ ನಾಟಕ ಆಡಿದೆ ಎಂದು ಕಿಡಿಕಾರಿದರು.

ಈ ಕೇಸ್‌ನಲ್ಲಿ ಪ್ರಾರಂಭಿಕ ಹಂತದಲ್ಲಿ ಸರ್ಕಾರಕ್ಕೆ ದೂರು ಕೊಟ್ಟಿದ್ದು ದ್ವಾರಕನಾಥ್. ಸಿಎಂಗೆ ಅವರೇ ದೂರು ಕೊಟ್ಟರು. ಆಗ ಸಿಎಂ ದೂರು ಬಂದ ತಕ್ಷಣ ಕ್ರಮ ತೆಗೆದುಕೊಳ್ಳುವ ವಾತಾವರಣ ನಿರ್ಮಾಣ ಮಾಡಿದರು. ಇದರಲ್ಲಿ ಎಡಪಂಥೀಯ ಶಕ್ತಿಗಳು ಇದೆ ಎಂದು ಹೇಳುತ್ತಾರೆ. ಯಾರಿದ್ದಾರೆ ಎಂದು ಮುಂದಿನ ದಿನಗಳಲ್ಲಿ ಎಲ್ಲವೂ ಗೊತ್ತಾಗುತ್ತದೆ ಎಂದು ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಬಿಜೆಪಿ ಸತ್ಯಯಾತ್ರೆ

ಧರ್ಮಸ್ಥಳ ತಲುಪಲಿದ್ದೇವೆ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿ ಮಾಡಿ, ನಿಮ್ಮ ಜೊತೆಗೆ ನಾವಿದ್ದೇವೆ ಎಂದು ಬೆಂಬಲಿಸುತ್ತೇವೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು, ಧರ್ಮಾಧಿಕಾರಿಗಳನ್ನು ಸಂಪರ್ಕಿಸಿ ಈ ಮೊದಲೇ ಭೇಟಿ ಸಮಯ ನಿಗದಿಪಡಿಸಿದ್ದಾರೆ. ಬಿಜೆಪಿ ನಾಯಕರು ಮರುದಿನ ಧರ್ಮ ಯಾತ್ರೆ ಕೈಗೊಂಡಿದ್ದು, ಇದರಲ್ಲಿ ಎರಡೂ ಪಕ್ಷಗಳ ನಡುವೆ ಯಾವುದೇ ಒಡಕಿಲ್ಲ. ವಿಧಾನ ಮಂಡಲ ಅಧಿವೇಶನದಲ್ಲಿ ಎರಡೂ ಪಕ್ಷಗಳು ಒಗ್ಗಟ್ಟಾಗಿ ಹೋರಾಟ ನಡೆಸಿವೆ. ನಮ್ಮ ಕಾರ್ಯಕ್ರಮ ಮೊದಲೇ ನಿಗದಿ ಆಗಿದ್ದರಿಂದ ಯಾತ್ರೆ ಮೊದಲು ನಡೆಯುತ್ತಿದೆ ಎಂದು ಸ್ಪಷ್ಟಪಡಿಸಿದರು.

ದಸರಾ ಗಜಪಡೆಗೂ ಟ್ರಾಫಿಕ್ ಕಿರಿಕಿರಿ...



ಪ್ರತಿನಿತ್ಯ ಜಂಬೂಸವಾರಿ ಸಾಗುವ ಮಾರ್ಗದಲ್ಲಿ ಪಥಸಂಚಲನದ ತಾಲೀಮು ನಡೆಸುತ್ತಿರುವ ದಸರಾ ಗಜಪಡೆಗೂ ವಾಹನಗಳ ಟ್ರಾಫಿಕ್ ಕಿರಿಕಿರಿ ಉಂಟಾಗುತ್ತಿದೆ. ಎಷ್ಟೇ ನಿಯಂತ್ರಣ ಮಾಡಿದರೂ ವಾಹನ ಸವಾರರು ಗಜಪಡೆ ಆಜು–ಬಾಜಲ್ಲಿ ವೇಗವಾಗಿ ಸಾಗುವುದು ಬಾರೀ ಸದ್ದಿನೊಂದಿಗೆ ಹಾರ್ನ್ ಮಾಡುವುದು ತಪ್ಪಿಲ್ಲ. ಇದನ್ನು ತಡೆಯಲು ಅರಣ್ಯ ಇಲಾಖೆ ಸಿಬ್ಬಂದಿ ಮಾವುತರೂ ಹಾಗೂ ಕಾವಾಡಿಗಳಿಗೂ ಸಾಧ್ಯವಾಗಿಲ್ಲ. ಪ್ರತಿನಿತ್ಯವೂ ಇದೇ ಪರಿಸ್ಥಿತಿಯಾಗಿದೆ. ಈ ನಡುವೆ ಸರ್ಕಾರ ಬನ್ನಿಮಂಟಪದಲ್ಲಿ ಹೊಸ ಬಸ್‌ನಿಲ್ದಾಣ ನಿರ್ಮಾಣಕ್ಕೆ ಕೈಹಾಕಿದೆ. ಇದು ಆದರಂತೂ ದಸರಾ ಜಂಬೂಸವಾರಿ ಮಾರ್ಗ ಮಾರುಕಟ್ಟೆ ಮಾರ್ಗವಾಗಿ ಪರಿಣಮಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಂದೇಶ್ ನಾಗರಾಜ್–80 ಹುಟ್ಟುಹಬ್ಬ ಸಂಭ್ರಮ

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಬೃಹತ್ ಪೆಂಡಾಲ್; ಆಸನ ವ್ಯವಸ್ಥೆ

- 50 ಸಾವಿರ ಮಂದಿಗೆ ಊಟದ ವ್ಯವಸ್ಥೆ
- ಸಿದ್ಧತೆ ಪರಿಶೀಲಿಸಿದ ಸಂದೇಶ್ ನಾಗರಾಜ್



ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ನಡೆಯುತ್ತಿರುವ ಸಿದ್ಧತಾ ಕಾರ್ಯವನ್ನು ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಹಾಗೂ ಅವರ ಪುತ್ರ ಸಂದೇಶ್ ಗುರುವಾರ ಪರಿಶೀಲಿಸಿದರು.

ಮೈಸೂರು, ಆ.28– ಮೈಸೂರಿನ ಖ್ಯಾತ ಉದ್ಯಮಿ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ನಿರ್ಮಾಪಕರೂ ಆದ ವಿಧಾನ ಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರ 80ನೇ ಹುಟ್ಟುಹಬ್ಬ ಸಂಭ್ರಮಕ್ಕೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಸಿದ್ಧತೆ ಜೋರಾಗಿ ನಡೆದಿದೆ.

ಮುಂಬರುವ ಭಾನುವಾರ(ಆ.31) ಬೆಳಗ್ಗೆ 11ಕ್ಕೆ ಆಯೋಜಿಸಿರುವ ಈ ಸಮಾರಂಭಕ್ಕಾಗಿ ಭವ್ಯ ವೇದಿಕೆ, ವಾಟರ್ ಪ್ರೂಫ್ ಪ್ರಾಂಗಣ, ರಾಜಕೀಯ ನಾಯಕರು, ಸಿನಿಮಾ ತಾರೆಯರು, ಇತರೆ ಗಣ್ಯರು, ಅಭಿಮಾನಿಗಳು, ಹಿತೈಷಿಗಳು ಸೇರಿದಂತೆ ಭಾಗವಹಿಸುವ ಎಲ್ಲರಿಗೂ ಸೂಕ್ತ ಆಸನ ವ್ಯವಸ್ಥೆ ಮಾಡಲಾಗುತ್ತಿದೆ. ಯಾವುದೇ ನೂಕುನುಗ್ಗಲು, ಗೊಂದಲವಾಗದಂತೆ ಊಟಕ್ಕೂ ಅಗತ್ಯ ಕೌಂಟರ್‌ಗಳ ವ್ಯವಸ್ಥೆ ಮಾಡಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಟರಾದ ಶಿವರಾಜಕುಮಾರ್, ಸುದೀಪ್ ಸೇರಿದಂತೆ ಚಿತ್ರರಂಗದ ಅನೇಕ ಕಲಾವಿದರು, ತಂತ್ರಜ್ಞರು, ರಾಜಕೀಯ ಮುಖಂಡರು ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ಸಮಾರಂಭದಲ್ಲಿ ಸಂದೇಶ್ ನಾಗರಾಜ್ ಅವರ ಜೀವನ ಯಾನದ ಸಾಕ್ಷ್ಯಚಿತ್ರ ಪ್ರದರ್ಶನ, ಸುಮಾರು 50 ಸಾವಿರ ಮಂದಿಗೆ ಊಟದ ವ್ಯವಸ್ಥೆಗೆ ತಯಾರಿ ಮಾಡಿಕೊಳ್ಳಲಾಗಿದೆ. ಸಮಾರಂಭದ ಭಾಗವಾಗಿ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ತಂಡದವರಿಂದ ಸಂಗೀತ ಕಾರ್ಯಕ್ರಮವನ್ನೂ ಆಯೋಜಿಸಲಾಗಿದೆ.

ವಿವಿ ಮೊಹಲ್ಲಾ 8ನೇ ಕ್ರಾಸ್ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ ಗಣೇಶೋತ್ಸವ

ವಿದ್ವಾನ್ ಟಿ.ಎಂ.ಕೃಷ್ಣರ ಗಾನಮೋಡಿಗೆ ಮರುಳಾದ ಶ್ರೋತೃಗಳು





ಮೈಸೂರಿನ ವಿವಿ ಮೊಹಲ್ಲಾದ 8ನೇ ಕ್ರಾಸ್‌ನಲ್ಲಿ ಹಮ್ಮಿಕೊಂಡಿರುವ 64ನೇ ಪಾರಂಪರಿಕ ಸಂಗೀತೋತ್ಸವಕ್ಕೆ ಗುರುವಾರ ಕ್ಯಾಪ್ಟನ್ (ನಿವೃತ್ತ) ಜಿ.ಆರ್.ಗೋಪಿನಾಥ್ (ಎಡದಿಂದ 4ನೇಯವರು) ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಗಾಯಕ ವಿದ್ವಾನ್ ಟಿ.ಎಂ.ಕೃಷ್ಣ ಅವರು ಸಂಗೀತ ಕಛೇರಿ ನಡೆಸಿಕೊಡುತ್ತಿರುವುದನ್ನು ಕಾಣಬಹುದು.

ಮೈಸೂರು,ಆ.28(ಪಿಎಂ)– ಗಾನದ ಸುನಾದ ಸುಧೆಯೊಂದಿಗೆ ಸೂಸಿದ ಸಂಗೀತದ ಅಲೆಗೆ ಸಂಗೀತಾಸಕ್ತರು ತಲೆದೂಗಿದರು. ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾಯಕ ವಿದ್ವಾನ್ ಟಿ.ಎಂ.ಕೃಷ್ಣರ ಗಾನ ಮೋಡಿ ಇದು. ಇವರೊಂದಿಗೆ ಪಕ್ಕವಾದ್ಯದಲ್ಲಿ ಹೊಮ್ಮಿದ ಸಂಗೀತವು ಸಭಿಕರ ಮನ ಮುದಗೊಳಿಸುವಲ್ಲಿ ಯಶಸ್ವಿಯಾಯಿತು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದ (ವಿವಿ ಮೊಹಲ್ಲಾ) 8ನೇ ಕ್ರಾಸ್‌ನಲ್ಲಿ ಸೆ.8ರವರೆಗೆ ಶ್ರೀಪಸನ್ನ ವಿದ್ಯಾ ಗಣಪತಿ ಮಹೋತ್ಸವ ಚಾರಿಟಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ ಟ್ರಸ್ಟ್) ವತಿಯಿಂದ ಹಮ್ಮಿಕೊಂಡಿರುವ 64ನೇ ಪಾರಂಪರಿಕ ಸಂಗೀತೋತ್ಸವದ ಉದ್ಘಾಟನೆ ನಂತರ ವಿದ್ವಾನ್ ಟಿ.ಎಂ.ಕೃಷ್ಣರ ಗಾನಾಮೃತ ಗುರುವಾರ ಸಂಗೀತಾಸಕ್ತರನ್ನು ಸಂಗೀತದ ಹೊನಲಿನಲ್ಲಿ ಮೈಮರೆಯುವಂತೆ ಮಾಡಿತು.

ಸುದೀರ್ಘ ಸಮಯ ಸಂಗೀತದ ಸೊಬಗಿನಲ್ಲಿ ತೇಲಿಸಿದ ಕೃಷ್ಣರಿಗೆ ಸಭಿಕರು ಅಭಿಮಾನದ ಚಪ್ಪಾಳೆ ನೀಡಿದರು. ತ್ಯಾಗ ರಾಜರ ರಚನೆಯ ತೆಲುಗು ಭಾಷೆಯ 'ನಾಮ ಕುಸುಮಮುಲಾಚೆ...' ಗೀತೆಯನ್ನು 'ಶ್ರೀ' ರಾಗ ಹಾಗೂ 'ದೇಶಾದಿ' ತಾಳದಲ್ಲಿ ಸಾದರ ಪಡಿಸಿ ಕೃಷ್ಣ ಅವರು ಹರಿಸಿದ ಭಕ್ತಿಸುಧೆಗೆ ಸಭಿಕರು ಭಕ್ತಿಭಾವದಲ್ಲಿ ತೇಲಿದರು.

ಯಾವುದೇ ದಣಿವಿಲ್ಲದೆ ದೀರ್ಘ ಕಾಲದವರೆಗೆ ಕೃಷ್ಣರ ಕಂಠಸಿರಿಯಲ್ಲಿ ಸೂಸಿದ ರಾಗ ಮಾಧುರ್ಯಕ್ಕೆ ಸಭಿಕರು ಮನಸೋತರು. ಪಟ್ನಂ ಸುಬ್ರಹ್ಮಣ್ಯ ಅಯ್ಯರ್ ರಚಿತ 'ಅಪರದಮುಲ್ಲನ್ನಿಯು...' ಗೀತೆಯನ್ನು 'ಲತಾಂಗಿ' ರಾಗ ಹಾಗೂ 'ಆದಿ' ತಾಳದಲ್ಲಿ ಕೃಷ್ಣ ಅವರು ಪ್ರಸ್ತುತಪಡಿಸಿ, ನಾದಮಯ ಲೋಕ ಸೃಷ್ಟಿಸಿ, ಸಭಿಕರ ಮನಸೂರೆಗೊಂಡರು. ಗಾನದೊಂದಿಗೆ ಹೊಮ್ಮಿದ ಪಿಟೀಲು, ಮೃದಂಗ ಮತ್ತು ಘಟಂ ಸಂಗೀತವು ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು.

ಸಂಗೀಕ ಕಛೇರಿಗೂ ಮುನ್ನ 64ನೇ ಪಾರಂಪರಿಕ ಸಂಗೀತೋತ್ಸವಕ್ಕೆ ಖ್ಯಾತ ವಾಣಿಜ್ಯೋದ್ಯಮಿಗಳೂ ಆದ ಕ್ಯಾಪ್ಟನ್ (ನಿವೃತ್ತ) ಜಿ.ಆರ್.ಗೋಪಿನಾಥ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕಳೆದ 63 ವರ್ಷಗಳಿಂದ ಈ ರೀತಿಯ ಸಂಗೀತ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದು ನಿಜಕ್ಕೂ ಮಹತ್ತರ ಕಾರ್ಯ. ಸಮಾಜಕ್ಕೆ ಇದೊಂದು ದೊಡ್ಡ ಸೇವೆ. ಜರ್ಮನಿಯ ತತ್ವಜ್ಞಾನಿಯೊಬ್ಬರು 'ಸಂಗೀತ ಇಲ್ಲದಿದ್ದರೆ ಜೀವನದಲ್ಲಿ ಏನೋ ಕಳೆದುಕೊಂಡಂತೆ' ಎಂದು ಹೇಳಿದ್ದು, ಇದು ಜೀವನಕ್ಕೆ ಕಲೆ ಎಷ್ಟು ಮುಖ್ಯ ಎನ್ನುವ ಸಂದೇಶ ನೀಡಲಿದೆ ಎಂದು ತಿಳಿಸಿದರು.

ಸಂಗೀತ ಅತ್ಯಂತ ಮಹತ್ವದ ಕಲೆ. ಇದು ನೇರವಾಗಿ ನಮ್ಮ ಹೃದಯ ಹಾಗೂ ಆತ್ಮಕ್ಕೆ ಮುಟ್ಟುತ್ತದೆ. ಇಂದು ಸಂಗೀತ ಕಛೇರಿ ನೀಡುತ್ತಿರುವ ಟಿ.ಎಂ.ಕೃಷ್ಣ ಅವರು ಸಂಗೀತ ಕ್ಷೇತ್ರದ ಮಹಾನ್ ವಿದ್ವಾನ್. ಸಂಗೀತ ಕ್ಷೇತ್ರದಲ್ಲಿರುವ ಶೋಷಣೆಯನ್ನು ಅವರು ಧೈರ್ಯವಾಗಿ ಖಂಡಿಸುತ್ತಾರೆ. ಸಂಗೀತದಲ್ಲಿ ಎಲ್ಲಾ ಜನಾಂಗಗಳು ಒಳ ಪಡಬೇಕು ಎಂಬುದು ಅವರ ಅಭಿಪ್ರಾಯ. ಇದು ಸರಿಯಾಗಿದ್ದು, ಆ ನಿಟ್ಟಿನಲ್ಲಿ ನೋಡಿದರೆ ಈ ಸಂಗೀತೋತ್ಸವವು ಎಲ್ಲಾ ಸಮುದಾಯಗಳು ಮುಕ್ತವಾಗಿ ನೋಡಿ ಆಸ್ವಾದಿಸಲು ಅವಕಾಶ ಕಲ್ಪಿಸಿದೆ. ಎಲ್ಲಾ ಸಮುದಾಯದವರು ಇಲ್ಲಿ ಸೇರ ಬಹುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿದ್ವಾನ್ ಟಿ.ಎಂ.ಕೃಷ್ಣ ಮಾತನಾಡಿ, 30 ವರ್ಷಗಳಿಂದ ಈ 8ನೇ ಕ್ರಾಸ್ ಸಂಗಿತೋತ್ಸವಕ್ಕೆ ಬರುತ್ತಿರುವೆ. ಇಲ್ಲಿ ಸಿಗುವ ಆನಂದ, ಅನುಭವ ಬೇರೆಲ್ಲೂ ಸಿಕ್ಕಿಲ್ಲ. ಇಲ್ಲಿನ ವಾತಾವರಣ ಆಪ್ತತೆಯಿಂದ ಕೂಡಿದೆ. ಸಂಗೀತ ಕಛೇರಿಗಳು ಬೀದಿಯಲ್ಲಿ ನಡೆಯಬೇಕು. ಆಗ ಮಾತ್ರವೇ ಅದು ಎಲ್ಲರನ್ನೂ ಒಳಗೊಳ್ಳಲು ಸಾಧ್ಯ ಎಂದು ಪ್ರತಿಪಾದಿಸಿದರು.

ಟ್ರಸ್ಟ್ ಅಧ್ಯಕ್ಷ ಎಂ.ಜಗನ್ನಾಥ ಶೆಣೈ ಮಾತನಾಡಿ, ಈ ಬಾರಿ 11 ದಿನಗಳ ಬದಲಾಗಿ 13 ದಿನಗಳ ಕಾಲ ಸಂಗೀತೋತ್ಸವ ಆಯೋಜಿಸಲಾಗಿದೆ. ಇಂತಹ ಸಂಗೀತ ಕಾರ್ಯಕ್ರಮಗಳಿಗೆ ಯುವ ಜನರು ಹೆಚ್ಚಾಗಿ ಬರಬೇಕು. ಈ ಸ್ಥಳ ರಸ್ತೆಯಲ್ಲಿ ಇರುವ ಕಾರಣ ಯಾವಾಗ ಕಾರ್ಯಕ್ರಮಕ್ಕೆ ಅವಕಾಶ ಇಲ್ಲವಾಗುತ್ತದೋ ಗೊತ್ತಿಲ್ಲ. ಇಂತಹ ಸನ್ನಿವೇಶದ ನಡುವೆಯೂ 63 ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ. ಈ ರೀತಿಯ ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಅಗತ್ಯ. ಆ ಮೂಲಕ ಸಂಗೀತ ಕಲೆ ಬೆಳೆಯಬೇಕು ಎಂದು ಹೇಳಿದರು.

ಟ್ರಸ್ಟ್ ಕಾರ್ಯದರ್ಶಿ ಸಿ.ಆರ್.ಹಿಮಾಂಶು ಸೇರಿದಂತೆ ಮತ್ತಿತರ ಗಣ್ಯರು ಹಾಜರಿದ್ದರು. ಟಿ.ಎಂ.ಕೃಷ್ಣರ ಗಾಯನಕ್ಕೆ ವಿದುಷಿ ಅಕ್ಕರೈ ಶುಭುಲಕ್ಷ್ಮಿ (ಪಿಟೀಲು), ವಿದ್ವಾನ್ ಜಯ ಚಂದ್ರ ರಾವ್ (ಮೃದಂಗ), ವಿದ್ವಾನ್ ಚಂದ್ರಶೇಖರ ಶರ್ಮಾ (ಘಟಂ) ಪಕ್ಕವಾದ್ಯದಲ್ಲಿ ಸಹಕಾರ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅಂದೊಂದಿತ್ತು ಕಾಲ(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೂಲಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸಿರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ರಿಪ್ಪನ್ ಸ್ವಾಮಿ (ಕ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಿಷ್ಣುವರ್ಧನ(ಕ) + ಸಿಂಹರೂಪಿಣಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಉಸಿರು (ಕ)	2+2 ಪ್ರದರ್ಶನಗಳು

ಮುಂದಿನ ವಾರ ಬಾನು ಮುಷ್ತಾಕ್‌ಗೆ ಅಧಿಕೃತ ಆಹ್ವಾನ

ಮೈಸೂರು,ಆ.28(ಎಂಟಿವೈ)– ದಸರಾ ಉದ್ಘಾಟಕರ ಹೆಸರನ್ನು ಮುಖ್ಯ ಮಂತ್ರಿಗಳು ಘೋಷಣೆ ಮಾಡಿದ್ದು, ಸೆಪ್ಟೆಂಬರ್ ಮೊದಲ ವಾರದಲ್ಲಿ ಜಿಲ್ಲಾಡಳಿತದ ವತಿಯಿಂದ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಅಧಿಕೃತ ಆಹ್ವಾನ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.


ದಸರಾ ಗಜಪಡೆಯ ಪೂಜಾ ಕಾರ್ಯ ಕ್ರಮದಲ್ಲಿ ಪಾಲ್ಗೊಂಡ ಬಳಿಕ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, ಪ್ರಸಕ್ತ ಸಾಲಿನ ನಾಡಹಬ್ಬ ದಸರಾ ಮಹೋತ್ಸವದ ಉದ್ಘಾಟಕರ ಹೆಸರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗಾಗಲೇ ಘೋಷಣೆ ಮಾಡಿದ್ದಾರೆ. ಸರ್ಕಾರ ಆಯ್ಕೆ ಮಾಡಿರುವ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಜಿಲ್ಲಾಡಳಿತದಿಂದ ಅಧಿಕೃತವಾಗಿ ಮುಂದಿನ ವಾರ ಆಹ್ವಾನ ನೀಡಲಾಗುತ್ತದೆ ಎಂದರು.

ದಸರಾ ಉದ್ಘಾಟಕರ ಬದಲಾವಣೆ ಕುರಿತಂತೆ ಇದುವರೆಗೂ ಜಿಲ್ಲಾಡಳಿತಕ್ಕೆ ಯಾವುದೇ ದೂರು ಸಲ್ಲಿಕೆಯಾಗಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆ.31ರಂದು ಉಚಿತ ಪರಿಚಯ ಕಾರ್ಯಕ್ರಮ

ಮೈಸೂರು, ಆ. 28–ಋಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ ಆ.31 ರಂದು ಸಂಜೆ 6ಕ್ಕೆ ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ ವನ್ನು ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಋಷಿ ಸಂಸ್ಕೃತಿ ವಿದ್ಯಾಕೇಂದ್ರ ದಲ್ಲಿ ಏರ್ಪಡಿಸಲಾಗಿದೆ. ಸೆ.1ರಿಂದ 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಆರಂಭವಾಗ ಲಿದೆ. ಮಾಹಿತಿಗೆ ಮೊ. 9448458050 ಸಂಪರ್ಕಿಸಬಹುದು.

ಗಣೇಶ ಚತುರ್ಥಿಯಂದು ದಸರಾ ಗಜಪಡೆಗೆ ಶಾಸ್ತ್ರೋಕ್ತ ಪೂಜೆ



ಮೈಸೂರು ಅರಮನೆ ಆವರಣದಲ್ಲಿ ಗಣಪತಿ ಹಬ್ಬದ ಅಂಗವಾಗಿ ದಸರಾ ಗಜಪಡೆಗೆ ಪೂಜೆ ಸಲ್ಲಿಸಲಾಯಿತು.

ಮೈಸೂರು, ಆ.28(ಎಂಟಿವೈ)– ದಸರಾ ಮಹೋತ್ಸವದ ಗಜಪಡೆಗೆ ಗಣಪತಿ ಹಬ್ಬದ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ಬುಧವಾರ ತುಲಾ ಲಗ್ನದಲ್ಲಿ ಶಾಸ್ತ್ರೋಕ್ತವಾಗಿ ಪೂಜೆ ನೆರವೇರಿಸಿ, ಮೋದಕ ಸೇರಿದಂತೆ ವಿವಿಧ ತಿನಿಸು ತಿನ್ನಿಸಿ ಉಪಚರಿಸಲಾಯಿತು.

ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಾಲಯದ ಪಕ್ಕದ ಮೈದಾನ ದಲ್ಲಿ ಸಂಪ್ರದಾಯದಂತೆ ದಸರಾ ಗಜ ಪಡೆಗೆ ಅರ್ಚಕ ಎಸ್.ವಿ.ಪ್ರಹ್ಲಾದರಾವ್ ನೇತೃತ್ವದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳಿಗೆ ಪೂಜೆ ಸಲ್ಲಿಸಲಾಯಿತು. ಬುಧವಾರ ಬೆಳಗ್ಗೆ 11 ಗಂಟೆಗೆ ಶುಭ ತುಲಾ ಲಗ್ನದಲ್ಲಿ ಎಲ್ಲಾ ಆನೆಗಳನ್ನು ಸಾಲಾಗಿ ನಿಲ್ಲಿಸಿ, ಪಾದ ತೊಳೆದು, ಅರಿಶಿನ, ಕುಂಕುಮ, ಶ್ರೀಗಂಧ ಹಚ್ಚಿ, ಬಳಿಕ ಎಲ್ಲಾ ಆನೆಗಳ ಸೊಂಡಿಲಿನ ಮೇಲೆ ಶ್ರೀಗಂಧದಲ್ಲಿ 'ಓಂಕಾರ' ಬರೆದು ಪೂಜೆಗೆ ಅಣಿಗೊಳಿಸಲಾಯಿತು.

ಬಳಿಕ ಎಲ್ಲಾ ಆನೆಗಳಿಗೆ ಪ್ರತ್ಯಕ್ಷ ಗಣಪತಿ ಪೂಜೆ, ಮಂತ್ರಪುಷ್ಪ ಅರ್ಚನೆ ಮಾಡಿ, ನವಧಾನ್ಯ ಪೂಜೆ ಮಾಡಲಾಯಿತು. ಪೂಜೆ ಮಾಡಿದ ಬಳಿಕ ಎಲ್ಲಾ ಆನೆಗಳಿಗೆ ನವಧಾನ್ಯ ತಿನ್ನಿಸಲಾಯಿತು. ಆ ನಂತರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಆನೆಗಳಿಗೆ ಬಾಳೆಹಣ್ಣು ಆಪಲ್, ಮೂಸಂಬಿ, ದ್ರಾಕ್ಷಿ, ಪೈನಾಪಲ್ ಸೇರಿದಂತೆ ವಿವಿಧ ಹಣ್ಣು, ಕಬ್ಬು, ಬೆಲ್ಲ ನೀಡಿದರು.

ಅಲ್ಲದೆ, ಗಣಪತಿಗೆ ಇಷ್ಟವಾದ ಮೋದಕ, ಕಡಬು, ಕರ್ಜಿಕಾಯಿ, ಚಕ್ಕುಲಿ, ನಿಪ್ಪಣ್ಣು, ಹೋಳಿಗೆ ಸೇರಿದಂತೆ 21 ಬಗೆಯ ತಿಂಡಿಯನ್ನು ಆನೆಗಳಿಗೆ ನೀಡಿ, ಮಂಗಳಾರತಿ, ಪೂಜೆ ನೆರವೇರಿಸಲಾಯಿತು. ಅಂತಿಮವಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಎಲ್ಲಾ ಆನೆಗಳಿಗೂ ದೃಷ್ಟಿ ತೆಗೆದ ಬೂದುಕುಂಬಳ ಕಾಯಿ ಹೊಡೆದರು.

ಈ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಎಡಿಸಿ ಡಾ.ಪಿ.ಶಿವರಾಜ್, ಮೈಸೂರು ವೃತ್ತದ ಸಿಎಫ್ ರವಿಶಂಕರ್, ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್‌ಗಳಾದ ಪರಮೇಶ್, ಶಂಕರೇಗೌಡ, ಡಿಸಿಪಿಗಳಾದ ಬಿ.ಎನ್.ಬಿಂದುಮಣಿ, ಸುಂದರ್ ರಾಜ್, ಎಸಿಎಫ್ ರವೀಂದ್ರ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಭದ್ರತಾ ಪಡೆ ಎಸಿಪಿ ಚಂದ್ರಶೇಖರ್, ಪಶುವೈದ್ಯ ಡಾ.ಆದರ್ಶ್, ಆರ್‌ಎಫ್‌ಓ ನದೀಮ್, ಸಹಾಯಕರಾದ ರಂಗರಾಜ್, ಅಕ್ರಮ್ ಪಾಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಾಂಪ್ರದಾಯಿಕ ಪೂಜೆ ಮಾಡಲಾಗಿದೆ

ಗಣಪತಿ ಹಬ್ಬದ ಅಂಗವಾಗಿ ಪ್ರತ್ಯಕ್ಷ ಗಣಪತಿ ಎಂದೇ ಭಾವಿಸುವ ದಸರಾ ಗಜಪಡೆಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗಿದೆ. ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳಿಗೆ ಕಳೆದ 28 ವರ್ಷದಿಂದಲೂ ಗಣೇಶ ಹಬ್ಬದ ದಿನ ಪೂಜೆ ಮಾಡಿಕೊಂಡು ಬರಲಾಗುತ್ತಿದೆ. ನವಧಾನ್ಯ ಪೂಜೆ ಮಾಡಿ, ಎಲ್ಲಾ ಆನೆಗಳಿಗೆ ಹಣ್ಣು, ತಿಂಡಿಗಳನ್ನು ನೀಡಲಾಗಿದೆ.

– ಎಸ್.ವಿ.ಪ್ರಹ್ಲಾದ್‌ರಾವ್, ಆನೆ ಪೂಜೆ ಮಾಡುವ ಅರ್ಚಕ

ಪ್ರೇಮ ಪ್ರಕರಣ; ತಲೆ ಮೇಲೆ ಕಲ್ಲು ಎತ್ತಿ ಹಾಕಿ ಯುವಕನ ಹತ್ಯೆ; ಓರ್ವನ ಬಂಧನ

ಮಳವಳ್ಳಿ, ಆ.28–ಅಪ್ರಾಪ್ತ ಬಾಲಕಿಯ ಪ್ರೇಮ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿರುವ ಘಟನೆ ಮಳವಳ್ಳಿ ತಾಲೂಕು ರಾಮಂದೂರು ಕೆರೆ ಬಳಿ ಮಂಗಳವಾರ ನಡೆದಿದೆ. ಕಲ್ಕುಣಿ ಗ್ರಾಮದ ಶಿವಸ್ವಾಮಿ ಎಂಬುವವರ ಪುತ್ರ ಮಂಜು(21) ಹತ್ಯೆಯಾದವನಾಗಿದ್ದು, ಈತನ ಸಂಬಂಧಿಕನೇ ಆದ ರಾಮನಾಥಮೋಳೆ ಗ್ರಾಮದ ದರ್ಶನ್(19) ಎಂಬಾತನನ್ನು ಕಿರುಗಾವಲು ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿವರ: ಕೊಲೆಯಾದ ಮಂಜು ಮತ್ತು ರಾಮನಾಥಮೋಳೆ ಗ್ರಾಮದ ದರ್ಶನ್ ಸಂಬಂಧಿಕರಾಗಿದ್ದು, ಮಂಜು ಕಳೆದ ಎರಡು ವರ್ಷಗಳಿಂದ ಅಪ್ರಾಪ್ತ ಬಾಲಕಿಯನ್ನು ಪ್ರೀತಿಸುತ್ತಿದ್ದ. ಕೆಲ ತಿಂಗಳ ಹಿಂದೆ ಇಬ್ಬರೂ ಮನೆ ಬಿಟ್ಟು ಓಡಿ ಹೋಗಿದ್ದರು. ನಂತರ ಬಾಲಕಿಯು ಗ್ರಾಮಕ್ಕೆ ವಾಪಾಸ್ ಆಗಿದ್ದಳು. ಇನ್ನೂ ಒಂದು ತಿಂಗಳಿಗೆ ಬಾಲಕಿಗೆ 18 ವರ್ಷ ತುಂಬುತ್ತಿತ್ತು ಹೀಗಾಗಿ ಮಂಜು ಆಕೆಯನ್ನು ಮತ್ತೇ ಕರೆದುಕೊಂಡು ಹೋಗಿ ಮಧುವೆಯಾಗಬಹುದು ಎಂದು ಭಾವಿಸಿದ್ದ ದರ್ಶನ್, ಮಂಗಳವಾರ ಸಂಜೆ ವೇಳೆ ರಾಮಂದೂರು ಕೆರೆಗೆ ಮೀನು ಹಿಡಿಯಲು ತೆರಳಿದ್ದ ಮಂಜು ಜೊತೆ ಜಗಳ ತೆಗೆದಿದ್ದಾನೆ, ಜಗಳ ವಿಕೋಪಕ್ಕೆ ಹೋಗಿ ಮಂಜು ತಲೆ ಮೇಲೆ ಕಲ್ಲು ಎತ್ತಾಕಿ ದರ್ಶನ್ ಕೊಲೆ ಮಾಡಿದ್ದಾನೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಮ್ಮಯ್ಯ, ಡಿವೈಎಸ್ಪಿ ವಿ.ಕೃಷ್ಣಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ಸಂಬಂಧ ಕೊಲೆಯಾದ ಮಂಜು ತಂದೆ ನೀಡಿದ ದೂರನ್ನು ಆಧರಿಸಿ ಕಿರುಗಾವಲು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಹಲಗೂರು ಸಿಪಿಐ ಬಿ.ಎಸ್.ಶ್ರೀಧರ್, ಕಿರುಗಾವಲು ಪಿಎಸ್‌ಐ ಡಿ.ರವಿಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ದರ್ಶನ್‌ನನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾರುರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಚಿನ್ನಯ್ಯನ ಮಂಪರು ಪರೀಕ್ಷೆಗೆ ಸೌಜನ್ಯ ತಾಯಿ ಒತ್ತಾಯ



ಚಿನ್ನಯ್ಯ

ಬೆಳ್ತಂಗಡಿ, ಆ.28– 2012ರಲ್ಲಿ ಧರ್ಮಸ್ಥಳದಲ್ಲಿ ನಡೆದಿದ್ದ 17 ವರ್ಷದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಕ್ಕಾಗಿ ಸಂತ್ರಸ್ತೆಯ ತಾಯಿ ಕುಸುಮಾವತಿ ಹೊಸದಾಗಿ ದೂರು ದಾಖಲಿಸಿದ್ದಾರೆ.

ಹಲವು ಶವಗಳನ್ನು ಹೂತಿಟ್ಟಿದ್ದೆ ಎಂದು ಹೇಳಿಕೆ ನೀಡಿದ್ದ ಸಾಕ್ಷಿ–ದೂರುದಾರ ಚಿನ್ನಯ್ಯನ ಮಂಪರು ಪರೀಕ್ಷೆ ನಡೆಸುವಂತೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಖ್ಯಸ್ಥ ಪ್ರಣಬ್ ಮೊಹಂತಿ ಅವರನ್ನು ಒತ್ತಾಯಿಸಿದ್ದಾರೆ. ಆ.24 ರಂದು ಪ್ರಸಾರವಾದ ಟಿವಿ ಸಂದರ್ಶನವೊಂದರಲ್ಲಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆಗೆ ಕಾರಣರಾದವರ ಹೆಸರನ್ನು ರವಿ ಪೂಜಾರಿ ಎಂಬುವರು ತನಗೆ ತಿಳಿಸಿದ್ದಾಗಿಯೂ, ತದನಂತರ ಆತನಿಗೆ ದೇವಾಲಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ಹಣ ನೀಡಿ, ಹತ್ಯೆ ಮಾಡಿದ್ದಾರೆ ಎಂದು ಚಿನ್ನಯ್ಯ ಆರೋಪಿಸಿ ದ್ದಾನೆ ಎಂಬುದನ್ನು ಅವರು ಉಲ್ಲೇಖಿಸಿದ್ದಾರೆ. ಈ ಹಿಂದೆ ಅನೇಕ ಶವಗಳನ್ನು ಹೂತು ಹಾಕಲಾಗಿದ್ದ ಸ್ಥಳದಲ್ಲಿಯೇ ಸೌಜನ್ಯಳ ಶವ ಪತ್ತೆಯಾಗಿತ್ತು. ಅಪರಾಧ ಮುಚ್ಚಿಹಾಕುವ ಭಾಗವಾಗಿ ಆಕೆಯ ದೇಹವನ್ನು ಹೂತು ಹಾಕಲು ಪ್ರಯತ್ನ ನಡೆದಿರಬಹುದು ಎಂಬ ಗಂಭೀರ ಅನುಮಾನವನ್ನು ಇದು ಹುಟ್ಟುಹಾಕುತ್ತದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

16ನೇ ವರ್ಷದ ಗಣಪತಿ ಪ್ರತಿಷ್ಠಾಪನೆ



ಮೈಸೂರಿನ ಹಿನಕಲ್‌ನಲ್ಲಿ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕರ ಬಳಗದ ವತಿಯಿಂದ 16ನೇ ವರ್ಷದ ಗಣಪತಿ ಪ್ರತಿಷ್ಠಾಪನೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಧರ್ಮಸ್ಥಳ ವಿರುದ್ಧದ ಷಡ್ಯಂತ್ರ ಖಂಡಿಸಿ ಸೆ.1 ರಂದು ಧರ್ಮಸ್ಥಳದಲ್ಲಿ ಧರ್ಮಸಭೆ

ರಾಜ್ಯಾದ್ಯಂತ ಲಕ್ಷಾಂತರ ಜನರು ಭಾಗಿ; ನಗರ ಬಿಜೆಪಿ ಅಧ್ಯಕ್ಷ ನಾಗೇಂದ್ರ ಹೇಳಿಕೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಆ.28(ಬಿಎಲ್ ಯು)– ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಖಂಡಿಸಿ ಸೆಪ್ಟಂಬರ್ 1 ರಂದು ಧರ್ಮ ಸ್ಥಳದಲ್ಲಿ ಬಿಜೆಪಿ ಧರ್ಮಸಭೆ ಆಯೋಜಿಸಿದ್ದು, ಮೈಸೂರು ಸೇರಿದಂತೆ ರಾಜ್ಯಾದ್ಯಂತ ಒಂದೂವರೆ ಲಕ್ಷ ಜನರು ಸೇರುತ್ತೇವೆ ಎಂದು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ತಿಳಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳದಲ್ಲಿ ಧರ್ಮ ಸಭೆ ನಡೆಸುವ ಮೂಲಕ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ಬೆಂಬಲ ಸೂಚಿಸುತ್ತೇವೆ ಎಂದರು.

ಧರ್ಮಸ್ಥಳದ ಬಗ್ಗೆ ಹಲವು ವರ್ಷ ಗಳಿಂದ ಅಪಪ್ರಚಾರ ನಡೆಯುತ್ತಲೆ ಇದೆ. ಆದರೆ ಯಾವುದೇ ಖಚಿತ ಸಾಕ್ಷ್ಯಾಧಾರ ವಿಲ್ಲದೆ ಸರ್ಕಾರ ಎಸ್‌ಐಟಿ ರಚನೆ ಮಾಡಿದೆ. ಈ ಮೂಲಕ ಧರ್ಮಸ್ಥಳದ ವಿರುದ್ಧ ಸರ್ಕಾರವೇ ಹುನ್ನಾರ ನಡೆಸಿದೆ ಎಂದು ನಾಗೇಂದ್ರ ಆರೋಪಿಸಿದರು.

ದೂರು ನೀಡಿದ ಚಿನ್ನಯ್ಯನನ್ನು ಎಸ್‌ಐಟಿ ಮೊದಲು ವಿಚಾರಣೆ ನಡೆಸಬೇಕಿತ್ತು, ತರುವಾಯ ಆತ ನೀಡುತ್ತಿರುವ ಹೇಳಿಕೆ ನಿಜವೇ ಎಂದು ಖಚಿತಪಡಿಸಿಕೊಂಡು ತನಿಖೆ ಮಾಡಬೇಕಿತ್ತು. ಆದರೆ ಆತ ನೀಡಿದ ಹೇಳಿಕೆಯನ್ನು ನಂಬಿ ಎಸ್‌ಐಟಿನವರು ನೇತ್ರಾವತಿ ನದಿ ತಟದಲ್ಲಿ ಶವಕ್ಕಾಗಿ ಅಗೆಯಿತು. ಈಗ ಅಲ್ಲಿ ಏನೂ ಸಿಗದ ಕಾರಣ ಎಸ್‌ಐಟಿ ಮಾತ್ರವಲ್ಲದೆ ಸರ್ಕಾರ ಕೂಡ ಮುಜುಗರಕ್ಕೊಳಗಾಗಿದೆ ಎಂದು ಆರೋಪಿಸಿದರು.

ಈ ಹಿನ್ನೆಲೆ ಧರ್ಮಸ್ಥಳದ ವಿರುದ್ಧ ನಡೆಯುತ್ತಿರುವ ಹುನ್ನಾರ ಖಂಡಿಸಿ ಬಿಜೆಪಿ ಸೆಪ್ಟೆಂಬರ್ 1 ರಂದು ಧರ್ಮ ಸ್ಥಳದಲ್ಲಿ ಧರ್ಮಸಭೆ ಆಯೋಜಿಸಿದೆ ಎಂದು ನಾಗೇಂದ್ರ ತಿಳಿಸಿದರು.

ಚಾಮುಂಡಿಬೆಟ್ಟ ಹಿಂದೂಗಳಿಗೆ ಸೇರಿದೆ ಎಂದು ಪುನರ್ ಸ್ಪಷ್ಟಪಡಿಸದಿದ್ದರೆ ಬಲಿದಾನದ ಹೋರಾಟ

ಮೈಸೂರಿನ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಸೇರಿದೆ ಎಂದು ನಾಳೆ ಸಂಜೆಯೊಳಗೆ ಖಚಿತವಾಗಿ ಹೇಳದಿದ್ದರೆ ಬಲಿದಾನದಂತಹ ಉಗ್ರ ಹೋರಾಟ ಮಾಡುತ್ತೇವೆ ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಎಚ್ಚರಿಸಿದರು.

ನಗರದ ಬಿಜೆಪಿ ಕಚೇಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಸೇರಿಲ್ಲ ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.

ಚಾಮುಂಡೇಶ್ವರಿ ದೇವಾಲಯ ಹಿಂದೂಗಳಿಗೆ ಸೇರಿಲ್ಲ ಎಂಬ ಹೇಳಿಕೆ ಕಾಂಗ್ರೆಸ್‌ನ ಟೂಲ್ ಕಿಟ್ ನಿಂದ ಹೊರ ಬಂದ ವಿಚಾರವಾಗಿದೆ. ಈ ಮೂಲಕ ಹಿಂದೂ ಧರ್ಮದ ವಿರುದ್ಧ ಕಾಂಗ್ರೆಸ್ ಎಂತಹ ದ್ವೇಷ ಭಾವನೆ ಹೊಂದಿದೆ ಎಂಬುದನ್ನು ಇದು ತೋರಿಸುತ್ತದೆ. ನಗರ ನಕ್ಸಲರ ಜೊತೆ ಸೇರಿಕೊಂಡ ಕಾಂಗ್ರೆಸ್ ಇಂತಹ ಹೇಳಿಕೆ ನೀಡುತ್ತಿದೆ ಎಂದು ಆಪಾದಿಸಿದರು. ಚಾಮುಂಡೇಶ್ವರಿ ದೇವಾಲಯ ಹಿಂದೂ ಧರ್ಮ ಹಾಗೂ ಮುಜರಾಯಿ ಇಲಾಖೆಗೆ ಸೇರಿದೆ ಎಂದು ಸರ್ಕಾರ ಸ್ಪಷ್ಟಪಡಿಸಲಿ. ನಾಳೆ ಸಂಜೆ ಒಳಗೆ ಈ ಬಗ್ಗೆ ಸ್ಪಷ್ಟನೆ ನೀಡದಿದ್ದರೆ ರಾಜ್ಯಾದ್ಯಾಂತ ಗಂಭೀರ ಹೋರಾಟ ರೂಪಿಸಬೇಕಾಗುತ್ತದೆ ಎಂದು ಮಹೇಶ್ ಎಚ್ಚರಿಕೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಅಲ್ಪ ಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ನಗರ ಕಾರ್ಯದರ್ಶಿ ಗಿರಿಧರ್, ಒಬಿಸಿ ಮೋರ್ಚಾ ಅಧ್ಯಕ್ಷ ರಾಜೇಶ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಶಿಕ್ಷಣವನ್ನೇ ಆಸ್ತಿಯನ್ನಾಗಿಸಿಕೊಳ್ಳಬೇಕು

ಮೈಸೂರು ಜಿಪಂ ಸಿಇಓ ಯುಕೇಶ್ ಕುಮಾರ್ ಕಿವಿಮಾತು



ಕರ್ನಾಟಕ ರಾಜ್ಯ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಮೈಸೂರು, ಆ.28– ವಿದ್ಯಾರ್ಥಿಗಳು ಗುರಿ ಇಟ್ಟುಕೊಂಡು ಸಾಧನೆ ಮಾಡುವುದರ ಮೂಲಕ ಶಿಕ್ಷಣವನ್ನೇ ಆಸ್ತಿಯನ್ನಾಗಿ ಮಾಡಿಕೊಳ್ಳಬೇಕೆಂದು ಮೈಸೂರು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಹೇಳಿದರು.

ಕರ್ನಾಟಕ ರಾಜ್ಯ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ಘಟಕದ ವತಿಯಿಂದ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿರು.

ನಾನು ಚಿಕ್ಕಂದಿನಲ್ಲಿ ಉತ್ತಮ ವಿದ್ಯಾರ್ಥಿಯಾಗಿದ್ದೆ. ಯುಪಿಎಸ್ಸಿ ತರಬೇತಿಯಲ್ಲಿಯೂ ನನಗೆ ಚಿನ್ನದ ಪದಕ ಬಂದಿತ್ತು. ಅದು ನಮ್ಮ ತಂದೆ ತಾಯಿಯ ಪುಣ್ಯದ ಫಲ. ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ, ವಿದ್ಯಾರ್ಥಿ ಜೀವನದ ಬಹುಮುಖ್ಯ ಘಟ್ಟಗಳಾಗಿದ್ದು ಶ್ರದ್ಧೆಯಿಂದ ಓದಬೇಕು. ಗುರಿ ಇಟ್ಟುಕೊಂಡು ಸಾಧನೆ ಮಾಡುವ ಮೂಲಕ ನಿಮ್ಮ ವಿದ್ಯೆಯನ್ನೇ ಆಸ್ತಿಯಾಗಿ ಮಾಡಿಕೊಂಡು ತಂದೆ–ತಾಯಿ ಹಾಗೂ ಸಮಾಜದ ಗೌರವ ಹೆಚ್ಚಿಸಬೇಕು ಎಂದು ಸಲಹೆ ನೀಡಿದರು.

ಪಿಡಿಓಗಳು ಸ್ಥಳೀಯ ಹಂತದಲ್ಲಿ ಗ್ರಾಮಸ್ಥರೊಂದಿಗೆ ಸಾಮರಸ್ಯ ಕಾಯ್ದುಕೊಂಡು ಹೊಂದಾಣಿಕೆ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಬೇಕು. ಜೊತೆಗೆ ತಮ್ಮ ಆರೋಗ್ಯ ಮತ್ತು ಕೌಟುಂಬಿಕ ಜೀವನಕ್ಕೂ ಸಮಯ ನೀಡಬೇಕು. ನಿವೃತ್ತರಾದ ಜಿಪಂ ಉಪಕಾರ್ಯದರ್ಶಿ ಕೃಷ್ಣರಾಜು ಹಾಗೂ ಪಿಡಿಓಗಳು ಉತ್ತಮ ಕೆಲಸ ಮಾಡಿದ್ದಾರೆ, ಇವರೆಲ್ಲರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ ಜಿಪಂ ಉಪಕಾರ್ಯದರ್ಶಿಗಳಾದ ಬಿ.ಎಂ.ಸವಿತ, ಭೀಮಪ್ಪ ಕೆ.ಲಾಳಿ, ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಸಿ.ಕೃಷ್ಣ, ಜೆರಾಲ್ಡ್ ರಾಜೇಶ್, ಧರಣೇಶ್, ಪ್ರೇಮ್ ಕುಮಾರ್ ಕುಲದೀಪ್, ಎ.ಎನ್.ರವಿ, ಹೊಂಗಯ್ಯ, ಸುನಿಲ್ ಕುಮಾರ್, ಪಿ.ಎಸ್.ಅನಂತರಾಜು, ಜಿಲ್ಲಾ ಪಿಡಿಓ ಸಂಘದ ಅಧ್ಯಕ್ಷ ಕೆ.ರುಕ್ಮಾಂಗದ, ಉಪಾಧ್ಯಕ್ಷ ಮೊಹಮ್ಮದ್ ಇಸ್ತಾಕ್, ಖಜಾಂಚಿ ಸಿ.ಪ್ರಕಾಶ್, ರಾಘವೇಂದ್ರ ಪ್ರಸನ್ನ, ಟಿ.ಸೌಮ್ಯಲತಾ, ಮಹದೇವಸ್ವಾಮಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರಾರು, ಬೆಂಗಳೂರಿನ ಕುಡ್ಲು ಎಸ್.ಆರ್.ಕೆ. ಗಾರ್ಡನ್ಸ್‌ನ, ಮನೆ ನಂ. 204ರಲ್ಲಿ ವಾಸವಾಗಿರುವ ಅನಿಲ್ ಕುಮಾರ್ ರವರ ಮಗ ಶ್ರೀ ಅನುಜ್ ಖೇಮ್ಕ ಮತ್ತು ಇವರ ಧರ್ಮಪತ್ನಿ ಶ್ರೀಮತಿ ಮೇಘ ಮಿಟ್ಟಲ್ ಇವರುಗಳ ಮಾಲೀಕತ್ವಕ್ಕೆ ಒಳಪಟ್ಟ ಹಾಗೂ ಸಂಪೂರ್ಣ ಸ್ವಾಧೀನಾನುಭವದಲ್ಲಿರುವ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಇಲವಾಲ ಗ್ರಾಮದ ವಸತಿ ಉದ್ದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನ್ಯಕ್ರಾಂತ ಆದೇಶ ಸಂಖ್ಯೆ LNDC10001181 ರಂತೆ ಭೂ ಪರಿವರ್ತನೆಗೊಂಡ ಇನ್ನೂ ಅಭಿವೃದ್ಧಿಪಡಿಸದ ಸರ್ವೇ ನಂ. 242/3ರ ವಿಸ್ತೀರ್ಣ 1 ಎಕರೆ 0–18 ಗುಂಟೆ ಜಮೀನು ಇದಕ್ಕೆ ಚೆಕ್ಕುಬಂದಿ ಪೂರ್ವಕ್ಕೆ: ಹೂಯಿಲಾಳು ಗ್ರಾಮದ ಗಡಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ವೆ ನಂ. 242/1ರ ಜಮೀನು ಮತ್ತು ದಕ್ಷಿಣಕ್ಕೆ: ಸರ್ವೆ ನಂ. 242/2ರ ಜಮೀನು ಈ ಮಧ್ಯೆ ಇರುವ ಮೇಲ್ಕಂಡ ಜಮೀನನ್ನು ನಮ್ಮ ಕಕ್ಷಿದಾರರು ನೋಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆಯಲು ಇಚ್ಛಿಸಿರುವುದು ಸರಿಯಷ್ಟೆ. ಆದುದರಿಂದ ಸಾರ್ವಜನಿಕರಲ್ಲಿ ಈ ಮೂಲಕ ತಿಳಿಯಪಡಿಸುವುದೇನೆಂದರೇ, ಈ ಮೇಲ್ಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದಾದರು ತಂಟೆ ತಕರಾರುಗಳು ಹಾಗೂ ಕ್ಲೇಮ್‌ಗಳಿದ್ದ ಪಕ್ಷದಲ್ಲಿ ಈ ಸಾರ್ವಜನಿಕ ತಿಳುವಳಿಕೆಯು ಪ್ರಕಟಣೆಯಾದ 7 ದಿನಗಳ ಒಳಗಾಗಿ ನಮ್ಮನ್ನು ಈ ಕೆಳಕಂಡ ವಿಳಾಸದ ಕಛೇರಿಯಲ್ಲಿ ಸೂಕ್ತ ದಾಖಲೆಗಳ ಸಮೇತವಾಗಿ ಖುದ್ದಾಗಿ ಅಥವಾ ಲಿಖಿತ ರೂಪದಲ್ಲಿ ತಮ್ಮ ತಕರಾರುಗಳನ್ನು ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾವುದೇ ತಂಟೆ ತಕರಾರುಗಳು ಸದರಿ 7 ದಿನಗಳ ಒಳಗಾಗಿ ನಮ್ಮನ್ನು ತಲುಪದಿದ್ದ ಪಕ್ಷದಲ್ಲಿ, ನಮ್ಮ ಕಕ್ಷಿದಾರರು ಮೇಲೆ ಹೇಳಿದ ಸ್ವತ್ತನ್ನು ಖರೀದಿಸಲು ಸಂಪೂರ್ಣವಾಗಿ ಕಾನೂನು ಸಮ್ಮತವಾಗಿ ಹಕ್ಕುಳ್ಳವರಾಗಿರುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿರುತ್ತದೆ.

Sd/- N. Mahadevaswamy, B.A.L., LL.B., Advocate / Legal Advisor,
No. 376/A, 12th Cross, Ramakrishna Nagara "G" Block, Mysore-22.
Mob: 9448038689

ದಿನಾಂಕ: 28-8-2025
ಸ್ಥಳ: ಮೈಸೂರು

ದಿ ಗ್ರಾಜ್ಯುಯೇಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

Ph: 0821-2442864 / 4252926 / 2430087
ನೋಂದಣಿ ಸಂಖ್ಯೆ : 156/17 ದಿ: 09–11–1923
ಚಾಮರಾಜ ಜೋಡಿ ರಸ್ತೆ, ಮೈಸೂರು–570004
RBI LICENCE NO.UBD-KAN-0018-P

ದಿ: 28–08–2025

ಪ್ರಕಟಣೆ

ಮೇಲ್ಕಂಡ ಬ್ಯಾಂಕಿನಲ್ಲಿ ಒಂದು ಸಾಮಾನ್ಯ ಖಾಲಿ ಇದ್ದ ನಿರ್ದೇಶಕ ಸ್ಥಾನಕ್ಕೆ ಶ್ರೀಯುತ ಎ. ಬಂಗಾರಗಿರಿವಾಸ ರವರು ಅವಿರೋಧವಾಗಿ ಚುನಾಯಿತರಾಗಿರುವುದರಿಂದ ದಿನಾಂಕ: 31–08–2025 ರಂದು ಹಾರ್ಡ್‌ವಿಕ್ ವಿದ್ಯಾ ಸಂಸ್ಥೆಯಲ್ಲಿ ನಡೆಯಬೇಕಾಗಿದ್ದ ಚುನಾವಣೆಯು ನಡೆಯುವುದಿಲ್ಲವೆಂಬ ವಿಷಯವನ್ನು ಮಾನ್ಯ ಸದಸ್ಯರುಗಳ ಅವಗಾಹನೆಗಾಗಿ ತರಲಾಗಿರುತ್ತದೆ.

ಸಹಿ/-
ಪ್ರಭಾರ ವ್ಯವಸ್ಥಾಪಕರು

21ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಜಯಲಕ್ಷ್ಮಿ
ನಿಧನ: 29.08.2004

ನೀವು ನಮ್ಮನಗಲಿ ಇಂದಿಗೆ 21 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ ಶ್ರೀ ದಾಸಪ್ಪ, ಮಕ್ಕಳು, ಅಳಿಯಂದಿರು, ಮಗಳು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗ, ಹೆಬ್ಬಾಳು, ಮೈಸೂರು

2ನೇ ವರ್ಷದ ಸವಿನೆನಪು



ಕೃಷ್ಣೇಗೌಡ
ನಿಧನ: 28–08–2023
(ನಂದಿನಿ ಎಲೆಕ್ಟ್ರಿಕಲ್ಸ್, ಪಿರಿಯಾಪಟ್ಟಣ)
ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ, ನಿಮ್ಮ ನೆನಪು ಪ್ರೀತಿ –ವಾತ್ಸಲ್ಯಗಳು ನಮ್ಮ ಮನದಲ್ಲಿ ಸದಾ ಹಸಿರು, ನಿಮ್ಮ ಸದ್ಗುಣ, ಆದರ್ಶ ನಮಗೆ ದಾರಿದೀಪ, ಸದಾ ನಿಮ್ಮನ್ನು ನೆನೆಯುವ, ಧರ್ಮಪತ್ನಿ ಶ್ರೀಮತಿ ಎನ್.ಸಿ.ಸುಮಂಗಳ, ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು ಪಿರಿಯಾಪಟ್ಟಣ

SRI SHAMBULINGESHWARA EDUCATION TRUST (R)

WANTED

College Section-B.Ed/B.P.Ed/M.P.Ed		
Assistant Professor	M.A.,/M.Sc.,/M.Com., M.Ed., M.P. Ed.,	Any Pedagogy
High School Section		
Assistant Teacher	M.Sc. B.Ed.(PM)	Maths

Inteview Date : 3/9/2025 Walkin @ S.S.E.T campus, Jayanthinagara, Pandavapura Tq. Mandya 571427
Ph: 7338138083 / 9845036918

ನಿಧನ



ದಿ.ನಂದಕುಮಾರ್
ಮೈಸೂರಿನ ಲೋಕನಾಯಕ ನಗರದ ವಾಸವಾಗಿದ್ದು ದಿನಾಂಕ. 28.08.2025 ರಂದು ನಿಧನರಾದರು. ಮೃತರ ಅಂತ್ಯಕ್ರಿಯೆಯನ್ನು ದಿ.29.08.2025 ಶುಕ್ರವಾರ ಮಧ್ಯಾಹ್ನ 12.30 ಕ್ಕೆ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು ಮೃತರ: ಧರ್ಮ ಪತ್ನಿ ಶ್ರೀಮತಿ ಲತಾ, ಮಗ ಗಗನ್, ಮಗಳು ಮೇಘನ, ಸೊಸೆ, ಅಳಿಯಂದಿರು, ಕುಟುಂಬಸ್ಥರು, ಸ್ನೇಹಿತರು ಹಾಗೂ ಅರ್ಜುನಹಳ್ಳಿ ಗ್ರಾಮಸ್ಥರು.

6ನೇ ವರ್ಷದ ಸವಿನೆನಪು



ಶ್ರೀ ಬಿ.ನಿಂಗೇಗೌಡ
ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಮಕ್ಕಳು, ಮೊಮ್ಮಕ್ಕಳು ಕುಟುಂಬವರ್ಗದವರು. ಡಿ ಸಾಲುಂಡಿ

26ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 26 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನ ಮನೆಯಲ್ಲಿ ಚಿರಸ್ಥಾಯಿಯಾಗಿರುತ್ತದೆ.

ಆರ್.ಮಹದೇವಪ್ಪ
(ಮೈಸೂರು ನಗರ ರೆವಿನ್ಯೂ ಬಡಾವಣೆಗಳ ಒಕ್ಕೂಟದ ಅಧ್ಯಕ್ಷರು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರು, ತಾಲೂಕು ಪಂಚಾಯಿತಿ ಸದಸ್ಯರು ಮತ್ತು ಮಂಡಲ್ ಪಂಚಾಯಿತಿ ಸದಸ್ಯರು ಹಾಗೂ ಟಿಎಪಿಸಿಎಂಎಸ್ ಸದಸ್ಯರು)

ಇಂತಿ:
ಶ್ರೀ ಸಿ.ಎಸ್.ರಜಿನಿ ಅಣ್ಣಯ್ಯ, ನಗರಪಾಲಿಕೆ ಮಾಜಿ ಸದಸ್ಯರು. 36ನೇ ವಾರ್ಡಿನ ಜನತೆ, ಯರಗನಹಳ್ಳಿ, ಭುಗತಗಳ್ಳಿ ಗ್ರಾಮಸ್ಥರು ಹಾಗೂ ಆರ್.ರಂಗಯ್ಯ ಕುಟುಂಬ ವರ್ಗದವರಿಂದ ಗೌರವ ನಮನ

ದಿ ಭಾವಸಾರ ಕ್ಷತ್ರಿಯ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಸ್ಥಾಪನೆ : 1916, ರಿ.ನಂ: 888 ಮೊ: 8904771073
ಎ' ಶ್ರೇಣಿಯ ಸಹಕಾರ ಸಂಘ, ಕಛೇರಿ ವಿಳಾಸ : ನಂ. 279, ಬೆಂಕಿನವಾಬ ರಸ್ತೆ, ಮಂಡಿಮೊಹಲ್ಲಾ, ಮೈಸೂರು–570021

ಆಹ್ವಾನ ಪತ್ರಿಕೆ

ಮೇಲ್ಕಂಡ ನಮ್ಮ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ 109ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 31/08/2025ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ ಲಷ್ಕರ್ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ "ಶ್ರೀ ಪಾಂಡುರಂಗ ವಿಠ್ಠಲ ಸ್ವಾಮಿ" ದೇವಸ್ಥಾನದ ಆವರಣ, ಮೈಸೂರು, ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್.ವಿ.ಸತ್ಯನಾರಾಯಣ ಸುಲಾಖೆ ರವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ನಿರ್ದೇಶಕ ಮಂಡಳಿಯು ತೀರ್ಮಾನಿಸಿದೆ. ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದ್ದು, ಪತ್ರಿಕೆ ತಲುಪದೇ ಇದ್ದಲ್ಲಿ ಇದೇ "ಆಹ್ವಾನ ಪತ್ರಿಕೆ" ಎಂದು ತಿಳಿದು ದಯಮಾಡಿ, ಸದಸ್ಯರು ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

109ನೇ ಸಾಲಿನ ಸರ್ವನ ಸದಸ್ಯರ ವಿಶೇಷ ಸೂಚನೆ :
ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಷೇರು ಪಾಸ್‌ಬುಕ್ ಅಥವಾ ಐ.ಡಿ. ಕಾರ್ಡ್ ಅನ್ನು ಕಡ್ಡಾಯವಾಗಿ ತರಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಶ್ರೀ ಎಸ್.ವಿ.ಸತ್ಯನಾರಾಯಣ ಸುಲಾಖೆ, ಅಧ್ಯಕ್ಷರು

16ನೇ ವರ್ಷದ ಸವಿನೆನಪು



ಬಿ.ವಿ.ಪುಟ್ಟನಂಜಮ್ಮ
ಸದಾ ನಿಮ್ಮ ನೆನಪಿನಲ್ಲಿರುವ: ವಿಜಯೇಂದ್ರಕುಮಾರ, ವೀಣಾ, ಶಿಲ್ಪಶ್ರೀ ವಿ, ಆದರ್ಶಬಾಬು.ವಿ ಮತ್ತು ಕುಟುಂಬ

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು